ಸಂಪುಟ: 05 ಸಂಚಿಕೆ: 241 ಪುಟಗಳು: 08 ಶನಿವಾರ 15 ನವೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ


ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಿಮ್ಮ ಮೊದಲ ಗೆಲುವಿನ ಬಳಿಕ ವಿಶ್ರಾಂತಿ ತೆಗೆದುಕೊಳ್ಳಬೇಡಿ. ಏಕೆಂದರೆ, ಒಂದೊಮ್ಮೆ ನೀವು ಎರಡನೇ ಪ್ರಯತ್ನದಲ್ಲಿ ವಿಫಲರಾದರೆ ನಿಮ್ಮ ಮೊದಲ ಗೆಲುವು ಕೇವಲ ಅದೃಷ್ಟ ಎಂದು ಹೇಳಲು ಹೆಚ್ಚಿನ ತುಟಿಗಳು ಕಾಯುತ್ತಿರುತ್ತವೆ.

## ಡಬ್ಬಲ್ ಸೆಂಚುರಿ ಎನ್‌ಡಿಎಗೆ ಜಯಭೇರಿ

**243 ಕ್ಷೇತ್ರ**
ಎನ್‌ಡಿಎ ಮೈತ್ರಿಕೂಟ
**202**
ಕ್ಷೇತ್ರಗಳಲ್ಲಿ ಗೆಲುವು







**ಫಿರ್ ಏಕ್ ಬಾರ್ ಎನ್‌ಡಿಎ ಸರ್ಕಾರ್**

**ಕಟ್ಟಾ ಸರ್ಕಾರ ಇನ್ನೆಂದಿಗೂ ಬರೋದಿಲ್ಲ ಮೋದಿ ವಾಗ್ದಾಳಿ**

**ಚುನಾವಣಾ ಆಯೋಗದ ಪರ ಮೋದಿ ಬ್ಯಾಟಿಂಗ್**

**ಛಠಿ ಮೈಯಾ ಷಷ್ಠಿ ದೇವತೆ ನೆನೆದ ಪ್ರಧಾನಿ**

• **ಉದಯವಾಹಿನಿ, ಪಾಟ್ನಾ**


ರಾಜಕೀಯ ಪ್ರತಿಷ್ಠೆಗೆ ಕಾರಣವಾಗಿದ್ದ ಬಿಹಾರ ವಿಧಾನ ಸಭಾ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಮ್ಯಾಜಿಕ್ ನಂಬರ್ ದಾಟಿ ಭರ್ಜರಿ ಗೆಲುವು ಸಾಧಿಸಿದೆ. ಈ ಬಾರಿ ಅಧಿಕಾರಕ್ಕೆ ಬಂದೇ ಬರುತ್ತೇವೆ ಎನ್ನುವ ಭರವಸೆಯಲ್ಲಿದ್ದ ಮಹಾಘಟ್‌ಬಂಧನ್ ನಾಯಕರಿಗೆ ತೀವ್ರ ಮುಖಭಂಗವಾಗಿದೆ. 243 ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟ ಒಟ್ಟು 202 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರೆ, ಮಹಾಘಟ್‌ಬಂಧನ್ ಮೈತ್ರಿಕೂಟ 35 ಕ್ಷೇತ್ರದಲ್ಲಿ ಗೆಲುವು ಸಾಧಿಸಿದೆ. ಇನ್ನು ಒಟ್ಟು 6 ಕ್ಷೇತ್ರದಲ್ಲಿ ಇತರೆ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಬಿಹಾರದ ಒಟ್ಟು 243 ಕ್ಷೇತ್ರಗಳಿಗೆ ನವೆಂಬರ್ 6 ಮತ್ತು ನವೆಂಬರ್ 11ರಂದು ಎರಡು ಹಂತದಲ್ಲಿ ಮತದಾನ ನಡೆದಿದ್ದು, ಶುಕ್ರವಾರ ಫಲಿತಾಂಶ ಪ್ರಕಟಗೊಂಡಿದೆ.

ಬಿಹಾರದಲ್ಲಿ ಎನ್‌ಡಿಎ ಪ್ರಚಂಡ ವಿಜಯ ಸಾಧಿಸಿದೆ. ಬಿಹಾರದಲ್ಲಿ ಕಟ್ಟಾ ಸರ್ಕಾರ್ ಇನ್ನೆಂದಿಗೂ ಬರೋದಿಲ್ಲ ಎಂದು ಪ್ರಧಾನಿ ಮೋದಿ ವಿಜಯೋತ್ಸವ ಭಾಷಣದಲ್ಲಿ ಆರ್‌ಜೆಡಿ ವಿರುದ್ಧ ವಾಗ್ದಾಳಿ ನಡೆಸಿದರು. ದೆಹಲಿಯಲ್ಲಿರುವ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಸಂಜೆ ನಡೆದ ಕಾರ್ಯಕ್ರಮದಲ್ಲಿ ಷಷ್ಠಿ ದೇವತೆ ಛಠಿ ಮೈಯಾ ನೆನೆಯುತ್ತಾ ಮಾತನಾಡಿದರು. ನಾನು ಚುನಾವಣೆ ವೇಳೆ ಜಂಗಲ್ ರಾಜ್ ಮತ್ತು ಕಟ್ಟಾ ಸರ್ಕಾರ್ ಬಗ್ಗೆ ಮಾತನಾಡಿದಾಗೆಲ್ಲ ಆರ್‌ಜೆಡಿಯಿಂದ ಯಾವುದೇ ವಿರೋಧ ಕೇಳಿಬರುತ್ತಿರಲಿಲ್ಲ. ಆದ್ರೆ, ಕಾಂಗ್ರೆಸ್‌ಗೆ ಮಾತ್ರ ನೋವುಂಟಾಗಿತ್ತು. ನಾನು ಮತ್ತೆ ಹೇಳುವೆ ಬಿಹಾರದಲ್ಲಿ ಕಟ್ಟಾ ಸರ್ಕಾರ್ ಇನ್ನೆಂದಿಗೂ ಬರಲ್ಲ ಎಂದು ನುಡಿದರು.

**ಫಿರ್ ಏಕ್ ಬಾರ್ ಎನ್‌ಡಿಎ ಸರ್ಕಾರ್:** ನಾವು ಜನರ ಸೇವಕರು, ನಮ್ಮ ಕಠಿಣ ಪರಿಶ್ರಮದಿಂದ ಜನರನ್ನ ಸಂತೋಷಪಡಿಸುತ್ತಲೇ ಇರುತ್ತೇವೆ. ಲಕ್ಷಾಂತರ ಜನರ ಹೃದಯ ಕದ್ದಿದ್ದೇವೆ. ಅದಕ್ಕಾಗಿಯೇ ಇಡಿ ಬಿಹಾರ ಫಿರ್ ಏಕ್ ಬಾರ್ ಎನ್‌ಡಿಎ ಸರ್ಕಾರ್ ಅಂತ ಹೇಳಿದೆ. ಎನ್‌ಡಿಎಗೆ ಪ್ರಚಂಡ ಗೆಲುವು ನೀಡಬೇಕು ಅಂತ ಬಿಹಾರದ ಜನರನ್ನ ಕೇಳಿಕೊಂಡಿದ್ದೆ, ನನ್ನ ಒಂದು ಕೂಗಿಗೆ ಅವರು ಕಿವಿಗೊಟ್ಟಿದ್ದಾರೆ. 2010 ರಿಂದ ಈಚೆಗೆ ಮೈತ್ರಿಕೂಟಕ್ಕೆ ಅತಿದೊಡ್ಡ ಅಂತರದ ಗೆಲುವು ನೀಡಿದ್ದಾರೆ. ಅದಕ್ಕಾಗಿ ಇಡೀ ಎನ್‌ಡಿಎ ಕುಟುಂಬದ ಪರವಾಗಿ, ನಾನು ಬಿಹಾರದ ಎಲ್ಲಾ ಜನರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ಭಾವುಕರಾದರು.

**ಚುನಾವಣಾ ಆಯೋಗದ ಪರ ಮೋದಿ ಬ್ಯಾಟಿಂಗ್:** ಈ ಚುನಾವಣೆಯು ಭಾರತೀಯ ಚುನಾವಣಾ ಆಯೋಗದ ಮೇಲಿನ ಸಾರ್ವಜನಿಕರ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ. ಏಕೆಂದ್ರೆ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಮತದಾನದ ಪ್ರಮಾಣ ಹೆಚ್ಚಾಗಿದೆ. ಅವಕಾಶ ವಂಚಿತರು, ಶೋಷಿತರಿಂದಲೂ ಮತದಾನ ಪ್ರಮಾಣ ಹೆಚ್ಚಾಗಿರುವುದು ಚುನಾವಣಾ ಆಯೋಗದ ಗಮನಾರ್ಹ ಸಾಧನೆಯಾಗಿದೆ ಎಂದು ಹೊಗಳಿದರು.

**ನಕ್ಸಲ್ ಪೀಡಿತ ಪ್ರದೇಶದಲ್ಲೂ ಶಾಂತಿಯುತ ಮತದಾನ:** ಒಂದು ಕಾಲದಲ್ಲಿ ಮಾವೋವಾದಿ ಭಯೋತ್ಪಾದನೆಯಿಂದ ಪ್ರಾಬಲ್ಯ ಹೊಂದಿದ್ದ ಅದೇ ಬಿಹಾರ ಇದು. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಮಧ್ಯಾಹ್ನ 3 ಗಂಟೆಗೆಲ್ಲ ಮತದಾನ ಕೊನೆಗೊಳ್ಳುತ್ತಿತ್ತು. ಆದರೆ ಈ ಚುನಾವಣೆಯಲ್ಲಿ, ಬಿಹಾರದ ಜನರು ಭಯವಿಲ್ಲದೇ ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಜಂಗಲ್ ರಾಜ್ ಆಳ್ವಿಕೆ ಸಮಯದಲ್ಲಿ ಮತದಾನ ಕೇಂದ್ರಗಳಲ್ಲಿ ಹಿಂಸಾಚಾರ ಬಹಿರಂಗವಾಗಿ ನಡೆಯುತ್ತಿತ್ತು. ಮತಪೆಟ್ಟಿಗೆಗಳನ್ನ ಲೂಟಿ ಮಾಡಲಾಗುತ್ತಿತ್ತು. ಆದರಿಂದು ಅದೇ ಶಾಂತಿಯುತ ಮತದಾನ ಮಾಡುತ್ತಿದೆ, ದಾಖಲೆ ಪ್ರಮಾಣದ ಮತದಾನ ನೋಡುತ್ತಿದೆ. ಪ್ರತಿಯೊಬ್ಬರೂ ತಮ್ಮ ಆಯ್ಕೆಯ ಪ್ರಕಾರವೇ ಮತ ಚಲಾಯಿಸಿದ್ದಾರೆ ಎಂದು ಮೋದಿ ಶ್ಲಾಘಿಸಿದರು. ವಿಜಯೋತ್ಸವ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜನಾಥ್ ಸಿಂಗ್, ಜೆಪಿ ನಡ್ಡಾ ಉಪಸ್ಥಿತರಿದ್ದರು.



1 ಬಿಹಾರದಲ್ಲಿ ಅಭೂತಪೂರ್ವ ಜನಾದೇಶದೊಂದಿಗೆ ಮತ್ತೆ ಅಧಿಕಾರ ಹಿಡಿದ ಎನ್‌ಡಿಎ

2 ಡಬಲ್ ಎಂಜಿನ್ ಸರ್ಕಾರದ ಮೋಡಿ

3 ಹೆಚ್ಚಿನ ಮುಸ್ಲಿಂ ಜನಸಂಖ್ಯೆಯನ್ನು ಹೊಂದಿರುವ ಬಿಹಾರದ ಅಲಿನಗರ ಕ್ಷೇತ್ರದಲ್ಲಿ ಬಿಜೆಪಿಗೆ ಮೊದಲ ಬಾರಿಗೆ ಗೆಲುವು

"ಇದು ವಿಕಸಿತ್ ಬಿಹಾರದ ಮೇಲೆ ನಂಬಿಕೆಯಿಟ್ಟ ಬಿಹಾರಿಗಳ ಗೆಲುವು. ಅಭಿವೃದ್ಧಿ ಹೊಂದಿದ ಬಿಹಾರದಲ್ಲಿ ನಂಬಿಕಯಿಡುವ ಪ್ರತಿಯೊಬ್ಬ ಬಿಹಾರಿಯ ಗೆಲುವು ಇದು. ಜಂಗಲ್ ರಾಜ್ ಮತ್ತು ತುಷ್ಟೀಕರಣ ರಾಜಕೀಯ ಮಾಡುವವರು ಯಾವುದೇ ವೇಷ ಧರಿಸಿ ಬಂದರೂ, ಅವರಿಗೆ ಲೂಟಿ ಮಾಡೋದಕ್ಕೆ ಅವಕಾಶ ಸಿಗಲ್ಲ ಅನ್ನೋದಕ್ಕೆ ಇದೇ ಸಾಕ್ಷಿ.

–**ಅಮಿತ್ ಶಾ,** ಗೃಹ ಸಚಿವ



**ಬಿಹಾರದ ಅತಿ ಕಿರಿಯ ಶಾಸಕಿ ಎನಿಸಿಕೊಂಡ ಗಾಯಕಿ ಮೈಥಿಲಿ**

**ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಜಾನಪದ ಗಾಯಕಿ-ರಾಜಕಾರಣಿಯಾಗಿ ಬದಲಾದ ಮೈಥಿಲಿ ಠಾಕೂರ್ ಅವರು ಅಲಿನಗರ ವಿಧಾನಸಭಾ ಕ್ಷೇತ್ರದಿಂದ ಆರ್‌ಜೆಡಿಯ ಪ್ರಭಾವಿ ನಾಯಕ ಬಿನೋದ್ ಮಿಶ್ರ ಅವರನ್ನು 12,000 ಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲಿಸುವ ಮೂಲಕ ಬಿಹಾರ ವಿಧಾನಸಭೆಗೆ ಚುನಾಯಿತರಾದ ಅತ್ಯಂತ ಕಿರಿಯ ನಾಯಕಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಜೂನ್‌ನಲ್ಲಿ 25 ವರ್ಷಕ್ಕೆ ಕಾಲಿಟ್ಟ ಮೈಥಿಲಿ ವಿಧಾನಸಭಾ ಚುನಾವಣೆ ಕೆಲವೇ ತಿಂಗಳುಗಳ ಮೊದಲು ಬಿಜೆಪಿ ಸೇರಿದ್ದರು. ಅವರ ಈ ಗೆಲುವು ದರ್ಭಂಗಾದ ಅಲಿನಗರ ಕ್ಷೇತ್ರವನ್ನು ಬಿಜೆಪಿ ಪಕ್ಷವು ಮೊದಲ ಬಾರಿಗೆ ಗೆಲ್ಲಲು ಕಾರಣವಾಯಿತು. ಅಲಿನಗರ ಕ್ಷೇತ್ರ ಗಮನಾರ್ಹ ಮುಸ್ಲಿಂ ಜನಸಂಖ್ಯೆಯನ್ನು ಹೊಂದಿದ್ದು, ಬಿಜೆಪಿ ಅಭ್ಯರ್ಥಿ ಗೆಲವು ಸಾಧಿಸಿರುವುದು ಗಮನಾರ್ಹ. ಇದಕ್ಕೂ ಮೊದಲು, ಬಿಹಾರದ ಅತ್ಯಂತ ಕಿರಿಯ ಶಾಸಕರು 2005 ರಲ್ಲಿ 26 ವರ್ಷದ ಸ್ವತಂತ್ರ ಅಭ್ಯರ್ಥಿ ತೌಸೀಫ್ ಆಲಂ ಆಗಿದ್ದರು, ನಂತರ ಆರ್‌ಜೆಡಿಯ ತೇಜಸ್ವಿ ಯಾದವ್ ಇದ್ದರು.**



**ಸೋಲು ಖಚಿತ ಆಗುತ್ತಿದ್ದಂತೆ ವೋಟ್ ಚೋರಿ ಎಂದ ಸಿದ್ದರಾಮಯ್ಯ ಕೆಂಡ ಕಾರಿದ್ದಾರೆ. ಬಿಹಾರ ಚುನಾವಣೆಯಲ್ಲಿ ಯಾಕೆ ಹಿನ್ನಡೆ ಆಗಿದೆ. ಯಾಕೆ ಜನ ವೋಟ್ ಹಾಕಿಲ್ಲ, ಒಬಿಸಿ ಯಾಕೆ ಇಷ್ಟು ದೊಡ್ಡ ಬಹುಮತದಲ್ಲಿದೆ ಎನ್ನುವುದು ಗೊತ್ತಿಲ್ಲ. ಇಲ್ಲೂ ಮತಗಳ್ಳತನ ಆಗಿದೆ. ಆದರೆ ನಾವು ಜನರ ತೀರ್ಪು ಒಪ್ಪಿಕೊಳ್ಳಬೇಕು. ಕಾಂಗ್ರೆಸ್ ಅಜೆಂಡಾ ಓಬಿಸಿ ಅವರೇ ಬಿಹಾರದಲ್ಲಿ ಕೈ ಹಿಡಿದಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿ, ನಿತೀಶ್ ಕುಮಾರ್ ಯಾರು ಅವರು ಓಬಿಸಿ ಅಲ್ಲವಾ ಎಂದು ಸಿಡಿಮಿಡಿಗೊಂಡರು.**

### ರಾಹುಲ್ ಯಾತ್ರೆ ಮಾಡಿದ್ದ ಕ್ಷೇತ್ರಗಳಲ್ಲೂ ಕಾಂಗ್ರೆಸ್‌ಗೆ ಹಿನ್ನಡೆ

**ಬಿಹಾರ ಚುನಾವಣಾ ಫಲಿತಾಂಶದಿಂದ ಕಾಂಗ್ರೆಸ್‌ಗೆ ಭಾರಿ ಮುಖಭಂಗ ಆಗಿದೆ. ಬಿಜೆಪಿ ವಿರುದ್ಧ 'ವೋಟ್ ಚೋರಿ' ಆರೋಪ ಮಾಡಿ ರಾಹುಲ್ ಗಾಂಧಿ ಯಾತ್ರೆ ನಡೆಸಿದ ಭಾಗಗಳಲ್ಲೂ ಕಾಂಗ್ರೆಸ್‌ಗೆ ದೊಡ್ಡ ಹಿನ್ನಡೆಯಾಗಿದೆ. ಕಳೆದ ಕೆಲವು ಚುನಾವಣೆಗಳಲ್ಲಿ ಪಕ್ಷವು ಮತಗಳನ್ನು ಕ್ರೋಢೀಕರಿಸಲು ಸಹಾಯ ಮಾಡಿದೆ ಎಂದು ನಂಬಿದ್ದ ಹಿಂದಿನ ಎರಡು ಯಾತ್ರೆಗಳಿಂದ ರಾಹುಲ್ ಗಾಂಧಿ ಉತ್ತೇಜಿತರಾಗಿದ್ದರು. ಈ ವರ್ಷದ ಆಗಸ್ಟ್‌ನಲ್ಲಿ ರಾಹುಲ್ ಗಾಂಧಿ ಮತದಾರರ ಅಧಿಕಾರ ಯಾತ್ರೆಯನ್ನು ಕೈಗೊಂಡಿದ್ದರು. ಯಾತ್ರೆಯು ಸಸಾರಂನಿಂದ ಪ್ರಾರಂಭವಾಗಿ ಪಾಟ್ನಾದಲ್ಲಿ ಕೊನೆಗೊಂಡಿತ್ತು. 25 ಜಿಲ್ಲೆಗಳು ಮತ್ತು 110 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡು ಸುಮಾರು 1,300 ಕಿ.ಮೀ.ಗಳನ್ನು ಕ್ರಮಿಸಿತ್ತು.**

## ಪಿಯು ಮಕ್ಕಳಿಗೂ ಬಿಸಿಯೂಟಕ್ಕೆ ಚಿಂತನೆ: ಮಧು ಬಂಗಾರಪ್ಪ

• **ಉದಯವಾಹಿನಿ, ಬೆಂಗಳೂರು**

ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಯ 11 ಮತ್ತು 12ನೇ ತರಗತಿ ಮಕ್ಕಳಿಗೆ ವಿಸ್ತರಿಸಲು ಕ್ರಮಕೈಗೊಳ್ಳಲಾಗುವುದು. ಪಿಯು ಕಾಲೇಜು ವಿದ್ಯಾರ್ಥಿಗಳಿಗೂ ಸೌಲಭ್ಯ ಒದಗಿಸುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಬೆಳಗಾವಿ ಜಿಲ್ಲೆ ಬೈಲಹೊಂಗಲದ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿ ರಾಕೇಶ್ ಪ್ರಶ್ನೆಗೆ ಉತ್ತರಿಸಿದ ಅವರು, ಪಿಯು ಕಾಲೇಜುಗಳಿಗೂ ಮಧ್ಯಾಹ್ನದ ಬಿಸಿಯೂಟ ಒದಗಿಸಬೇಕಿದ್ದರೆ ಬಜೆಟ್‌ನಲ್ಲೇ ಘೋಷಣೆ ಮಾಡಬೇಕು. ಈ ಕುರಿತು ಚರ್ಚಿಸಲಾಗುವುದು ಎಂದರು.

ರಾಕೇಶ್ ಹೇಳಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ತರಗತಿಗಳು ನಡೆಯುತ್ತವೆ.

ಮನೆಗಳಿಂದ ಬೆಳಗ್ಗೆ ಬೇಗನೆ ಹೊರಡುತ್ತಾರೆ. ಹಾಗಾಗಿ, ಪಿಯು ಕಾಲೇಜುಗಳಿಗೂ ಮಧ್ಯಾಹ್ನದ ಊಟವನ್ನು ವಿಸ್ತರಿಸಬೇಕು ಎಂಬ ಬೇಡಿಕೆ ಸೂಕ್ತವಾಗಿದೆ. ಮೊದಲು 8ನೇ ತರಗತಿಯವರೆಗೆ ಇದ್ದ ಮೊಟ್ಟೆ ವಿತರಣೆಯನ್ನು 9 ಮತ್ತು 10ನೇ ತರಗತಿಗೆ ವಿಸ್ತರಿಸಿದ್ದೇವೆ. ಮುಂದಿನ ಶೈಕ್ಷಣಿಕ ವರ್ಷದಿಂದ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ ಎಲ್ಲಾ ವಿದ್ಯಾರ್ಥಿಗಳಿಗೂ ಮಧ್ಯಾಹ್ನದ ಬಿಸಿಯೂಟ ಜಾರಿಗೆ ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದು ಹೇಳಿದರು.

## ಕಬ್ಬಿನ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಾನಿಗೆ ಪರಿಹಾರ: ಸಚಿವ

• **ಉದಯವಾಹಿನಿ, ಬೆಂಗಳೂರು**

ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿರುವ ಸಮೀರವಾಡಿಯ ಗೋದಾವರಿ ಬಯೋ ರಿಫೈನರೀಸ್ ಲಿಮಿಟೆಡ್ ಬಳಿ ಗುರುವಾರ ಸಂಭವಿಸಿದ ಬೆಂಕಿ ಪ್ರಕರಣ ಸಂಬಂಧ ಉಂಟಾಗಿರುವ ಹಾನಿಗೆ ಸಾಧ್ಯವಿರುವ ಪರಿಹಾರ ನೀಡಲಾಗುವುದು.

ಅಲ್ಲದೆ, ಈ ದುರಂತದ ಬಗ್ಗೆ ತನಿಖೆಗೆ ಆದೇಶ ಮಾಡಲಾಗುವುದು ಎಂದು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ. ಉಪವಿಭಾಗಾಧಿಕಾರಿ ನೇತೃತ್ವದ ಅಧಿಕಾರಿಗಳ ತಂಡ ಹಾನಿಯ ಪ್ರಮಾಣದ ಸಮೀಕ್ಷೆಯನ್ನು ಆರಂಭಿಸಿದೆ. ಎಷ್ಟು ಪರಿಹಾರ ನೀಡಬೇಕೆಂಬ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ. ಎಷ್ಟು ಸಾಧ್ಯವಿದೆಯೋ ಅಷ್ಟು ಪರಿಹಾರವನ್ನು ಸರಕಾರದಿಂದ ಇಲ್ಲವೇ ಬೆಳಗಾವಿಯ ಎಸ್.ನಿಜಲಿಂಗಪ್ಪ ಸಂಸ್ಥೆಯಿಂದ ನೀಡಲಾಗುವುದು ಎಂದು ಹೇಳಿದರು.

## ನಿಮ್ಮ ನಾಯಕತ್ವದಿಂದ ಬೆಂಗಳೂರು ರಸ್ತೆ ಗುಂಡಿ ಮುಕ್ತ

• **ಉದಯವಾಹಿನಿ, ಬೆಂಗಳೂರು**

ನಗರದ ರಸ್ತೆ, ಪಾದಚಾರಿ ಮಾರ್ಗ ಈಗ ಸ್ವಚ್ಛಂದವಾಗಿದೆ. ಕಸದ ರಾಶಿ ಮತ್ತು ಗುಂಡಿಗಳಿಂದ ನಗರವು ಮುಳುಗಿ ಹೋಗುವ ಸ್ಥಿತಿಯಿಂದ ಪಾರು ಮಾಡಿದ್ದಕ್ಕೆ ಡಿಕೆ ಶಿವಕುಮಾರ್ ಅವರಿಗೆ ಧನ್ಯವಾದ ಎಂದು ಕೈಗಾರಿಕೋದ್ಯಮಿ ಮತ್ತು ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಶಾ ಅವರು ಟ್ವೀಟ್ ಮಾಡಿದ್ದಾರೆ. ಕೈಗಾರಿಕೋದ್ಯಮಿ ಮತ್ತು ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್–ಶಾ ಅವರು ಶುಕ್ರವಾರ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಾರ್ಯವೈಖರಿಯನ್ನು ಶ್ಲಾಘಿಸಿದ್ದಾರೆ.

ಈ ಹಿಂದೆ ಬೆಂಗಳೂರಿನ ಹದಗೆಟ್ಟ ರಸ್ತೆಗಳು ಮತ್ತು ಕಸದ ಸಮಸ್ಯೆಯ ಬಗ್ಗೆ ಡಿಕೆಶಿ ಅವರೊಂದಿಗೆ ಆನ್‌ಲೈನ್‌ನಲ್ಲಿ ತೀವ್ರ ವಾಗ್ವಾದ ನಡೆಸಿದ್ದ ಅವರು, ಇದೀಗ ನಗರದಾದ್ಯಂತ ಸ್ವಚ್ಛವಾದ ಫುಟ್‌ಪಾತ್‌ಗಳು ಮತ್ತು ಡಾಂಬರೀಕರಣಗೊಂಡ ರಸ್ತೆಗಳನ್ನು ಕಂಡು ಮೆಚ್ಚುಗೆ ಸೂಚಿಸಿದ್ದಾರೆ. ಗುಂಡಿ ಮುಕ್ತನಗರವನ್ನಾಗಿ ಮಾಡಿದ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಧನ್ಯವಾದಗಳು. ಈ ಮಹತ್ವದ ಅಭಿವೃದ್ಧಿಯನ್ನು ಮುಂದುವರಿಸಿಕೊಂಡು ಹೋಗಿ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಯುಕ್ತರಿಗೂ ಅಭಿನಂದನೆ ಸಲ್ಲಬೇಕು ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಉದ್ಯಮಿ ಕಿರಣ್ ಮಜುಂದಾರ್ ಶಾ ಅವರು ಪೋಸ್ಟ್ ಹಂಚಿಕೊಂಡಿದ್ದಾರೆ.

## ಶಾಲಾ ಮಕ್ಕಳ ವಿಶ್ವದ ಅತಿದೊಡ್ಡ ಚಲನಚಿತ್ರೋತ್ಸವಕ್ಕೆ ಚಾಲನೆ

• **ಉದಯವಾಹಿನಿ, ಬೆಂಗಳೂರು**

ಶಾಲಾ ಸಿನಿಮಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ 2025ಕ್ಕೆ ಮಕ್ಕಳ ದಿನಾಚರಣೆಯಂದು ಬೆಂಗಳೂರಿನ ದೆಹಲಿ ಪಬ್ಲಿಕ್ ಶಾಲೆಯಲ್ಲಿ ಚಾಲನೆ ನೀಡಲಾಯಿತು. ಈ ಉದ್ಘಾಟನಾ ಕಾರ್ಯಕ್ರಮದಲ್ಲಿ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಗಣ್ಯರು ಭಾಗವಹಿಸಿದ್ದರು. ಈ ವಿಶೇಷ ಕಾರ್ಯಕ್ರಮದಲ್ಲಿ ಫ್ರಾನ್ಸ್, ಸ್ಪೇನ್, ಜರ್ಮನಿ, ಯುಎಇ, ರಷ್ಯಾ, ಕಿರ್ಗಿಸ್ತಾನ್ ಸೇರಿದಂತೆ ಇನ್ನೂ ಅನೇಕ ದೇಶಗಳಗಳ ಮಕ್ಕಳು ಭಾಗವಹಿಸಿದ್ದರು. ಈ ಚಲನಚಿತ್ರೋತ್ಸವವು ನವೆಂಬರ್ 14ರಿಂದ 30 ನಡುವೆ ಭಾರತದಾದ್ಯಂತ ವಿವಿಧ ಶಾಲೆಗಳಲ್ಲಿ ಜರುಗಲಿದೆ. ಈ ಚಲನಚಿತ್ರ ಉತ್ಸವ ಭಾರತದಾದ್ಯಂತ 40,000ಕ್ಕೂ ಅಧಿಕ ಸರ್ಕಾರಿ ಮತ್ತು 1,000 ಖಾಸಗಿ ಶಾಲೆಗಳನ್ನು ತಲುಪುವ ಗುರಿ ಹೊಂದಿದೆ.

ಕಾರ್ಯಕ್ರಮವು ಸಿನಿಮಾಗಳ ಮೂಲಕ ಸೃಜನಶೀಲತೆ, ಸಹಾನುಭೂತಿ ಮತ್ತು ಕಲಿಕೆಯನ್ನು ರಾಷ್ಟ್ರವ್ಯಾಪಿ ಹರಿಡಿಸುವ ಗುರಿ ಹೊಂದಿದೆ.

## ಪರೋಲ್‌ಗಾಗಿ ಕೈದಿಗಳಿಗೆ ಸುಳ್ಳು ದಾಖಲೆ ನೀಡುವ ವೈದ್ಯರ ಬಗ್ಗೆ ಗಮನವಿರಲಿ

• **ಉದಯವಾಹಿನಿ, ಬೆಂಗಳೂರು**

ಸಜಾಬಂದಿಗಳಿಗೆ ಪರೋಲ್ ಪಡೆಯಲು ಅನುಕೂಲವಾಗುವಂತೆ ಸುಳ್ಳು ವೈದ್ಯಕೀಯ ದಾಖಲೆಗಳನ್ನು ನೀಡುತ್ತಿರುವ ವೈದ್ಯರ ಬಗ್ಗೆ ಸರಕಾರ ಗಮನ ಹರಿಸಬೇಕು ಎಂದು ಹೈಕೋರ್ಟ್ ಮೌಖಿಕ ಸೂಚನೆ ನೀಡಿದೆ.

**ಸರಕಾರಕ್ಕೆ ಹೈಕೋರ್ಟ್ ಮೌಖಿಕ ಸೂಚನೆ**

ಅನಾರೋಗ್ಯ ಪೀಡಿತ ತಾಯಿಗೆ ಚಿಕಿತ್ಸೆ ಕಲ್ಪಿಸಲು ಪರೋಲ್ ಮಂಜೂರು ಮಾಡುವಂತೆ ಕೋರಿ ಅಪರಾಧ ಪ್ರಕರಣವೊಂದರಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಸಜಾಬಂದಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಸೂಚನೆ ನೀಡಿತು. ಇದೇ ವೇಳೆ, ಅರ್ಜಿದಾರನ ತಾಯಿಯ ಅನಾರೋಗ್ಯವನ್ನು ಪರಿಗಣಿಸಿ, ಆತನಿಗೆ ಪರೋಲ್ ಮಂಜೂರು ಮಾಡಿ ಆದೇಶಿಸಿತು.

ಇದಕ್ಕೂ ಮುನ್ನ ವಿಚಾರಣೆ ವೇಳೆ ಅನಾರೋಗ್ಯದಿಂದ ಬಳಲುತ್ತಿರುವ ತಾಯಿಯ ವೈದ್ಯಕೀಯ ದಾಖಲೆ ಆಧರಿಸಿ ಪರೋಲ್ ನೀಡಬೇಕೆಂದು ಅರ್ಜಿದಾರನ ಪರ ವಕೀಲರು ಮನವಿ ಮಾಡಿದರು. ಆಗ ಸರಕಾರದ ಪರ ವಕೀಲರು, ಹಲವು ಪ್ರಕರಣಗಳಲ್ಲಿ ಪರೋಲ್ ಕೋರುವ ಸಜಾಬಂದಿಗಳು, ತಮ್ಮ ಅರ್ಜಿಯೊಂದಿಗೆ ಸಲ್ಲಿಸಿದ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಒಂದೇ ರೀತಿಯ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿರುವ ಸಂಗತಿ ಗಮನಕ್ಕೆ ಬಂದಿದೆ ಎಂದು ಹೇಳಿದರು.



**ಸುಳ್ಳು ದಾಖಲೆ ನೀಡುವ ವೈದ್ಯರ ಬಗ್ಗೆ ಎಚ್ಚರವಹಿಸಿ:** ಸರಕಾರದ ಪರ ವಕೀಲರ ಹೇಳಿಕೆಗೆ ಅಚ್ಚರಿ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು, ಒಂದೇ ರೀತಿಯ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಲಾಗುತ್ತಿದೆಯೇ? ಇದು ನಿಜಕ್ಕೂ ಆಘಾತಕಾರಿ ವಿಚಾರ ಎಂದು ಕಳವಳ ವ್ಯಕ್ತಪಡಿಸಿದರಲ್ಲದೆ, ಯಾವೆಲ್ಲ ಪ್ರಕರಣಗಳಲ್ಲಿ ಒಂದೇ ತರಹದ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಲಾಗಿದೆ. ಅಂತಹ ದಾಖಲೆಗಳನ್ನು ಯಾವ ವೈದ್ಯರು ನೀಡಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ಕಲೆಹಾಕಿ ನ್ಯಾಯಾಲಯಕ್ಕೆ ಸಲ್ಲಿಸಿ. ಆ ಕುರಿತು ಸಮಗ್ರ ತನಿಖೆಗೆ ಆದೇಶಿಸಲಾಗುವುದು. ಇಂತಹ ವಿಚಾರದಲ್ಲಿ ಸುಮ್ಮನೆ ಇರಬಾರದು ಎಂದು ತೀಕ್ಷ್ಣವಾಗಿ ನುಡಿದರು.

ಈ ಕುರಿತು ರಾಜ್ಯ ಅಡ್ವಕೇಟ್ ಜನರಲ್ ಅವರ ಗಮನಕ್ಕೆ ತರಲಾಗುವುದು ಎಂದು ಸರಕಾರದ ಪರ ವಕೀಲರು ತಿಳಿಸಿದರು. ಆಗ ನ್ಯಾಯಪೀಠ, ಸುಳ್ಳು ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿ ಪರೋಲ್ ಪಡೆಯುವುದು ಸರಿಯಲ್ಲ. ಇದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಲಿದೆ. ಇಂತಹ ಬೆಳವಣಿಗೆಗಳ ಮೇಲೆ ರಾಜ್ಯ ಸರಕಾರ ಕಣ್ಣಿಡಬೇಕು. ಸುಳ್ಳು ವೈದ್ಯಕೀಯ ದಾಖಲೆಗಳನ್ನು ವಿತರಿಸುವ ವೈದ್ಯರ ಬಗ್ಗೆ ಎಚ್ಚರಿಸಬೇಕು. ತಪ್ಪಿತಸ್ಥರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮೌಖಿಕವಾಗಿ ಸೂಚಿಸಿತು.

## ತುಂಗಭದ್ರಾ ಜಲಾಶಯ ಅಣೆಕಟ್ಟಿಗೆ ಗೇಟ್ ಅಳವಡಿಕೆ ಎರಡನೇ ಬೆಳೆಗೆ ನೀರು ಇಲ್ಲ

### ತುಂಗಭದ್ರಾ ಜಲಾಶಯದ ಮಂಡಳಿಯ ನಿರ್ಧಾರದಂತೆ ಅಣೆಕಟ್ಟೆಯ 33 ಗೇಟ್ ಅಳವಡಿಕೆ


• **ಉದಯವಾಹಿನಿ, ಬೆಂಗಳೂರು**

ಕೇಂದ್ರ, ಸರಕಾರ ಹಾಗೂ ತುಂಗಭದ್ರಾ ಜಲಾಶಯದ ಮಂಡಳಿಯ ನಿರ್ಧಾರದಂತೆ ಅಣೆಕಟ್ಟೆಯ 33 ಗೇಟ್ ಅಳವಡಿಕೆ ಹಿನ್ನೆಲೆಯಲ್ಲಿ ಎರಡನೇ ಬೆಳೆಗೆ ನೀರಿಲ್ಲ ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಶಿವರಾಜ್ ತಂಗಡಗಿ ಹೇಳಿದ್ದಾರೆ.

ಶುಕ್ರವಾರ ವಿಧಾನಸೌಧದ ಮೂರನೇ ಮಹಡಿಯಲ್ಲಿನ ಸಮ್ಮೇಳನ ಸಭಾಂಗಣದಲ್ಲಿ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ 'ತುಂಗಭದ್ರಾ ಯೋಜನೆ ಹಾಗೂ ವಿಜಯನಗರ ಕಾಲುವೆಗಳ 125ನೇ ನೀರಾವರಿ ಸಲಹಾ ಸಮಿತಿ' ಸಭೆಯ ಬಳಿಕ ಮಾತನಾಡಿದ ಅವರು, ಸರಕಾರಕ್ಕೆ ರೈತರ ಹಿತ ಮುಖ್ಯ ಜೊತೆಗೆ ಅಣೆಕಟ್ಟೆಯ ರಕ್ಷಣೆಯೂ ನಮ್ಮ ಕರ್ತವ್ಯ. ಈ ಹಿನ್ನೆಲೆಯಲ್ಲಿ ಕೊಪ್ಪಳ, ರಾಯಚೂರು, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯ ಎಲ್ಲಾ ಪಕ್ಷದ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ರೈತ ಮುಖಂಡರ ಜೊತೆ ಸಭೆ ನಡೆಸಿ ಒಕ್ಕೊರಲಿನಿಂದ ಈ ಮೇಲ್ಕಂಡ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.



ಡಿಸೆಂಬರ್ ಎರಡನೇ ವಾರದಿಂದ ಹೊಸ 33ಗೇಟ್ ಅಳವಡಿಕೆ ಕಾರ್ಯ ನಡೆಯಲಿದ್ದು, ಜೂನ್ ಅಂತ್ಯಕ್ಕೆ ಈ ಕಾರ್ಯ ಪೂರ್ಣಗೊಳ್ಳಲಿದೆ. ಟೆಂಡರಲ್ಲಿ ಅರ್ಹತೆ ಪಡೆದಿರುವ ಗುಜರಾತ್ ಮೂಲದ ಕಂಪೆನಿಗೆ ಕಾಮಗಾರಿ ನಡೆಸಲು ಕಾರ್ಯಾದೇಶ ನೀಡಲಾಗಿದೆ. ಇದರ ಜೊತೆಗೆ ಕೆಲ ಕಾಲುವೆಗಳ ದುರಸ್ತಿ ಹಾಗೂ ಇನ್ನಿತರ ಅಣೆಕಟ್ಟೆಯ ಸಂಪುರ್ಣ ಸಣ್ಣ ದುರಸ್ತಿಗಳನ್ನು ಇದೇ ಸಂದರ್ಭದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಅವರು ತಿಳಿಸಿದರು.



**ರಾಜ್ಯದ ಪಾಲು 33.01 ಟಿಎಂಸಿ ಉಳಿಯಲಿದೆ. 105 ಟಿಎಂಸಿ ನೀರು ಸಂಗ್ರಹಿಸಲು ಅವಕಾಶ ಇತ್ತು. ಕೇಂದ್ರ ಸರಕಾರ ಮತ್ತು ಬೋರ್ಡ್ ನೀಡಿದ ಸಲಹೆಯಂತೆ ಅಣೆಕಟ್ಟೆಯ ರಕ್ಷಣೆ ದೃಷ್ಟಿಯಿಂದ 80 ಟಿಎಂಸಿ ನೀರನ್ನು ಮಾತ್ರ ಸಂಗ್ರಹಿಸಲಾಗಿದೆ. ಎರಡನೇ ಬೆಳೆಗೆ ಕನಿಷ್ಠ ಕರ್ನಾಟಕಕ್ಕೆ 60 ಟಿಎಂಸಿ ಬೇಕಾಗುತ್ತದೆ. ಕರ್ನಾಟಕದ ಪಾಲು 33.01 ಟಿಎಂಸಿ ನೀರು ಉಳಿಯಲಿದೆ. ಆದರೆ, ಗೇಟ್ ಅಳವಡಿಕೆ ಹಿನ್ನೆಲೆಯಲ್ಲಿ ನೀರು ಒದಗಿಸಲು ಸಾಧ್ಯವಿಲ್ಲ'**

**–ಶಿವರಾಜ್ ತಂಗಡಗಿ, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ**

**ರಾಜಕೀಯ ಮಾಡುವುದು ಸಲ್ಲ:** ನಮಗೆ ರೈತರ ಹಿತ ಮುಖ್ಯ ಜೊತೆಗೆ ಭವಿಷ್ಯದ ದೃಷ್ಟಿಯಿಂದ ಅಣೆಕಟ್ಟೆಯ ರಕ್ಷಣೆ ಬಹಳ ಮುಖ್ಯ ಕೆಲ ಬಿಜೆಪಿ ನಾಯಕರು ರೈತರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ನಾಲ್ಕು ಜಿಲ್ಲೆಯ ಎಲ್ಲಾ ಪಕ್ಷಗಳ ಶಾಸಕರ ಒಮ್ಮತದ ಮೇರೆಗೆ ಈ ತೀರ್ಮಾನ ಕೈಗೊಳ್ಳಲಾಗಿದೆ.

ಈ ಹಿಂದೆ ಜಲಾಶಯದ ಕ್ರಸ್ಟ್ ಗೇಟ್ ಮುರಿದ ಸಂದರ್ಭದಲ್ಲಿ, ಬೋರ್ಡ್‌ನವರು ಅನುದಾನದ ಕೊಡದಿದ್ದರೂ ರಾಜ್ಯ ಸರಕಾರವೇ ಸಂಪೂರ್ಣ ಹಣ ವ್ಯಯಿಸಿ ನೂತನ ಗೇಟ್ ಅಳವಡಿಕೆ ಮಾಡಲಾಗುವುದು ಎಂದು ವಿಧಾನಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದರು. ಆ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ವಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಇದೀಗ ಗೇಟ್ ಅಳವಡಿಕೆ ವೇಳೆ ರಾಜಕೀಯ ಮಾಡುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

**75 ಟಿಎಂಸಿ ನೀರು ಲಭ್ಯವಿದೆ:** ಇದೀಗ ಆ ಪ್ರದೇಶದಲ್ಲಿನ ಬೆಳೆಗಳಿಗೆ ಯಾವುದೇ ತೊಂದರೆಯಾಗದಂತೆ ಜ.10ರ ವರೆಗೆ ನೀರು ಹರಿಸಲಾಗುವುದು.

ಅಲ್ಲದೆ, ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿಗೆ ಕೆರೆಕಟ್ಟೆ ತುಂಬಿಸಲು ನೀರನ್ನು ಸಂಗ್ರಹಿಸಿಟ್ಟುಕೊಳ್ಳಲಾಗುವುದು. ಜಲಾಶಯದಲ್ಲಿನ ನೀರಿನ ಸಂಗ್ರಹ ಲಭ್ಯತೆಯ ಮೇರೆಗೆ ನೀರಿನ ಬಳಕೆ ಮಾಡಲಾಗುತ್ತಿದೆ ಎಂದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,704/Gram24ct ₹11,645/Gram22ct | ಬೆಳ್ಳಿ: ₹173.10/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

### ಸಸ್ವರ ವೇದಮಂತ್ರಗಳು ಇಂದಿಗೂ ಇವೆ ಎಂಬುದೇ ಪರಮಾಶ್ಚರ್ಯ

ಮಾತೃದೇವೋ ಭವ ಪಿತೃದೇವೋ ಭವ ಆಚಾರ್ಯದೇವೋ ಭವ ಅತಿಥಿದೇವೋ ಭವ ಎಂದಿದೆ ವೇದ. ವೇದಗಳ ಕಾಲ ಕ್ರಿ. ಶ ಪೂರ್ವ 1500 ರಿಂದ 50000 ವರ್ಷ ಎನ್ನುವರು ಸಂಶೋಧಕರು. ಇಷ್ಟು ಪ್ರಾಚೀನತೆ ಜಗದ ಇನ್ನಾವ ಸಾಹಿತ್ಯ ಧರ್ಮ ಸಂಸ್ಕೃತಿಗೂ ಇಲ್ಲ. ಬರವಣಿಗೆ ಮುದ್ರಣ ಇಲ್ಲದ ಕಾಲದಲ್ಲಿ ಗುರುವಿನಿಂದ ಶಿಷ್ಯನಿಗೆ ಬಾಯಿಯಿಂದ ಕಿವಿಗೆ ಹರಿದು ಬಂದ ಸಸ್ವರ ವೇದಮಂತ್ರಗಳು ಇಂದಿಗೂ ಇವೆ ಎಂಬುದೇ ಪರಮಾಶ್ಚರ್ಯ. ಡಚ್ಚ ಮಹಮ್ಮದೀಯ ಕ್ರೈಸ್ತರ ಆಕ್ರಮಣ ಎದುರಿಸಿಯೂ ಉಳಿದಿರುವುದು ಈ ಧರ್ಮ ಸಂಸ್ಕೃತಿಯ ಅಂತಸ್ಸತ್ತ್ವ! ವೇದಗಳಲ್ಲಿನ ಜ್ಞಾನ ಕದಿಯಲು ವೇದಾಧ್ಯಯನ ಆರಂಭಿಸಿದ ಜರ್ಮನ್ ದೇಶದ ಮ್ಯಾಕ್ಸ್ಮುಲ್ಲರ್ ಕೊನೆಗೆ ನಿಬ್ಬೆರಗಾಗಿ ತನ್ನ ಹೆಸರನ್ನೇ ಮೋಕ್ಷಮುಲ್ಲರ್ ಎಂದು ಬದಲಾಯಿಸಿಕೊಂಡು ಶರಣಾದ! ಸ್ವಾಮಿ ವಿವೇಕಾನಂದರು ವಿಶ್ವಧರ್ಮಸಮ್ಮೇಳನದಲ್ಲಿ ಭಾಗವಹಿಸಿದ್ದು

ಹಿಂದುಧರ್ಮದ ಪ್ರತಿನಿಧಿಯಾಗಿ! ಅಮೇರಿಕದ ಸಹೋದರ ಸಹೋದರಿಯರೇ! ಎಂಬ ಅವರ ಮಾತು ವಿಶ್ವವನ್ನೇ ಗೆದ್ದಿತ್ತು. ಗಂಡಸರೇ ಹೆಂಗಸರೇ ಎಂದು ಕೇಳಿದ ಕಿವಿಗಳಿಗೆ ಈ ಮಾತು ರಸದೌತಣ ನೀಡಿತ್ತು. ಅಲ್ಲಿನ ಧರ್ಮಗ್ರಂಥಗಳ ತಳದಲ್ಲಿ ಭಗವದ್ಗೀತೆಯನ್ನು ಕಂಡು ವಿದೇಶದ ನೆಲದಲ್ಲಿ ಅವರಾಡಿದ ಮಾತು: ವಿಶ್ವದ ಎಲ್ಲ ಧರ್ಮಗಳೂ ಭಾರತದ ಸನಾತನ ಹಿಂದುಧರ್ಮದ ತಳಹದಿಯ ಮೇಲೆ ನಿಂತಿವೆ ಎಂಬುದಕ್ಕೆ ಇಲ್ಲಿನ ಭಗವದ್ಗೀತೆಯೇ ಸಾಕ್ಷಿ!

# ಮಾನವ ವನ್ಯಜೀವಿ ಸಂಘರ್ಷ ಪ್ರಕೃತಿ ವಿಕೋಪದಂತೆ ಪರಿಗಣಿಸಿ


## ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತಮಟ್ಟದ ಸಭೆ

• ಉದಯವಾಹಿನಿ, ಬೆಂಗಳೂರು

ಮಾನವ-ವನ್ಯಜೀವಿ ಸಂಘರ್ಷವನ್ನು ಪ್ರಕೃತಿ ವಿಕೋಪದ ರೀತಿ ಪರಿಗಣಿಸಲು ಮತ್ತು ಜಿಲ್ಲಾಡಳಿತ, ಪೊಲೀಸ್ ಇಲಾಖೆಯ ಸಹಯೋಗ ಒದಗಿಸಲು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಬಿ ಖಂಡ್ರೆ ಅವರು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತಮಟ್ಟದ ಸಭೆಯಲ್ಲಿ ಅವರು, ಮಾನವ-ವನ್ಯಜೀವಿ ಸಂಘರ್ಷ ನಿರ್ವಹಣೆ ಮತ್ತು ನಿಯಂತ್ರಣಕ್ಕೆ ಜಿಲ್ಲಾಮಟ್ಟದಲ್ಲಿ ಸಮನ್ವಯ ಸಮಿತಿ ರಚಿಸುವಂತೆಯೂ ಕೋರಿದರು. ರಾಜ್ಯದಲ್ಲಿ ವನ್ಯಜೀವಿಗಳ ಸಂಖ್ಯೆ ಹೆಚ್ಚಾಗಿದ್ದು 2022-23ರಲ್ಲಿ 57, 2023-24ರಲ್ಲಿ 65 ಮತ್ತು 2024-25ರಲ್ಲಿ 46 ಹಾಗೂ 2025-26ರಲ್ಲಿ ಇಲ್ಲಿಯವರೆಗೆ 32 ಜನರು ಮಾನವ-ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟಿದ್ದಾರೆ. ಅರಣ್ಯ ಇಲಾಖೆ ಜೀವಹಾನಿ ತಪ್ಪಿಸಲು ಶಕ್ತಿಮೀರಿ ಶ್ರಮಿಸುತ್ತಿದೆ ಎಂದರು.

ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಒಡಿಶಾ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕರ್ನಾಟಕಕ್ಕಿಂತ ವನ್ಯಜೀವಿಗಳ ಸಂಖ್ಯೆ ಕಡಿಮೆ ಇದ್ದರೂ ಜೀವಹಾನಿಯ ಸಂಖ್ಯೆ ಅಧಿಕವಾಗಿದೆ ಎಂದು ಸಭೆಗೆ ವಿವರಿಸಿದರು. ಅಕ್ಟೋಬರ್ ತಿಂಗಳಲ್ಲಿ ಹುಲಿಗಳ ದಾಳಿಯಿಂದ ಮೂರು ಸಾವುಗಳು ಸಂಭವಿಸಿ, ಒಬ್ಬರು ತೀವ್ರ ಗಾಯಗೊಂಡಿರುವ ಹಿನ್ನೆಲೆಯಲ್ಲಿ ಹುಲಿ ಸೆರೆ ಕಾರ್ಯಾಚರಣೆ ನಡೆಸಲಾಗುತ್ತಿದ್ದು,



ನಾಗರಹೊಳೆ, ಬಂಡೀಪುರದಲ್ಲಿ ಸಫಾರಿ ಸ್ಥಗಿತಗೊಳಿಸಿ, ವಾಹನ ಮತ್ತು ಸಿಬ್ಬಂದಿಯನ್ನು ಹುಲಿ ಸೆರೆ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ. ಒಟ್ಟು 250 ಅಧಿಕಾರಿ ಸಿಬ್ಬಂದಿ ಈಗ 10 ಹುಲಿಗಳನ್ನು ಸೆರೆ ಹಿಡಿದಿದ್ದಾರೆ ಇಲ್ಲವೇ ರಕ್ಷಿಸಿದ್ದಾರೆ ಎಂದು ತಿಳಿಸಿದರು.

ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಿಸಲು 8 ಅಂಶದ ಕಾರ್ಯಕ್ರಮ ರೂಪಿಸಲಾಗಿದೆ. ಸಮಗ್ರ ಕಮಾಂಡ್ ಸೆಂಟರ್ ಸ್ಥಾಪಿಸಲಾಗುತ್ತಿದೆ, ಜೊತೆಗೆ ಸ್ಥಳೀಯವಾಗಿ ಉತ್ಸಾಹಿ ಯುವಕರನ್ನು ಗುರುತಿಸಿ ಕಾಡಿನ ಮಿತ್ರ ಎಂದು ಅವರನ್ನೂ ಗಸ್ತು ಕಾರ್ಯಕ್ಕೆ ತೊಡಗಿಸಿಕೊಳ್ಳಲು ಚಿಂತಿಸಲಾಗಿದೆ ಎಂದು ತಿಳಿಸಿದರು.

### ಮಾಜಿ ಸೈನಿಕರ ನೇಮಕ

**ಮಾನವ-ವನ್ಯಜೀವಿ ಸಂಘರ್ಷ ಇರುವ ಪ್ರದೇಶದಲ್ಲಿ ಸಿಬ್ಬಂದಿ ಕೊರತೆ ನೀಗಿಸಲು ನಿವೃತ್ತ ಯೋಧರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಅರಣ್ಯ ಇಲಾಖೆಯಲ್ಲಿ ಪಶು ವೈದ್ಯಕೀಯ ಇಲಾಖೆಯಿಂದ ನಿಯೋಜನೆಯ ಮೇಲೆ ಪಶುವೈದ್ಯರು ಕಾರ್ಯನಿರ್ವಹಿಸುತ್ತಿದ್ದು, ವನ್ಯಜೀವಿ ಪಶುವೈದ್ಯರ ಪ್ರತ್ಯೇಕ ಕೇಡರ್ ರೂಪಿಸುವ ಅಗತ್ಯವನ್ನು ಈಶ್ವರ ಖಂಡ್ರೆ ಪ್ರತಿಪಾದಿಸಿದರು.**

## ಅದಾನಿ ಗ್ರೂಪ್ ಸೇರಿದಂತೆ ಅಗ್ರ ನಾಲ್ಕು ಕಂಪನಿಗಳಿಂದ ಬಿಡ್

• ಉದಯವಾಹಿನಿ, ಬೆಂಗಳೂರು

ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್‌ವರೆಗಿನ ಸುರಂಗ ರಸ್ತೆ ಯೋಜನೆಯ ಟೆಂಡರ್‌ನಲ್ಲಿ ಪ್ರಮುಖ ಮೂಲಸೌಕರ್ಯ ಕಂಪನಿಗಳಾದ ಅದಾನಿ ಗ್ರೂಪ್, ದಿಲೀಪ್ ಬಿಲ್ಡ್‌ಕಾನ್, ವಿಶ್ವ ಸಮುದ್ರ ಎಂಜಿನಿಯರಿಂಗ್, ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (ಆರ್‌ವಿಎನ್‌ಎಲ್) ಬಿಡ್ ಸಲ್ಲಿಸಿವೆ.16.74 ಕಿ.ಮೀ ಉದ್ದದ 17,800 ಕೋಟಿ ವೆಚ್ಚದ ಸುರಂಗ ರಸ್ತೆಗೆ ಬಿಜೆಪಿ ನಾಯಕರ ವಿರೋಧದ ನಡುವೆಯೂ ಅಗ್ರ ಸಾಲಿನಲ್ಲಿರುವ ಸಂಸ್ಥೆಗಳು ಆಸಕ್ತಿ ತೋರಿವೆ.

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ ಬಿ-ಸ್ಮೈಲ್ ನಾಲ್ಕು ಬಾರಿ ಟೆಂಡರ್ ಅವಧಿಯನ್ನು ವಿಸ್ತರಿಸಿತ್ತು. ನಾಲ್ಕು ಸಂಸ್ಥೆಗಳು ನವೆಂಬರ್ 11ರ ಗಡುವಿನ ಒಳಗೆ ಬಿಡ್ ಸಲ್ಲಿಸಿವೆ ಎಂದು ಅಧಿಕಾರಿಗಳು ತಿಳಿಸಿದರು. ಹಿಮಾಲಯದಲ್ಲಿ 200 ಕಿ.ಮೀ ಸುರಂಗ




ರಸ್ತೆಯನ್ನು ನಿರ್ಮಿಸಿ ಅನುಭವ ಹೊಂದಿರುವ ಸರ್ಕಾರಿ ಸ್ವಾಮ್ಯದ ಆರ್‌ವಿಎನ್‌ಎಲ್ ಮತ್ತು ಬೃಹತ್ ಹೆದ್ದಾರಿ ಯೋಜನೆಗಳನ್ನು ನಿರ್ವಹಿಸಿರುವ ಅದಾನಿ ಗ್ರೂಪ್ ಮತ್ತು ರಸ್ತೆ ನಿರ್ಮಾಣ ವಲಯದಲ್ಲಿ ದೀರ್ಘ ಕಾಲದಿಂದ ಹೆಸರುವಾಸಿಯಾಗಿರುವ ದಿಲೀಪ್ ಬಿಲ್ಡ್‌ಕಾನ್ ಬಿಡ್ ಸಲ್ಲಿಸಿವೆ.

ಬಿಡ್ ಪ್ರಕ್ರಿಯೆಯಲ್ಲಿ ಕಂಪನಿಗಳು ಗಂಭೀರವಾಗಿ ಭಾಗವಹಿಸಿದ್ದು, ರೂ.44 ಕೋಟಿ ಬ್ಯಾಂಕ್ ಖಾತರಿಯನ್ನೂ ನೀಡಿವೆ. ಹೆಬ್ಬಾಳದಿಂದ ಶೇಷಾದ್ರಿ ರಸ್ತೆ, ಶೇಷಾದ್ರಿ ರಸ್ತೆಯಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗೆ 2 ಪ್ಯಾಕೇಜ್‌ಗಳಲ್ಲಿ ಬಿ ಸ್ಮೈಲ್ ಜುಲೈನಲ್ಲಿ ಟೆಂಡರ್ ಆಹ್ವಾನಿಸಿತ್ತು.

ಸುರಂಗ ರಸ್ತೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯದ್ದಾಗಿದ್ದು, ಸರ್ಕಾರ ಶೇ 40ರಷ್ಟು ಹಣವನ್ನು ಒದಗಿಸುತ್ತದೆ.

ಉಳಿದ ಸುಮಾರು ರೂ.10 ಸಾವಿರ ಕೋಟಿಯನ್ನು ಗುತ್ತಿಗೆ ಪಡೆದ ಕಂಪನಿ ಭರಿಸುತ್ತದೆ. 30 ವರ್ಷದ ಅವಧಿಗೆ ಶುಲ್ಕ ಸಂಗ್ರಹಿಸುವ ಷರತ್ತು ಇದ್ದು, ಅದನ್ನು ಇನ್ನೂ 10 ವರ್ಷ ವಿಸ್ತರಿಸಲು ಅವಕಾಶವಿದೆ. ಆರು ಎಕರೆ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಬಹುದಾಗಿದೆ.

## ವಿಧಾನಸಭಾ ಚುನಾವಣೆಯಲ್ಲಿ ಮತ ಕಳ್ಳತನ

• ಉದಯವಾಹಿನಿ, ಬೆಂಗಳೂರು

2023ರ ವಿಧಾನಸಭಾ ಚುನಾವಣೆಯಲ್ಲಿ ಆಳಂದ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಗಳವು ಆರೋಪದ ತನಿಖೆ ನಡೆಸುತ್ತಿರುವ ಸಿಐಡಿ, ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯ ವ್ಯಕ್ತಿಯನ್ನು ಬಂಧಿಸಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ. 27 ವರ್ಷದ ವ್ಯಕ್ತಿಯನ್ನು ಬಂಧಿಸಿ, ಬೆಂಗಳೂರಿಗೆ ಕರೆತರಲಾಗಿದೆ. ವಿಚಾರಣೆಗಾಗಿ ಸಿಐಡಿ ಅವರನ್ನು ವಶಕ್ಕೆ ಪಡೆದಿದೆ.



ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಹಲವು ಮತಗಳನ್ನು ಅಳಿಸಲು ಆರೋಪಿ ಅರ್ಜಿ ಸಲ್ಲಿಸಿದ್ದರು ಎಂದು ಮೂಲಗಳು ತಿಳಿಸಿವೆ. ಸಿಐಡಿ ಮೂಲಗಳ ಪ್ರಕಾರ, ನಾಡಿಯಾದ ಬಾಪಿ ಅದ್ಯ ಎಂಬ ಆರೋಪಿಯನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾವಣೆಯಾದ ಹಣದ ಜಾಡು ಹಿಡಿದ ನಂತರ ಬಂಧಿಸಲಾಗಿದೆ. ಬಿಆರ್ ಪಾಟೀಲ್ ಮತ್ತು ಸಚಿವ ಮತ್ತು ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರು ಮತ ಅಳಿಸುವಿಕೆ ಪ್ರಯತ್ನಗಳ ಬಗ್ಗೆ ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಆದರೆ, ಮುಖ್ಯ ಚುನಾವಣಾ ಅಧಿಕಾರಿ, ಯಾವುದೇ ಮುಂದಿನ ಕ್ರಮಗಳನ್ನು ನಿಲ್ಲಿಸಲು ಮತದಾರರ ಪಟ್ಟಿಯ ಸದ್ಯದ ಸ್ಥಿತಿಯನ್ನು ಕಾಯ್ದುಕೊಳ್ಳಲು ನಿರ್ಧರಿಸಿದರು. ಪಾಟೀಲ್ ಅವರ ಪ್ರಕಾರ, ದಲಿತರು ಮತ್ತು ಅಲ್ಪಸಂಖ್ಯಾತರನ್ನು ಒಳಗೊಂಡ 6,994 ಕಾಂಗ್ರೆಸ್ ಮತಗಳನ್ನು ಅಳಿಸಲು ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಸಿಇಒ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದ ನಂತರ ಮತ ಅಳಿಸುವಿಕೆಯನ್ನು ನಿಲ್ಲಿಸಲಾಯಿತು.

ಈ ಮತಗಳನ್ನು ಅಳಿಸಿದ್ದರೆ ನಾನು ಖಂಡಿತವಾಗಿಯೂ ಚುನಾವಣೆಯಲ್ಲಿ ಸೋಲುತ್ತಿದ್ದೆ ಎಂದಿದ್ದಾರೆ.

ಅವರು 2023ರ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಹತ್ತಿರದ ಪ್ರತಿಸ್ಪರ್ಧಿ ಸುಭಾಷ್ ಗುತ್ತೇದಾರ್ (ಬಿಜೆಪಿ) ವಿರುದ್ಧ ಸುಮಾರು 10,000 ಮತಗಳ ಅಂತರದಿಂದ ಗೆದ್ದಿದ್ದರು.

## ಹೆಚ್ಚಿನ ಉದ್ಯೋಗಾವಕಾಶಗಳ ಭರವಸೆ ಹುಟ್ಟುಹಾಕಿದ ಕರ್ನಾಟಕದ ಮಿಷನ್ ಗೋಲ್ಡ್!

• ಉದಯವಾಹಿನಿ, ಬೆಂಗಳೂರು

ಭಾರತದಲ್ಲಿ ಚಿನ್ನದ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ, ಕರ್ನಾಟಕವು ದೇಶದಲ್ಲಿ ಅತಿ ಹೆಚ್ಚು ಚಿನ್ನ ಉತ್ಪಾದಿಸುವ ರಾಜ್ಯವಾಗಿದ್ದು, ಮತ್ತಷ್ಟು ಹೆಚ್ಚಿನ ಚಿನ್ನ ಹೊರತೆಗೆಯಲು ಮುಂದಾಗಿದೆ.

ರಾಜ್ಯ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಸಂಬಂಧಿತ ಸಂಸ್ಥೆಗಳು 19 ಸ್ಥಳಗಳಲ್ಲಿ 16,350 ಹೆಕ್ಟೇರ್ ಪ್ರದೇಶದಲ್ಲಿ ಯುರೇನಿಯಂ, ಬಾಕ್ಸೈಟ್, ತಾಮ್ರ ಮತ್ತು ಇತರ ಖನಿಜಗಳ ಜೊತೆಗೆ ಚಿನ್ನದ ನಿಕ್ಷೇಪಗಳನ್ನು ಗುರುತಿಸಲು ದೊಡ್ಡ ಪ್ರಮಾಣದ ಪರಿಶೋಧನೆ ನಡೆಸುತ್ತಿವೆ. ನಡೆಯುತ್ತಿರುವ ಪರಿಶೋಧನೆಯು ರಾಜ್ಯದಲ್ಲಿ ಇದುವರೆಗಿನ ಅತಿದೊಡ್ಡದಾಗಿದೆ ಎಂದು ಹೇಳಲಾಗುತ್ತದೆ.

ಹಾವೇರಿ, ಕೊಪ್ಪಳ, ಮಂಡ್ಯ, ಚಿತ್ರದುರ್ಗ ಮತ್ತು ಬಳ್ಳಾರಿ ಸೇರಿದಂತೆ ಈ ಕೆಲವು ಸ್ಥಳಗಳಲ್ಲಿ ಚಿನ್ನದ ನಿಕ್ಷೇಪ ಇರುವುದು ಪರಿಶೋಧನೆಯಿಂದ ತಿಳಿದು ಬಂದಿದೆ 16,350 ಹೆಕ್ಟೇರ್‌ಗಳಲ್ಲಿ, ನಾವು ಸುಮಾರು 14,000 ಹೆಕ್ಟೇರ್‌ಗಳಲ್ಲಿ ಚಿನ್ನವನ್ನು ಅನ್ವೇಷಿಸುತ್ತಿದ್ದೇವೆ. ಆರಂಭಿಕ ಅಂದಾಜಿನ ಪ್ರಕಾರ ಚಿನ್ನವಿದೆ, ಆದರೆ ಖನಿಜ ಎಷ್ಟರ ಮಟ್ಟಿಗೆ ಲಭ್ಯವಿದೆ ಎಂದು ನಮಗೆ ತಿಳಿದಿಲ್ಲ. ಪರಿಶೋಧನೆಯನ್ನು ಪೂರ್ಣಗೊಳಿಸಿದ ನಂತರವೇ ನಮಗೆ ಸ್ಪಷ್ಟ ಚಿತ್ರಣ ಸಿಗುತ್ತದೆ ಎಂದು ರಾಜ್ಯ ಗಣಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## 7000 ಸರ್ಕಾರಿ ಶಾಲೆ ಮುಚ್ಚಲು ರಾಜ್ಯ ಸರ್ಕಾರ ಹುನ್ನಾರ : ಹೆಚ್ಡಿಕೆ ಆರೋಪ

• ಉದಯವಾಹಿನಿ, ಬೆಂಗಳೂರು

ವಿಲೀನ ಮತ್ತು ಪಬ್ಲಿಕ್ ಶಾಲೆ ಸ್ಥಾಪನೆ ನೆಪದಲ್ಲಿ ರಾಜ್ಯದಲ್ಲಿ 7,000 ಸರ್ಕಾರಿ ಶಾಲೆಗಳನ್ನು ಮುಚ್ಚಲು ರಾಜ್ಯ ಸರ್ಕಾರ ಹೊರಟಿದೆ. ವಿಪರ್ಯಾಸವೆಂದರೆ,700 ಪಬ್ಲಿಕ್ ಶಾಲೆಗಳಿಗೆ 7,000 ಸರ್ಕಾರಿ ಶಾಲೆಗಳಿಗೆ ಇತಿಶ್ರೀ ಹಾಡಲು ಹೊರಟಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ, ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ವ್ಯವಸ್ಥೆ ಬೇರುಸಹಿತ ಸರ್ವನಾಶವಾಗಿದೆ. ಸುಸಜ್ಜಿತ ಕಟ್ಟಡ, ಶೌಚಾಲಯ, ಕ್ರೀಡಾಂಗಣ, ಗ್ರಂಥಾಲಯ, ಮಕ್ಕಳಿಗೆ ಸಮವಸ್ತ್ರ ಪುಸ್ತಕ ಒದಗಿಸಲಾಗದ ಕೈಲಾಗದ ಸರ್ಕಾರವು ಈಗ ಜವಾಬ್ದಾರಿಯಿಂದ ಪಾರಾಗಲು ಸಲೀಸು ಮಾರ್ಗ ಕಂಡುಕೊಂಡಿದೆ ಎಂದು ಟೀಕಿಸಿದ್ದಾರೆ. ಆಘಾತಕಾರಿ ಸಂಗತಿ ಎಂದರೆ, ಶೇ.10ಕ್ಕಿಂತ ಕಡಿಮೆ ಹಾಜರಾತಿಯುಳ್ಳ 5,000 ಶಾಲೆ, ಶೇ.50ಕ್ಕೂ ಕಡಿಮೆ ಹಾಜರಾತಿ ಹೊಂದಿರುವ 25,000 ಶಾಲೆಗಳಿಗೆ ಶಾಶ್ವತವಾಗಿ ಬೀಗ ಜಡಿಯಲು ಸರ್ಕಾರ ಮುಂದಾಗಿರುವುದು ದುರದೃಷ್ಟಕರ ಎಂದಿದ್ದಾರೆ.

## ಹೋಟೇಲ್‌ಗೆ ನುಗ್ಗಿ ಸೆಕ್ಯೂರಿಟಿ ಗಾರ್ಡ್‌ನ ಮೇಲೆ ಹಲ್ಲೆ ನಡೆಸಿ ಭೀಕರ ಕೊಲೆ

• ಉದಯವಾಹಿನಿ, ಬೆಂಗಳೂರು

ದುಷ್ಕರ್ಮಿಗಳು ಹೋಟೇಲ್‌ಗೆ ನುಗ್ಗಿ ಮಾರಕಾಸ್ತ್ರದಿಂದ ಸೆಕ್ಯೂರಿಟಿ ಗಾರ್ಡ್‌ನ ಮೇಲೆ ಹಲ್ಲೆ ನಡೆಸಿ ಭೀಕರವಾಗಿ ಕೊಲೆ ಮಾಡಿ ಸಿಸಿ ಕ್ಯಾಮೆರಾದ ಡಿವಿಆರ್‌ನೊಂದಿಗೆ ಪರಾರಿಯಾಗಿರುವ ಘಟನೆ ಬಿಡದಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ತಡರಾತ್ರಿ ನಡೆದಿದೆ. ಚನ್ನಪಟ್ಟಣ ತಾಲ್ಲೂಕಿನ ಕೊಂಡಾಪುರ ಗ್ರಾಮದ ನಿಶಾಂತ್ (25) ಕೊಲೆಯಾದ ಸೆಕ್ಯೂರಿಟಿ ಗಾರ್ಡ್.ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಕದಂಬ ಹೋಟೇಲ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕಳೆದ ಎರಡೂವರೆ ತಿಂಗಳಿನಿಂದ ನಿಶಾಂತ್ ಕೆಲಸ ಮಾಡುತ್ತಿದ್ದರು. ರಾತ್ರಿ ಎಂದಿನಂತೆ ನಿಶಾಂತ್ ಕರ್ತವ್ಯಕ್ಕೆ ಬಂದು ಹೋಟೇಲ್‌ನಲ್ಲಿ ಮಲಗಿದ್ದರು. ತಡರಾತ್ರಿ ದುಷ್ಕರ್ಮಿಗಳು ಹೋಟೇಲ್‌ಗೆ ನುಗ್ಗಿ ಮಾರಕಾಸ್ತ್ರದಿಂದ ತಲೆಗೆ ಹೊಡೆದು ಕೊಲೆ ಮಾಡಿ ನಂತರ ಹೋಟೇಲ್‌ನಲ್ಲಿದ್ದ ಸಿಸಿ ಕ್ಯಾಮೆರಾದ ಡಿವಿಆರ್‌ನನ್ನು ತೆಗೆದುಕೊಂಡು ಪರಾರಿಯಾಗಿದ್ದಾರೆ. ಇಂದು ಬೆಳಗಿನ ಜಾವ ಸೆಕ್ಯೂರಿಟಿ ಗಾರ್ಡ್ ಕೊಲೆಯಾಗಿರುವುದು ಗೊತ್ತಾಗಿದೆ.

## ಸರ್ಕಾರಿ ಹಾಸ್ಟೆಲ್‌ಗಳಿಗೆ ಲೋಕಾಯುಕ್ತ ದಿಢೀರ್ ಭೇಟಿ, ಅವ್ಯವಸ್ಥೆ ದರ್ಶನ...!

• ಉದಯವಾಹಿನಿ, ಬೆಂಗಳೂರು

ಸಾಲು ಸಾಲು ದೂರು ಹಿನ್ನೆಲೆಯಲ್ಲಿ ನಗರದಲ್ಲಿರುವ ಹಾಸ್ಟೆಲ್‌ಗಳಿಗೆ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಗರದ ಎಂಜಿ ರಸ್ತೆಯಲ್ಲಿರುವ ಸರ್ಕಾರಿ ವಿಜ್ಞಾನ ಕಾಲೇಜು ಬಾಲಕರ ಹಾಸ್ಟೆಲ್‌ಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ಅನಿರೀಕ್ಷಿತ ಭೇಟಿ ನೀಡಿದರು.

ಈ ವೇಳೆ ವಿದ್ಯಾರ್ಥಿಗಳ ಶೋಚನೀಯ ಸ್ಥಿತಿ ಲೋಕಾಯುಕ್ತರ ಗಮನಕ್ಕೆ ಬಂದಿತು. ಸರ್ಕಾರ ಪ್ರತೀ ಕೋಣೆಗೆ 4 ವಿದ್ಯಾರ್ಥಿಗಳಿಗೆ ಅವಕಾಶ ನೀಡಿದ್ದರೂ, ಹಾಸ್ಟೆಲ್‌ನಲ್ಲಿ 6-7 ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗಿದೆ. ಹೀಗಾಗಿ ನಾಲ್ಕು ವಿದ್ಯಾರ್ಥಿಗಳು


ಉದಯವಾಹಿನಿ ಚಿತ್ರ

ಮಂಚಗಳ ಮೇಲೆ ಮಲಗುತ್ತಿದ್ದರೆ, ಉಳಿವರು ನೆಲದಲ್ಲಿ ಮಲಗುತ್ತಿರುವುದು ಕಂಡು ಬಂದಿದೆ.

ಹಾಸ್ಟೆಲ್‌ನಲ್ಲಿ ಯಾವುದೇ ಇಂಡೆಂಟ್ ಮತ್ತು ಸ್ಟಾಕ್ ಪುಸ್ತಕವನ್ನು ನಿರ್ವಹಿಸಲಾಗಿಲ್ಲ, ಇದು ದುರುಪಯೋಗಕ್ಕೆ ದಾರಿ ಮಾಡಿಕೊಡುತ್ತಿದೆ. ಪ್ರತಿ ತಿಂಗಳು ಸಮಾಜ ಕಲ್ಯಾಣ ಇಲಾಖೆಯಿಂದ 25,000 ರೂ. ಮಂಜೂರು ಮಾಡಲಾಗುತ್ತಿದೆ, ಆದರೂ ಹಾಸ್ಟೆಲ್ ಅನ್ನು ಕ್ರಮಬದ್ಧವಾಗಿ ಇಡಲಾಗಿಲ್ಲ, ನೈರ್ಮಲ್ಯವಿಲ್ಲ. 373 ವಿದ್ಯಾರ್ಥಿಗಳಿಗೆ ಕೇವಲ 38 ಶೌಚಾಲಯಗಳಿದ್ದು, ಅವು ಅನೈರ್ಮಲ್ಯದಿಂದ ಕೂಡಿವೆ ಎಂಬುದನ್ನು ಉಪ ಲೋಕಾಯುಕ್ತರು ಗಮನಿಸಿದರು. ಪರಿಶೀಲನೆ ವೇಳೆ ಲೋಕಾಯುಕ್ತರು, ವಿದ್ಯಾರ್ಥಿಗಳು ಕಿಕ್ಕಿರಿದು ತುಂಬಿರುವುದು ಕಂಡುಬಂದಿದ್ದು, ತಕ್ಷಣವೇ ವಾರ್ಡನ್ ಮತ್ತು ಅಡುಗೆ ಸಹಾಯಕರನ್ನು ಹೊರಗಡೆ ಕಳುಹಿಸಿ, ಎಲ್ಲಾ ವಿದ್ಯಾರ್ಥಿಗಳನ್ನು ಕರೆಸಿ ಮಾಹಿತಿ ಪಡೆದು ಕೊಂಡಿದ್ದಾರೆ.

ಈ ವೇಳೆ ವಿದ್ಯಾರ್ಥಿಗಳು ತಮಗೆ ನೀಡುವ ಬೆಳಗಿನ ಉಪಾಹಾರವು ಗುಣಮಟ್ಟದಿಂದ ಕೂಡಿರುವುದಿಲ್ಲ, ಮಧ್ಯಾಹ್ನ ಮತ್ತು ರಾತ್ರಿ ನೀಡುವ ಅನ್ನ ಬೆಂದಿರುವುದಿಲ್ಲ ಹಾಗೂ ಸಾರಿನಲ್ಲಿ ತರಕಾರಿ ಯಾಗಲೀ, ಬೇಳೆಯಾಗಲೀ ಇರುವುದಿಲ್ಲ ಎಂದು ದೂರಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ, ವರದಿ ನೀಡಿ ಎಂದು ಲೋಕಾಯುಕ್ತರು, ಪೊಲೀಸರಿಗೆ ಸೂಚಿಸಿದರು.

ಈ ನಡುವೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ ಎನ್ ಫಣೀಂದ್ರ ಮತ್ತು ನ್ಯಾಯಮೂರ್ತಿ ಬಿ ವೀರಪ್ಪ ಅವರು ವಿಜಯನಗರದಲ್ಲಿರುವ ಸರ್ಕಾರಿ ಬಾಲಕರ ವಸತಿ ನಿಲಯಗಳು, ಜಕ್ಕೂರು ಯಲಹಂಕದ ಸರ್ಕಾರಿ ಮಹಿಳಾ ವಸತಿ ನಿಲಯಗಳು ಮತ್ತು ನಗರದ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿರುವ ಸರ್ಕಾರಿ ಪೋಸ್ಟ್ ಮೆಟ್ರಿಕ್/ಪಿಜಿ ಕಾಲೇಜು ಮಹಿಳಾ ವಸತಿ ನಿಲಯಕ್ಕೂ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

## ಜಿಕೆವಿಕೆ ಕೃಷಿ ಮೇಳಕ್ಕೆ ಸಚಿವೆ ಶೋಭಾ ಕರಂದ್ಲಾಜೆ ಚಾಲನೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ ಆವರಣದಲ್ಲಿ 'ಸಮೃದ್ಧ ಕೃಷಿ -ವಿಕಸಿತ ಭಾರತ ನೆಲ,ಜಲ ಮತ್ತು ಬೆಳೆ' ಶೀರ್ಷಿಕೆಯ ಅಡಿಯಲ್ಲಿ ಆಯೋಜಿಸಿರುವ 4 ದಿನಗಳ ಕೃಷಿ ಮೇಳ 2025ಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಚಾಲನೆ ನೀಡಿದರು.

ಕಾರ್ಯಕ್ರಮ ಉದ್ಘಾಟನೆಯ ನಂತರ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು, ಕೃಷಿ ಭಾರತದ ಆರ್ಥಿಕತೆಯ ಬೆನ್ನೆಲುಬಾಗಿ ಉಳಿದಿದೆ ಮತ್ತು 50 ಕೋಟಿಗೂ ಹೆಚ್ಚು ಜನರಿಗೆ ಉದ್ಯೋಗವನ್ನು ಒದಗಿಸುತ್ತದೆ ಎಂದು ಹೇಳಿದರು. ನಮ್ಮ ಮಕ್ಕಳಿಗೆ ಆಹಾರಕ್ಕಾಗಿ ನಾವು ಆಹಾರವನ್ನು ಆಮದು ಮಾಡಿಕೊಳ್ಳುವ ಕಾಲವಿತ್ತು. ನಮ್ಮ ರೈತರ ಅವಿರತ ಪ್ರಯತ್ನಗಳಿಂದಾಗಿ 140 ಕೋಟಿಗೂ ಹೆಚ್ಚು ಭಾರತೀಯರು ನಮ್ಮ ಸ್ವಂತ ದೇಶದಲ್ಲಿ ಬೆಳೆದ ಆಹಾರವನ್ನು ಸೇವನೆ ಮಾಡುತ್ತಿದ್ದಾರೆ. ನಮ್ಮ ರೈತರಲ್ಲಿ ಶೇ. 80 ಕ್ಕೂ ಹೆಚ್ಚು ಜನರು ಸಣ್ಣ ಮತ್ತು ಅತಿಸಣ್ಣ ರೈತರಾಗಿದ್ದು, ಎರಡೂವರೆ ಎಕರೆಗಿಂತ ಕಡಿಮೆ ಭೂಮಿ ಹೊಂದಿದ್ದಾರೆ. ನಮ್ಮ ಯೋಜನೆಗಳು ಅವರನ್ನು ಬಲಪಡಿಸುವ ಮತ್ತು ಬೆಂಬಲಿಸುವ ಗುರಿಯನ್ನು ಹೊಂದಿರಬೇಕು. ಕಳೆದ ಏಳು ವರ್ಷಗಳಲ್ಲಿ, 2,000 ಕ್ಕೂ ಹೆಚ್ಚು ಹೊಸ ಬೆಳೆ ಪ್ರಭೇದಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಕೃಷಿ ಸಚಿವ ಚೆಲುವರಾಯಸ್ವಾಮಿ, ಸಂಸದೆ ಶೋಭಾ ಕರಂದ್ಲಾಜೆ ಅವರು ನಾಲ್ಕು ದಿನಗಳ ಕೃಷಿ ಮೇಳ 2025ವನ್ನು ಉದ್ಘಾಟಿಸಿದರು.

ಇದೇ ವೇಳೆ ಭಾರತದ ಆತ್ಮ ಕೃಷಿಯಲ್ಲಿದೆ ಎಂದ ಅವರು, ರಾಷ್ಟ್ರದ ಹಸಿರು ಕ್ರಾಂತಿಯನ್ನು ಶ್ಲಾಘಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಹೊಸದಾಗಿ ಬಿಡುಗಡೆಯಾದ ಐದು ಹೊಸ ಬೆಳೆ- CNGS-1 (ರಾಗಿ), KBSH-


ಉದಯವಾಹಿನಿ ಚಿತ್ರ

**ಅವುಗಳಲ್ಲಿ ಹಲವು ಹವಾಮಾನ-ನಿರೋಧಕ ಮತ್ತು ಹೆಚ್ಚಿನ ಇಳುವರಿ ನೀಡುವ ಬೆಳೆಯಾಗಿವೆ. ನವೀನ ಅಭ್ಯಾಸಗಳು ಮತ್ತು ತಂತ್ರಜ್ಞಾನಗಳಿಗೆ ಹೆಚ್ಚುತ್ತಿರುವ ಬೇಡಿಕೆಯು ರೈತರಿಗೆ ತಮ್ಮ ಸಾಮರ್ಥ್ಯಗಳನ್ನು ಪ್ರದರ್ಶಿಸಲು ಒಂದು ವೇದಿಕೆಯನ್ನು ಒದಗಿಸುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಅವರು ಮಾತನಾಡಿ, ಭಾರತದ ಜನಸಂಖ್ಯೆಯ ಶೇ. 65 ರಷ್ಟು ಜನರು ಇನ್ನೂ ಕೃಷಿಯನ್ನು ಅವಲಂಬಿಸಿದ್ದಾರೆ ಎಂದು ಹೇಳಿದರು.**

88 (ಸೂರ್ಯಕಾಂತಿ ಹೈಬ್ರಿಡ್), BISH-162 (ಹತ್ತಿ ಹೈಬ್ರಿಡ್), CHNBT-1 (ಕಪ್ಪು ಅರಿಶಿನ), ಮತ್ತು IISR ಪ್ರತಿಭಾ (ಅರಿಶಿನ) - 36 ಹೊಸ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ, ಕೃಷಿ ಕ್ಷೇತ್ರದಲ್ಲಿನ ಸಾಧನೆಗಳಿಗಾಗಿ ಮೂವರು ಪ್ರಗತಿಪರ ರೈತರಿಗೆ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

## ನಕಲಿ ವೈದ್ಯರ ವಿರುದ್ಧ ಕಠಿಣ ಕ್ರಮಕ್ಕೆ ಸರ್ಕಾರ ಆದೇಶ

• ಉದಯವಾಹಿನಿ, ಬೆಂಗಳೂರು

ನಕಲಿ ವೈದ್ಯರು ಮತ್ತು ಅನರ್ಹ ವೈದ್ಯರನ್ನು ನೇಮಿಸಿಕೊಳ್ಳುವ ವೈದ್ಯಕೀಯ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸುತ್ತೋಲೆ ಹೊರಡಿಸಿದೆ.

ಕರ್ನಾಟಕ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ, ಯೋಗ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೈದ್ಯರ ವಿವಿಧ ನಿಬಂಧನೆಗಳ ಕಾಯ್ದೆ, 1961 ರ ಪ್ರಕಾರ, ಸಂಬಂಧಿತ ಕಾಯ್ದೆಗಳ ಅಡಿಯಲ್ಲಿ ನೋಂದಣಿ ಇಲ್ಲದೆ ವೈದ್ಯ ವೃತ್ತಿ ಮಾಡುವ ಯಾವುದೇ ವ್ಯಕ್ತಿ ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ. ಈ ಕುರಿತ ಮೊದಲ ಅಪರಾಧಕ್ಕೆ 25,000 ರೂ.ಗಳವರೆಗೆ ದಂಡ, 2ನೇ ಅಪರಾಧಕ್ಕೆ 2.5 ಲಕ್ಷ ರೂ.ಗಳವರೆಗೆ ಮತ್ತು 1ವರ್ಷ ಜೈಲು ಶಿಕ್ಷೆ ಮತ್ತು ನಂತರದ ಪ್ರತಿ ಅಪರಾಧಕ್ಕೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆಯೊಂದಿಗೆ 5 ಲಕ್ಷ ರೂ.ಗಳವರೆಗೆ ದಂಡ ವಿಧಿಸಬಹುದು ಎಂದು ತಿಳಿಸಿದೆ.



ನೋಂದಣಿಯಾಗದ ಅಥವಾ ನಕಲಿ ವೈದ್ಯರ ವಿರುದ್ಧ ತಪಾಸಣೆ ಮತ್ತು ಕ್ರಮ ಕೈಗೊಳ್ಳಲು ವಿಶೇಷ ಕಾರ್ಯಪಡೆಯನ್ನು ರಚಿಸಲಾಗಿದೆ. ಕಾರ್ಯಪಡೆಯಲ್ಲಿ ಉಪ ಆಯುಕ್ತರು, ಹಿರಿಯ ಪೊಲೀಸ್ ಅಧಿಕಾರಿ, ಜಿಲ್ಲಾ ಆಯುಷ್ ಅಧಿಕಾರಿ, ಕರ್ನಾಟಕ ಆಯುರ್ವೇದ ಯುನಾನಿ ಮಂಡಳಿಯ ರಿಜಿಸ್ಟ್ರಾರ್, ಜಿಲ್ಲಾ ಮಟ್ಟದ ನಾಮನಿರ್ದೇಶಿತ ವಕೀಲರು ನಾಮನಿರ್ದೇಶಿತ ಸಮಾಜ ಸೇವಕರು ಇರಲಿದ್ದಾರೆ.

ಅಪರಾಧಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದು ರಾಜ್ಯ ಸರ್ಕಾರಕ್ಕೆ ಮಾಸಿಕ ವರದಿಗಳನ್ನು ಸಲ್ಲಿಸುವುದು ಈ ಕಾರ್ಯಪಡೆಯ ಕರ್ತವ್ಯವಾಗಿದೆ. ಅರ್ಹ ವೈದ್ಯರು ಅಥವಾ ಅರೆವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ವೈದ್ಯಕೀಯ ಸಂಸ್ಥೆಗಳ ವಿರುದ್ಧ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ, 2007 ರ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು.

## ಕೃಷಿ ಮೇಳಕ್ಕೆ ರೈತರು, ವಿದ್ಯಾರ್ಥಿಗಳ ದಂಡು

• ಉದಯವಾಹಿನಿ, ಬೆಂಗಳೂರು

ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಮೊದಲ ದಿನವಾದ ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು.ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ರೈತರಿಗಾಗಿ ಈ ಬಾರಿ ಧಾನ್ಯ ಜೋಳ (ಸಿಎನ್‌ಜಿಎಸ್-1), ಸೂರ್ಯಕಾಂತಿ (ಕೆಬಿಎಸ್‌ಎಚ್-88) ಹರಳು (ಬಿಸಿಎಚ್-162), ಕಪ್ಪು ಅರಿಶಿಣ (ಸಿಎಚ್‌ಎನ್‌ಬಿಟಿ-1) ಹಾಗೂ ಅರಿಶಿಣ (ಐಐಎಸ್‌ಆರ್ ಪ್ರತಿಭಾ) ಎಂಬ ಐದು ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದ್ದು, ಈ ಪ್ರಾತ್ಯಕ್ಷಿಕೆ ತಾಕುಗಳಿಗೆ ರೈತರು, ವಿದ್ಯಾರ್ಥಿಗಳು ಭೇಟಿ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು. ಮೇಳಕ್ಕೆ ವಿವಿಧ ಜಿಲ್ಲೆಗಳಿಂದ ಬಂದಿದ್ದ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಜಿಕೆವಿಕೆ ಆವರಣದಲ್ಲಿ ಬೆಳೆದಿರುವ ಆಕರ್ಷಕ ಸೂರ್ಯಕಾಂತಿಯ ತಾಕುಗಳಲ್ಲಿ ನಿಂತುಕೊಂಡು ಸೆಲ್ಫಿಗೆ ಪೋಸ್ ನೀಡುತ್ತಿದ್ದರೆ, ಇತ್ತ ರೈತರು ಕೃಷಿಯಲ್ಲಿನ ಹೊಸ ತಂತ್ರಜ್ಞಾನದ ಹುಡುಕಾಟದಲ್ಲಿ ನಿರತರಾಗಿದ್ದರು.

# ಬಿಜೆಪಿಗೆ ಗಾಂಧಿ, ನೆಹರುರನ್ನ ತೆಗಳುವುದೇ ಕೆಲಸ: ಸಿಎಂ

## ಬಿಜೆಪಿಗೆ ಗಾಂಧಿ, ನೆಹರು ಅವರನ್ನು ತೆಗಳುವುದೇ ಕೆಲಸ ಎಂದು ಬಿಜೆಪಿ ವಿರುದ್ಧ ಸಿಎಂ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ಬಿಜೆಪಿಗೆ ಗಾಂಧಿ, ನೆಹರು ಅವರನ್ನು ತೆಗಳುವುದೇ ಕೆಲಸ ಎಂದು ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು. ಜವಾಹರಲಾಲ್ ನೆಹರು ಜನ್ಮದಿನದ ಅಂಗವಾಗಿ ವಿಧಾನಸೌಧದಲ್ಲಿರುವ ನೆಹರು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ದೇಶದ ಮೊದಲ ಪ್ರಧಾನಮಂತ್ರಿ ಜವಾಹರ್‌ಲಾಲ್ ನೆಹರು ಅವರ ಜನ್ಮದಿನದಂದೇ ಮಕ್ಕಳ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಮಕ್ಕಳನ್ನು ಕಂಡರೆ ಬಹಳ ಪ್ರೀತಿಯಿದ್ದ ಅವರು ಇಂದಿನ ಮಕ್ಕಳೇ ಭವಿಷ್ಯದ ಪ್ರಜೆಗಳು ಎಂದು ಅರ್ಥೈಸಿಕೊಂಡಿದ್ದರು. ಆದ್ದರಿಂದ ಚಾಚಾ ನೆಹರು ಎಂದೇ ಅವರನ್ನು ಕರೆಯಲಾಗುತ್ತಿತ್ತು. ಆದರೆ ಇಂದಿನ ಬಿಜೆಪಿಯವರಿಗೆ ಗಾಂಧಿ ಹಾಗೂ ನೆಹರು ಅವರನ್ನು ತೆಗಳುವುದೇ ಕೆಲಸವಾಗಿದೆ ಎಂದರು.

ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ದೇಶ ಪ್ರೇಮ. ಸ್ವಾತಂತ್ರ್ಯ ಪ್ರೇಮವನ್ನು ಬೆಳೆಸಿಕೊಂಡಿದ್ದರು. ಬ್ರಿಟಿಷರ ವಿರುದ್ಧ ಹೋರಾಡುವ ಮನೋಭಾವ ಬೆಳೆಸಿಕೊಂಡು ಮಹಾತ್ಮ ಗಾಂಧಿಯವರ ನೆಚ್ಚಿನ ಶಿಷ್ಯರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುತ್ತಾರೆ.


ಉದಯವಾಹಿನಿ ಚಿತ್ರ

ಸುಮಾರು 9 ವರ್ಷಗಳ ಕಾಲ ಕಾರಾಗೃಹದಲ್ಲಿದ್ದು, ದೇಶಕ್ಕಾಗಿ ಬಹಳಷ್ಟು ತ್ಯಾಗ, ಬಲಿದಾನಗಳನ್ನು ಮಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದಾಗ ದೇಶದ ಬಜೆಟ್ ಗಾತ್ರ 197 ಕೋಟಿ ರೂ.ಗಳು ಮಾತ್ರ ಇತ್ತು. ಎರಡು, ಮೂರು ವರ್ಷಗಳ ನಂತರ 4 ಅಂಕಿಗಳ ಹಂತಕ್ಕೆ ತಲುಪಿತು ಎಂದು ಹೇಳಿದರು.

ಕೃಷಿ, ನೀರಾವರಿ, ಕೈಗಾರಿಕೆಗಳಲ್ಲಿ ಆಸಕ್ತಿ ಹೊಂದಿದ್ದ ನೆಹರೂ ಅವರು ದೇಶವನ್ನು ವೈಜ್ಞಾನಿಕವಾಗಿ, ವೈಚಾರಿಕವಾಗಿ ಬೆಳೆಸುವ ಪ್ರಯತ್ನ ಮಾಡಿದರು. ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶ ಕಟ್ಟುವ ಕೆಲಸವನ್ನು ಮಾಡಿದರು. ದೇಶದಲ್ಲಿ ಅನೇಕ ಕೈಗಾರಿಕೆಗಳಾಗಿದ್ದರೆ, ಅಣೆಕಟ್ಟುಗಳಾಗಿದ್ದರೆ, ಕೃಷಿಯಲ್ಲಿ ಸ್ವಾವಲಂಬಿಗಳಾಗಿದ್ದರೆ ಅದಕ್ಕೆ ನೆಹರು ಅವರು ಕಾರಣ ಎಂದು ಸ್ಮರಿಸಬೇಕು. ಸುದೀರ್ಘ ಹದಿನೇಳು ವರ್ಷಗಳ ಕಾಲ ಈ ದೇಶದ ಪ್ರಧಾನಿಗಳಾಗಿದ್ದವರು ಎಂದು ಸ್ಮರಿಸಿದರು.

ಇನ್ನೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀ ಬಿ.ಎಸ್.ವಿಶ್ವನಾಥ್‌ರವರ ಪುತ್ತಳಿಯನ್ನು ಅನಾವರಣಗೊಳಿಸಿ ಮಾತನಾಡಿದ ಅವರು, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಶ್ರೀ ಬಿ.ಎಸ್.ವಿಶ್ವನಾಥ್ ಅವರು ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಹಕಾರಿ ಮುಖಂಡರು. ವಿವಿಧ ಸಹಕಾರ ಸಂಘಗಳಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದವರು. ಸಹಕಾರ ಕ್ಷೇತ್ರದಲ್ಲಿ ಅಪ್ರತಿಮ ಕೊಡುಗೆ ನೀಡಿರುವ ಬಿ.ಎಸ್. ವಿಶ್ವನಾಥ್ ಅವರ ಪ್ರತಿಮೆಯನ್ನು ಅತ್ಯಂತ ಸಂತೋಷದಿಂದ ಅನಾವರಣಗೊಳಿಸಲಾಗಿದೆ ಎಂದರು.

ಇಂದಿನ ಯುವಪೀಳಿಗೆ ಸಹಕಾರ ಕ್ಷೇತ್ರದಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು. ಬಿ.ಎಸ್.ವಿಶ್ವನಾಥ್ ಅವರ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಅಂತ ಕರೆ ನೀಡಿದರು. ಸಹಕಾರಿ ಧುರೀಣರಾದ ಜಿ.ಟಿ.ದೇವೇಗೌಡರು, ಸೋಮಶೇಖರ್, ಷಡಕ್ಷರಿ, ರೇವಣ್ಣನವರು ಸೇರಿದಂತೆ ಎಲ್ಲಾ ಸಹಕಾರಿಗಳನ್ನು ಅಭಿನಂದಿಸಿದ ಮುಖ್ಯಮಂತ್ರಿಗಳು ಮತ್ತು ಅವರ ಕುಟುಂಬ ವರ್ಗದವರಿಗೆ ಶುಭಕೋರಿದರು.

**ಬಿಜೆಪಿಗೆ ಗಾಂಧಿ ಹಾಗೂ ನೆಹರು ಅವರನ್ನು ತೆಗಳುವುದೇ ಕೆಲಸ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಬಿಜೆಪಿಯ ಪಾತ್ರವೇ ಇಲ್ಲ. ಮಹಾತ್ಮ ಗಾಂಧಿ, ನೆಹರು ಅವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು. ಅವರನ್ನು ತೆಗಳಿ, ಇಲ್ಲದ ಆರೋಪಗಳನ್ನು ಹೊರಿಸುವುದೇ ಅವರ ಕೆಲಸ. ನರೇಂದ್ರ ಮೋದಿ, ಬಿಜೆಪಿ, ಆರ್‌ಎಸ್‌ಎಸ್ ನವರು ಗಾಂಧಿ ಮತ್ತು ನೆಹರು ಅವರನ್ನು ಹೀಯಾಳಿಸುವುದನ್ನೇ ಉದ್ಯೋಗ ಮಾಡಿಕೊಂಡಿದ್ದಾರೆ ಅಂತ ಕಿಡಿಕಾರಿದರು.**

## ಕರ್ನಾಟಕದಲ್ಲಿ ಮುಂದಿನ ಮೂರು ದಿನ ಒಣ ಹವೆ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಎಲ್ಲೆಡೆ ಒಣ ಹವೆ ಕಂಡುಬಂದಿತ್ತು. ಅದೇ ರೀತಿ ಮುಂದಿನ ಮೂರು ದಿನ ಕರ್ನಾಟಕದಲ್ಲಿ ಮುಂದುವರಿಯುವ ಸಾಧ್ಯತೆ ಇದೆ. ಇನ್ನು ಬೆಂಗಳೂರು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮುಂದಿನ 48 ಗಂಟೆಗಳವರೆಗೆ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವು ಕಡೆಗಳಲ್ಲಿ ಮುಂಜಾನೆಯ ಸಮಯದಲ್ಲಿ ಮಂಜು ಇರುವ ಸಾಧ್ಯತೆ ಇದೆ. ಗರಿಷ್ಠ ಮತ್ತು ಕನಿಷ್ಠ


ಉದಯವಾಹಿನಿ ಚಿತ್ರ

ತಾಪಮಾನವು ಕ್ರಮವಾಗಿ 27 ಡಿಗ್ರಿ ಸೆ. ಮತ್ತು 20 ಡಿಗ್ರಿ ಸೆ. ಇರಬಹುದು. ನ.14ರಿಂದ 16ರವರೆಗೆ ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಒಣ ಹವೆ ಇರುವ ಸಾಧ್ಯತೆ ಇದೆ. ಇನ್ನು ನ.17ರಂದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಹಗುರದಿಂದ ಮಧ್ಯಮ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ಮೈಸೂರು, ಚಾಮರಾಜನಗರ, ರಾಮನಗರ, ಮಂಡ್ಯ, ಹಾಸನ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಹಗುರದಿಂದ ಸಾಧಾರಣ ಮಳೆ/ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

# ಡಿ.ಸಿ ಬೇನಾಮಿ ಆಸ್ತಿ: ಮಾಜಿ ಶಾಸಕ ಎ. ಮಂಜುನಾಥ್ ಆರೋಪ

• **ಉದಯವಾಹಿನಿ, ಬಿಡದಿ**

ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬೇನಾಮಿ ಹೆಸರಿನಲ್ಲಿ ಸುಮಾರು 400 ಎಕರೆ ಆಸ್ತಿ ಮಾಡಿದ್ದಾರೆ ಎಂದು ಮಾಜಿ ಶಾಸಕ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಎ. ಮಂಜುನಾಥ್ ಅವರು ಆರೋಪಿಸಿದರು. ವಿವಿಧೆಡೆ ಜಿಲ್ಲಾಧಿಕಾರಿ ಹೊಂದಿರುವ ಆಸ್ತಿಗೆ ಸಂಬಂಧಿಸಿದಂತೆ ನನ್ನ ಬಳಿ ದಾಖಲೆಗಳಿವೆ.

ಈ ಕುರಿತು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ದೂರು ನೀಡಲಾಗುವುದು ಎಂದು ಬೈರಮಂಗಲದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಯೋಜನಾ ಪ್ರದೇಶದಲ್ಲಿ ತಮ್ಮ ಏಜೆಂಟರ್ ಮೂಲಕ ಜಿಲ್ಲಾಧಿಕಾರಿ ಭೂಮಿ ಸ್ವಾಧೀನ ಮಾಡಿ ಕೊಂಡಿದ್ದಾರೆ. ಈ ವಿಷಯವನ್ನು ಡಿ.ಸಿ.ಗೆ ನೆರವಾದವರೇ ಬೀದಿಯಲ್ಲಿ ಮಾತನಾಡುತ್ತಿದ್ದಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳು ಸಹ ನನ್ನಲ್ಲಿವೆ. ಭ್ರಷ್ಟ ಅಧಿಕಾರಿಯಾಗಿರುವ ಯಶವಂತ್, ಜಿಲ್ಲೆಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ದೂರಿದರು. ಉಪನಗರಕ್ಕೆ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಪರಿಹಾರ ದರ ನಿಗದಿ ಕುರಿತು ಇತ್ತೀಚೆಗೆ ರೈತರ ಜೊತೆ ಸಭೆ ನಡೆಸಿದ ಜಿಲ್ಲಾಧಿಕಾರಿ. ಸಭೆ ಕುರಿತು. ರೈತರಿಗೆ ಸರಿಯಾಗಿ ಮಾಹಿತಿ ನೀಡಿಲ್ಲ. 7 ದಿನ ಮುಂಚೆ ನೀಡಬೇಕಿದ್ದ ನೋಟಿಸ್ ಅನ್ನು 2 ದಿನ ಮುಂಚೆ ಗ್ರಾಮ ಲೆಕ್ಕಾಧಿಕಾರಿಗಳಿಂದ ಅಂಗಡಿ ದೇವಾಲಯಗಳ ಗೋಡೆಗೆ ಅಂಟಿಸಿದ್ದಾರೆ.

ಯೋಜನೆ ವಿರುದ್ಧ ಇರುವ ರೈತರ ಅಭಿಪ್ರಾಯಕ್ಕೆ ಮನ್ನಣೆ ನೀಡದೆ ಉದ್ಧಟತನ ತೋರಿದ್ದಾರೆ ಎಂದರು. ಯೋಜನೆ ವಿರೋಧಿಸಿ ಸಭೆ ದಿನ ಜಿಲ್ಲಾಧಿಕಾರಿ ಕಚೇರಿ ಎದುರು ಹೋರಾಟ ನಡೆಸಿದ 25 ರೈತರ ವಿರುದ್ಧ ಜಿಲ್ಲಾಧಿಕಾರಿ ದೂರು ದಾಖಲಿಸಿದ್ದಾರೆ. ಅವರ ಸರ್ವಾಧಿಕಾರಿ ನಡೆ ಖಂಡಿಸಿ ಬಿಡದಿಯಿಂದ ಡಿ.ಸಿ ಕಚೇರಿವರೆಗೆ ಬೃಹತ್ ಪಾದಯಾತ್ರೆ ನಡೆಸಲು ಚಿಂತನೆ ಮಾಡಲಾಗಿದೆ.

ಸುಮಾರು 3,600 ಕುಟುಂಬಗಳ ರೈತರು ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ. ತಾಕತ್ತಿದ್ದರೆ ನಮ್ಮನ್ನು ಬಂಧಿಸಲಿ ಎಂದು ಸವಾಲು ಹಾಕಿದರು.

**ಜಿಬಿಡಿಎ ನಿರ್ದೇಶಕಗೆ ಮುತ್ತಿಗೆ:** ಉಪನಗರ ಯೋಜನೆ ವಿರೋಧಿಸಿ ಅಹೋರಾತ್ರಿ ಹೋರಾಟ ನಡೆಸುತ್ತಿರುವ ರೈತರು ಬೈರಮಂಗಲಕ್ಕೆ ಭೇಟಿ ನೀಡಿದ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ ನರಸಿಂಹಯ್ಯ ಅವರಿಗೆ ಮುತ್ತಿಗೆ ಹಾಕಿದರು. ನಮಗೆ ಭೂ ಸ್ವಾಧೀನ ಬೇಡವೆಂದರೂ ಸ್ವಾಧೀನ ಮಾಡುತ್ತಿದ್ದೀರಿ.

ಯಾವ ನೈತಿಕತೆ ಇಟ್ಟುಕೊಂಡು ನೀವು ಇಲ್ಲಿಗೆ ಬಂದಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡರು. ನಿಮಗೆ ನಿಜವಾಗಿಯೂ ರೈತರ ಬಗ್ಗೆ ಕಾಳಜಿ ಇದ್ದರೆ ನಮ್ಮ ಹೋರಾಟಕ್ಕೆ ಕೈ ಜೋಡಿಸಿ ಎಂದು ಸವಾಲು ಹಾಕಿದರು.


ಉದಯವಾಹಿನಿ ಚಿತ್ರ

> **ಯೋಜನೆ ಕುರಿತು ಮಾಹಿತಿ ಪಡೆಯುವ ಸಲುವಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಜಿಲ್ಲಾಧಿಕಾರಿಗೆ ಮೊಬೈಲ್ ಸಂಖ್ಯೆಗೆ ಕರೆ ಮಾಡಿದರೂ ಜಿಲ್ಲಾಧಿಕಾರಿ ಕರೆ ಸ್ವೀಕರಿಸದೆ ಉದ್ಧಟತನ ತೋರಿದ್ದಾರೆ.**
> -ಎಂ. ಮಂಜುನಾಥ್ ಮಾಜಿ ಶಾಸಕ

## ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಅಭೂತಪೂರ್ವ ಗೆಲುವು : ಬಿಜೆಪಿ ಸಂಭ್ರಮ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

ಬಿಹಾರ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ದಿಗ್ವಿಜಯ ಸಾಧಿಸಿದ ಹಿನ್ನೆಲೆ ಗುಂಡ್ಲುಪೇಟೆಯಲ್ಲಿ ಬಿಜೆಪಿ ಕಾರ್ಯಕರ್ತರು ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ನೇತೃತ್ವದಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು. ಪಟ್ಟಣದ ಎಂಡಿಸಿಸಿ ಬ್ಯಾಂಕ್ ವೃತ್ತದ ಬಳಿ ಜಮಾಯಿಸಿದ ಕಾರ್ಯಕರ್ತರು ಹರ್ಷೋದ್ಗಾರ ಮೊಳಗಿಸಿ ಪ್ರಧಾನಿ ನರೇಂದ್ರ ಮೋದಿ, ನಿತೀಶ್ ಕುಮಾರ್ ಹಾಗೂ ಬಿಹಾರ ಮತದಾರರಿಗೆ ಜೈಕಾರ ಕೂಗಿದರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಹಾಗೂ ಬಿಜೆಪಿ ಚಾಮರಾಜನಗರ ಜಿಲ್ಲಾಧ್ಯಕ್ಷ ನಿರಂಜನ್ ಕುಮಾರ್ ಎನ್‌ಡಿಎ ಮೈತ್ರಿಕೂಟಕ್ಕೆ ಅಭೂತಪೂರ್ವ ಜನಮನ್ನಣೆ ದೊರೆತಿದೆ, ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನಾಯಕತ್ವಕ್ಕೆ ಮೆಚ್ಚಿ ಮತ ನೀಡಿದ ಬಿಹಾರದ ಪ್ರಬುದ್ಧ ಮತದಾರರು ಭವ್ಯ ಭಾರತ ನಿರ್ಮಾಣಕ್ಕೆ ಕೈ ಜೋಡಿಸಿದ್ದಾರೆ. ನರೇಂದ್ರ ಮೋದಿಯವರ ಜನಪರ ಆಡಳಿತಕ್ಕೆ ಬೋ ಪರಾಕ್ ಹೇಳಿರುವ ಮತದಾರರು ಮಹಾಘಟಬಂದನ್‌ಗೆ ತಿಲಾಂಜಲಿ ಇಟ್ಟಿರುವುದು ಮೋದಿಯವರ ಭ್ರಷ್ಟಾಚಾರ ರಹಿತ ಆಡಳಿತಕ್ಕೆ ಸಿಕ್ಕ ಪ್ರತಿಫಲವಾಗಿದೆ, ಆದುದರಿಂದ ದೇಶವೇ ಹರ್ಷೋದ್ಗಾರದಲ್ಲಿ ಮೊಳಗಲು ಕಾರಣೀಭೂತರಾದ ಬಿಹಾರದ ಪ್ರಜ್ಞಾವಂತ ಮತದಾರ ಪ್ರಭುಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

### ಇಂಡುವಾಳು ಗ್ರಾಮ ಪಂಚಾಯಿತಿ: ನ.17ರೊಳಗೆ ವರದಿ ಸಲ್ಲಿಸಲು ಬಿ.ವೀರಪ್ಪ ಆದೇಶ

# 1281 ಇ-ಖಾತಾ ಕಡತ ನಾಪತ್ತೆ!

• **ಉದಯವಾಹಿನಿ, ಮಂಡ್ಯ**

ತಾಲ್ಲೂಕಿನ ಇಂಡುವಾಳು ಗ್ರಾಮ ಪಂಚಾಯಿತಿಯಲ್ಲಿ 2021-2025ರ ನಡುವೆ ರಚಿಸಲಾದ 1281 ಇ-ಖಾತಾ ಕಡತಗಳು ನಾಪತ್ತೆಯಾಗಿವೆ. ಕಡತಗಳ ಪತ್ತೆಗಾಗಿ ಗ್ರಾಮ ಪಂಚಾಯಿತಿ ಸಿಬ್ಬಂದಿ ಹಗಲು ರಾತ್ರಿ ಕಚೇರಿಯಲ್ಲಿ ಹುಡುಕಾಟ ನಡೆಸಿದ್ದಾರೆ. ಕಳೆದ ಐದು ವರ್ಷಗಳಲ್ಲಿ ರಚಿಸಲಾದ 1929 ಇ-ಖಾತಾ ಕಡತಗಳಲ್ಲಿ ಕೇವಲ 648 ಫೈಲ್‌ಗಳನ್ನು ಮಾತ್ರ ಪತ್ತೆ ಹಚ್ಚಲಾಗಿದೆ. ಇವುಗಳಲ್ಲಿ 617 ಕಡತಗಳು ಕಾನೂನಿಗೆ ಅನುಗುಣವಾಗಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಅಡಿಯಲ್ಲಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ಅವರಿಗೆ ಉಪಲೋಕಾಯುಕ್ತರು ನಿರ್ದೇಶಿಸಿದ್ದಾರೆ. ನ.17ರ ವಿಚಾರಣೆ ವೇಳೆಗೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸಲು ಸೂಚಿಸಿದ್ದಾರೆ.

**ಹಗಲು ರಾತ್ರಿ ಕಚೇರಿಯಲ್ಲಿ ಹುಡುಕಾಟ**

**ಏನಿದು ಪ್ರಕರಣ:** ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಮೇ 26ರಂದು ಇಂಡುವಾಳು ಗ್ರಾಮ ಪಂಚಾಯಿತಿಗೆ ದಿಢೀರ್ ಭೇಟಿ ಕೊಟ್ಟು, ದಾಖಲೆಗಳನ್ನು ಪರಿಶೀಲಿಸಿದ್ದರು. ಕಿರಗಂದೂರು ಗ್ರಾಮದ ಸರ್ವೆ ನಂ.26ರ 17 ಗುಂಟೆ ಗೋಮಾಳ ಜಮೀನಿನಲ್ಲಿ ಯಾವುದೇ ಮಂಜೂರಾತಿ ಇಲ್ಲದೇ ಅನ್ಯಕ್ರಾಂತವಾಗದ, ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯಾಗದೇ ಇರುವ ಸರ್ಕಾರಿ ಜಮೀನನ್ನು ಒಟ್ಟು 12 ನಿವೇಶನಗಳನ್ನು ವಿಜಯ್‌ಕುಮಾರ್ ಬಿನ್ ಚೆನ್ನಪ್ಪ ಅವರ ಹೆಸರಿನಲ್ಲಿ ಖಾತೆ ಮಾಡಿ, ನಿಯಮಬಾಹಿರವಾಗಿ ನಮೂನೆ 9 ಮತ್ತು 11ಎ ನಮೂನೆಗಳನ್ನು ವಿತರಿಸಿದ್ದಾರೆ ಮತ್ತು ಒಂದೇ ತಿಂಗಳಲ್ಲಿ ಖಾತೆ ವರ್ಗಾವಣೆ ಮಾಡಿದ್ದಾರೆ ಎಂಬ ಆಪಾದನೆ ಕೇಳಿಬಂದಿತ್ತು.

**ವರದಿಗೆ ಸೂಚನೆ:** ಗ್ರಾಮ ಪಂಚಾಯಿತಿಯಲ್ಲಿ ಇ-ಖಾತೆಗಳ ಎಲ್ಲಾ ಕಡತಗಳನ್ನು ಪರಿಶೀಲನೆ ಮಾಡಿ. ಅವುಗಳ ನೈಜತೆ ಬಗ್ಗೆ ವರದಿ ಮಾಡಲು ಉಪಲೋಕಾಯುಕ್ತರು ಸೂಚಿಸಿದ್ದರು. ಇದರ ಬೆನ್ನಲ್ಲೇ ಜೂನ್ 11ರಂದು ಸ್ವಯಂಪ್ರೇರಿತ ದೂರು ದಾಖಲಾಗಿತ್ತು. ನಂತರ, ತಹಶೀಲ್ದಾರ್, ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ಜಂಟಿ ವರದಿ ಸಲ್ಲಿಸಿದ್ದು, ಕಡತಗಳ ನಾಪತ್ತೆ ಬಗ್ಗೆ ಮಾಹಿತಿ ನೀಡಿದ್ದರು. ನ.17ರೊಳಗೆ ಕಡತಗಳನ್ನು ಪತ್ತೆ ಹಚ್ಚದಿದ್ದರೆ, ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 12(3)ರ ಅಡಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ದುರಾಡಳಿತ, ಪಕ್ಷಪಾತ, ಸಮಗ್ರತೆಯ ಕೊರತೆ ಮತ್ತು ಕರ್ತವ್ಯ ಲೋಪವನ್ನು ರಾಜ್ಯ ಸರ್ಕಾರಕ್ಕೆ ವರದಿ ಮಾಡುವ ಬಗ್ಗೆಯೂ ಎಚ್ಚರಿಕೆ ನೀಡಲಾಗಿದೆ.



ಉದಯವಾಹಿನಿ ಚಿತ್ರ

> **ನಾಪತ್ತೆಯಾದ ಕಡತಗಳನ್ನು ಪತ್ತೆ ಹಚ್ಚಲು ಪಿಡಿಒ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಕಡತ ಪತ್ತೆಯಾಗದಿದ್ದರೆ ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ ಮಾಡಿಸಲಾಗುವುದು.**
> -ಕೆ.ಆರ್.ನಂದಿನಿ ಸಿಇಒ ಮಂಡ್ಯ ಜಿಲ್ಲಾ ಪಂಚಾಯಿತಿ

# ಪುಕ್ಕಟೆ ಭರವಸೆ ಮಾತಿನ ಕಾಲಹರಣ ಬೇಡ

### ಕೆರೆಗಳಿಗೆ ನೀರು ತುಂಬಿಸಿ ಜಾಣತನ ತೋರಿಸಿ : ಗಣೇಶ್ ಪ್ರಸಾದ್‌ಗೆ ತಿರುಗೇಟು

• **ಉದಯವಾಹಿನಿ, ಗುಂಡ್ಲುಪೇಟೆ**

ಪುಕ್ಕಟೆ ಭರವಸೆ ಮಾತಿನ ಕಾಲಹರಣ ಬಿಟ್ಟು ಕ್ಷೇತ್ರದಲ್ಲಿನ ಕೆರೆಗಳಿಗೆ ನೀರು ತುಂಬಿಸುವ ಮೂಲಕ ನಿಮ್ಮ ಜಾಣತನವನ್ನ ಸಾಭೀತುಪಡಿಸಿ , ಜಾಣರ್ಯಾರು ಪೆದ್ದ ಯಾರು ಎಂಬುದನ್ನ ಕ್ಷೇತ್ರದ ಮತದಾರರು ವಿಮರ್ಶೆ ಮಾಡಲಿದ್ದಾರೆ ಎಂದು ಹಾಲಿ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ಗೆ ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ತಿರುಗೇಟು ನೀಡಿದರು.

**ಸ್ವಾರ್ಥ ರಾಜಕಾರಣ**

**ಕ್ಷೇತ್ರದ ಏಳ್ಗೆ ಕುರಿತು ಕಿಂಚಿತ್ತೂ ಆಸಕ್ತಿಯಿಲ್ಲದ ತಾವು ಸ್ವಏಳ್ಗೆಗೆ ಹೆಚ್ಚಿನ ಒತ್ತು ನೀಡಿದ್ದೀರಿ, ಕಳೆದ 25 ವರ್ಷದಲ್ಲಿ ರಸ್ತೆ ಭಾಗ್ಯ ಕಾಣದ ರಂಗನಾಥಪುರಕ್ಕೆ ಡಾಂಭಾರು ರಸ್ತೆ ಕಲ್ಪಿಸಿದ್ದು ಬಿಜೆಪಿ ಸರ್ಕಾರ, ನಿಮ್ಮ ಸ್ವಗ್ರಾಮ ಹಾಲಹಳ್ಳಿ ಸೇರಿದಂತೆ ಕ್ರಷರ್‌ಗೆ ಗುಣಮಟ್ಟದ ಸಂಪರ್ಕ ರಸ್ತೆ ಮಾಡಿಸಿಕೊಳ್ಳುವ ನಿಮ್ಮ ಬದ್ಧತೆ ಕುರಿತು ನಮಗೆ ಅರಿವಿದೆ ಎಂದು ಕಾರವಾಗಿ ಪ್ರತಿಕ್ರಿಯಿಸಿದರು.**

ಕೆರೆಗಳಿಗೆ ನೀರು ತುಂಬಿಸುವಂತೆ ಹಮ್ಮಿಕೊಳ್ಳಲಾಗಿದ್ದ ಕಾಲ್ನಡಿಗೆ ಜಾಥಾ ಕುರಿತು ಹಾಲಿ ಶಾಸಕರು ಹಗುರವಾಗಿ ಮಾತನಾಡಿದ್ದಾರೆ ಎಂದು ಆಪಾದಿಸಿ ವಾಗ್ದಾಳಿ ನಡೆಸಿದರು.


ಉದಯವಾಹಿನಿ ಚಿತ್ರ

**ಅಧಿಕಾರದ ಹಪಾಹಪಿ**

**ಪೆದ್ದರ ಆಳ್ವಿಕೆಯಲ್ಲಿ ಕ್ಷೇತ್ರ ಹದಗೆಟ್ಟುಹೋಗಿತ್ತು ನೀವು ಬಹಳ ಬುದ್ಧಿವಂತರಾಗಿದ್ದೀರಿ ಆದರೆ ಕ್ಷೇತ್ರದ ಜ್ವಲಂತ ಸಮಸ್ಯೆಗಳ ಪಿತಾಮಹರಾಗಿದ್ದೀರಿ, ಮೊದಲು ಅಭಿವೃದ್ಧಿ ಕೆಲಸಗಳ ಪಟ್ಟಿಯನ್ನ ಅಧ್ಯಯನ ಮಾಡುವದನ್ನ ಕಲಿಯಿರಿ ನಂತರ ನಿಮ್ಮ ಜಾಣತನ ಪ್ರದರ್ಶಿಸಿ ಅಧಿಕಾರದ ಹಪಾಹಪಿಯಿಂದ ಜನರನ್ನ ಸಂಕಷ್ಟಕ್ಕೆ ದೂಡಿರುವ ಕೀರ್ತಿ ನಿಮ್ಮದಾಗಿದೆ ಎಂದು ಲೇವಡಿ ಮಾಡಿದರು.**

**'ಪೆದ್ದ' ಎಂಬುದಕ್ಕೆ ವೇದಿಕೆ**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಪ್ರತಿಪಕ್ಷಕ್ಕಿರುವ ಜನಬೆಂಬಲ ನೋಡಿ ಸಹಿಸಲಾಗದೆ ಉದ್ವೇಗಕ್ಕೆ ಒಳಗಾಗಿದ್ದಾರೆ. ರೈತಪರವಾಗಿ ಕೆಲಸ ಮಾಡುವ ಇಚ್ಛಾಶಕ್ತಿ ಕೊರತೆಯಿಂದ ಇಂದು ಕ್ಷೇತ್ರಕ್ಕೆ ಸಂಕಷ್ಟ ಬಂದೊದಗಿದೆ, ನೀರಿಗಾಗಿ ಅಹೋರಾತ್ರಿ ಧರಣಿ ನಡೆಸುತ್ತಿರುವ ರೈತರಿಗೆ ನವೆಂಬರ್ 4 ರ ಒಳಗೆ ಕೆರೆಗಳಿಗೆ ನೀರು ತುಂಬಿಸಲು ಬದ್ಧ ಎಂಬ ಭರವಸೆ ಕೊಟ್ಟ ತಾವು ಮಾತಿನ ವರಸೆ ಬದಲಾಯಿಸಿದ್ದೀರಿ, ಚುನಾಯಿತ ಜನಪ್ರತಿನಿಧಿಯಾಗಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಬೇಕಿದ್ದವರು ಸ್ವಾರ್ಥತನಕ್ಕೆ ಇಳಿದಿದ್ದೀರಿ ಎಂದು ಕಿಡಿಕಾರಿದರು . ಕೆರೆಗಳಿಗೆ ನೀರು ತುಂಬಿಸಲು ವಿಫಲರಾದ ನೀವು ಜನತೆಯ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

**ರೈತರ ಸಮಸ್ಯೆ ಆಲಿಸದೆ ನಿರ್ಲಕ್ಷ್ಯ :** ತಹಶೀಲ್ದಾರ್ ಕಚೇರಿ ಆವರಣದಲ್ಲಿ ರೈತರು ನಿರಂತರವಾಗಿ ಧರಣಿ ನಡೆಸುತ್ತಿದ್ದು 31 ದಿನಗಳು ಗತಿಸಿವೆ ಆದರೆ ಬೇಡಿಕೆ ಈಡೇರಿಸಲು ಮುಂದಾಗಬೇಕಿದ್ದ ಶಾಸಕರ ಬೇಜವಬ್ದಾರಿತನದಿಂದ ಇಡೀ ಕ್ಷೇತ್ರದ ಮರ್ಯಾದೆ ರಾಜ್ಯ ಮಟ್ಟದಲ್ಲಿ ಹರಾಜಾಗಲು ಕಾರಣೀಭೂತರಾಗಿದ್ದೀರಿ ನಿಮ್ಮಿಂದ ಬದ್ಧತೆ ಪಾಠ ಕಲಿಯುವ ಅಗತ್ಯ ಬಿಜೆಪಿಗಿಲ್ಲ ರೈತರ ಜೀವನ ಹಸನಾಗಲು ಕಾರ್ಯಕ್ರಮ ರೂಪಿಸಬೇಕಿರುವ ಜವಾಬ್ದಾರಿಯುತ ಸ್ಥಾನದ ಘನತೆ ಹಾಳುಗೆಡವಿರುವುದು ಕ್ಷೇತ್ರದ ಮತದಾರರ ದುರಾದೃಷ್ಟವಾಗಿದೆ, ಕಾಲಜ್ಞಾನಿಗಳಾಗಿರುವ ತಾವು ಹಿಂದಿನ ಬಿಜೆಪಿ ಅವಧಿಯ ಅಭಿವೃದ್ಧಿ ಕೆಲಸಗಳನ್ನ ತಮ್ಮದೆಂದು ಬಿಂಬಿಸಿಕೊಳ್ಳುತ್ತಿರುವುದು 'ಪೆದ್ದ' ಎಂಬುದಕ್ಕೆ ವೇದಿಕೆ ಹಾಕಿಕೊಟ್ಟಂತಿದೆ ಎಂದು ವ್ಯಂಗ್ಯವಾಡಿದರು.

**ರಾಜೀನಾಮೆ ಸವಾಲು**

**ಮೋಟಾರ್ ದುರಸ್ಥಿಪಡಿಸಲು ಸುಮಾರು ಎರಡು ಕೋಟಿ ಹಣ ವ್ಯಯವಾಗಲಿದೆ ಈಗಾಗಲೇ 66 ಲಕ್ಷ ಹಣ ವ್ಯಯಿಸಿ ಮೋಟಾರ್ ದುರಸ್ತಿಗೊಳಿಸಿ ನೀರು ಹರಿಸಲಾಗುತ್ತಿದೆ, ಕ್ಷೇತ್ರದ ರೈತರ ಮೇಲೆ ಅಷ್ಟೊಂದು ಕಾಳಜಿ ಇರುವ ಮಾಜಿ ಶಾಸಕರು ಎರಡು ಕೋಟಿ ಹಣ ನೀಡುವ ಮೂಲಕ ರಿಪೇರಿ ಮಾಡಿಸಲಿ ಬಿಲ್ ಪಾವತಿಸುವ ಜವಾಬ್ದಾರಿ ನನ್ನದು ಎಂಬ ಹೇಳಿಕೆಗೆ ಸಂಬಂಧಿಸಿದಂತೆ ಮೋಟಾರ್ ರಿಪೇರಿಗೆ 2 ಕೋಟಿ ಹಣ ನೀಡಲು ಬದ್ಧನಾಗಿದ್ದೇನೆ, ಜನರ ನಂಬಿಕೆ ಕಳೆದುಕೊಂಡ ಶಾಸಕರು ರಾಜೀನಾಮೆ ನೀಡಲಿ ಎಂದು ಸವಾಲು ಹಾಕಿದರು.**

ಕ್ಷೇತ್ರದ ಪ್ರದಕ್ಷಿಣೆ ಹಾಕುವಂತಹ ಜನಪರ ಕೆಲಸಗಳನ್ನ ಸಾಕಾರಗೊಳಿಸಿರುವ ಉದಾಹರಣೆ ಇದ್ದಲ್ಲಿ ಮತದಾರರ ಮುಂದಿರಿಸಿ, ಯಡಿಯೂರಪ್ಪ ಅವರ ಕುರಿತು ಮಾತನಾಡುವ ನೀವು ಅಂದು ಸಂದಿಗ್ಧ ಸ್ಥಿತಿಯಲ್ಲಿದ್ದ ಚಾಮರಾಜನಗರ ಜಿಲ್ಲೆ ರೈತರ ಏಳ್ಗೆಗಾಗಿ 212 ಕೋಟಿ ರೂ.ಗಳನ್ನ ಬಿಡುಗಡೆಗೊಳಿಸಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಜೀವ ತುಂಬಿದ್ದು ಬಿಜೆಪಿ ಸರ್ಕಾರ ಎಂಬುದು ನಿಮ್ಮ ಗಮನಕ್ಕಿರಲಿ ಎಂದರು.

## ಉದಯವಾಹಿನಿ ವರದಿಗೆ ಎಚ್ಚೆತ್ತು ಗುಂಡಿ ಬಿದ್ದ ರಸ್ತೆಗೆ ಡಾಂಬಾರು

• **ಉದಯವಾಹಿನಿ, ಗುಂಡ್ಲುಪೇಟೆ**

ಗುಂಡಿಬಿದ್ದ ತೆರಕಣಾಂಬಿ ರಸ್ತೆಗೆ ಕೊನೆಗೂ ಡಾಂಬಾರು ಭಾಗ್ಯ ಒದಗಿಬಂದಿದೆ, ವಾಹನ ಸವಾರರ ಸಮಸ್ಯೆಗೆ ಸ್ಪಂದಿಸಿದ ಉದಯವಾಹಿನಿ ಪತ್ರಿಕೆ ರಾಜ್ಯ ಹೆದ್ದಾರಿಯಲ್ಲಿ ಗುಂಡಿಗಳದ್ದೇ ಕಾರುಬಾರು ಶೀರ್ಷಿಕೆಯಡಿ ಸುದ್ದಿ ಬಿತ್ತರಿಸಿತ್ತು


ಉದಯವಾಹಿನಿ ಚಿತ್ರ


ರಸ್ತೆಯಲ್ಲಿ ಗುಂಡಿಗಳ ಕಾರುಬಾರು: ದುರಸ್ಥಿಗೆ ಸಾರ್ವಜನಿಕರ ಆಗ್ರಹ !

ಗುಂಡ್ಲುಪೇಟೆ ಚಾಮರಾಜನಗರ ರಾಜ್ಯ ಹೆದ್ದಾರಿ ಎರಡು ಬದಿಯ ಗಿಡಗಂಟಿಗಳನ್ನ ತೆರವು

ಇದಾದ ಬೆನ್ನಲ್ಲೇ ಎಚ್ಚೆತ್ತ ಲೋಕೋಪಯೋಗಿ ಇಲಾಖೆ ತರಾತುರಿಯಲ್ಲಿ ರಸ್ತೆಗಳ ಗುಂಡಿಮುಚ್ಚುವ ಕಾರ್ಯಕ್ಕೆ ಮುಂದಾಗಿದೆ. ಗುಂಡ್ಲುಪೇಟೆಯಿಂದ ತೆರಕಣಾಂಬಿ ಮಾರ್ಗವಾಗಿ ಜಿಲ್ಲಾ ಕೇಂದ್ರ ಚಾಮರಾಜನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಗ್ಗಳ ಗ್ರಾಮ ಬಿಟ್ಟರೆ ಲಕ್ಕೂರು ಗೇಟ್ ತನಕ ಅಪಾಯಕಾರಿ ಗುಂಡಿಗಳನ್ನ ಮುಚ್ಚುವ ಕಾರ್ಯ ವೇಗ ಪಡೆದುಕೊಂಡಿದೆ.

ಉದಯವಾಹಿನಿ ವರದಿಗೆ ಸ್ಪಂದಿಸಿದ ಎಇಇ ರವಿಕುಮಾರ್ ಸ್ಥಳದಲ್ಲೇ ಹಾಜರಿದ್ದು ಗುಂಡಿಗಳಿಗೆ ಮುಕ್ತಿ ನೀಡಿದ್ದಾರೆ. ಉದಾಯವಾಹಿನಿ ಪತ್ರಿಕೆಗೆ ಲಕ್ಕೂರು, ತೆರಕಣಾಂಬಿ ಸೇರಿದಂತೆ ಸುತ್ತಲಿನ ಗ್ರಾಮದ ಜನರು ಕೃತಜ್ಞತೆ ತಿಳಿಸಿದ್ದಾರೆ.

## ಕೃಷ್ಣ ನೀರನ್ನು ಜಿಲ್ಲೆಗೆ ಹರಿಸಲು ಒತ್ತಾಯ

• **ಉದಯವಾಹಿನಿ, ಮುಳಬಾಗಿಲು**

ಆಂಧ್ರಪ್ರದೇಶದ ಕುಪ್ಪಂ ಕಡೆಗೆ ಹರಿಯುತ್ತಿರುವ ಕೃಷ್ಣಾನದಿ ನೀರಿನಲ್ಲಿ ಕೇಂದ್ರ ಸರ್ಕಾರ ಕೋಲಾರ ಜಿಲ್ಲೆಗೆ 14.5 ಟಿಎಂಸಿ ನೀರನ್ನು ಹರಿಸಬೇಕೆಂದು ಒತ್ತಾಯಿಸಿ ರೈತ ಸಂಘ ನಂಗಲಿ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿತು. ಮಳೆಗಾಲದಲ್ಲಿ ತಾಲ್ಲೂಕಿನ ಬಹುತೇಕ ಕೆರೆಗಳ ನೀರು ವ್ಯರ್ಥವಾಗಿ ಆಂಧ್ರ, ತಮಿಳುನಾಡಿಗೆ ಹರಿಯುತ್ತಿವೆ. ಹಾಗಾಗಿ ಮಳೆ ನೀರು ಸಂಗ್ರಹ ಚೆಕ್ ಡ್ಯಾಂ ನಿರ್ಮಿಸಬೇಕು.

ಜೊತೆಗೆ ಆಂಧ್ರಪ್ರದೇಶದ ಕೃಷ್ಣ ನದಿ ನೀರನ್ನು ಜಿಲ್ಲೆಗೆ ಹರಿಸಿ ಶುದ್ಧ ಕುಡಿಯುವ ನೀರು ಉತ್ಪಾದನೆ ಮಾಡಬೇಕೆಂದು ಪ್ರತಿಭಟನಾಕಾರರು ತಹಶೀಲ್ದಾರ್ ವಿ.ಗೀತಾ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. 600 ಕಿ.ಮೀ ದೂರದಿಂದ ಜಿಲ್ಲೆಗೆ ಹೊಂದಿಕೊಂಡಿರುವ ಆಂಧ್ರದ ಕುಪ್ಪಂಗೆ ಕೃಷ್ಣ ನೀರು ಹರಿಯುತ್ತಿದೆ. ಆದರೆ, ಜಿಲ್ಲೆಯ ಪ್ರತಿನಿಧಿಗಳು ಕೆ.ಸಿ.ವ್ಯಾಲಿ, ಎತ್ತಿನಹೊಳೆ ನೀರಾವರಿ ಯೋಜನೆಗಳಿಂದ ಜನರನ್ನು ದಿಕ್ಕುತಪ್ಪಿಸಿ, ಬೆಂಗಳೂರು ತ್ಯಾಜ್ಯ ನೀರನ್ನು ಕೋಲಾರದ ಕೆರೆಗಳಿಗೆ ಹರಿಸಿ ರೈತರ ಜೀವನದ ಜೊತೆ ಚಲ್ಲಾಟವಾಡುತ್ತಿದ್ದಾರೆ. ಹಾಗಾಗಿ ಕುಪ್ಪಂಗೆ ಹೋಗುತ್ತಿರುವ ನೀರನ್ನು ಜನ ಪ್ರತಿನಿಧಿಗಳು ಕೋಲಾರ ಜಿಲ್ಲೆಗೆ ಹರಿಯುವಂತೆ ಮಾಡಬೇಕೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣ ಗೌಡ ಒತ್ತಾಯಿಸಿದರು. ಕೃಷ್ಣಾನದಿ ನೀರಿನಲ್ಲಿ ಜಿಲ್ಲೆಗೆ 14.5 ಟಿಎಂಸಿ ನೀರನ್ನು ಹರಿಸುವಂತೆ ಆಂಧ್ರಪ್ರದೇಶ ಹಾಗೂ ಕೇಂದ್ರದ ಸಚಿವರಿಗೆ ಮನವಿ ಮಾಡಬೇಕು ಎಂದು ಆಗ್ರಹಿಸಿದರು. ಮನವಿ ಸ್ವೀಕರಿಸಿದ ತಹಶೀಲ್ದಾರ್ ವಿ. ಗೀತಾ ಮಾತನಾಡಿ, ಮನವಿಯನ್ನು ಹಿರಿಯ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಕಳುಹಿಸುವ ಭರವಸೆ ನೀಡಿದರು.


ಉದಯವಾಹಿನಿ ಚಿತ್ರ

## ಮಿನಿ ನ್ಯೂಸ್

### ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಕುಮಾರಸ್ವಾಮಿ ಒತ್ತಾಯ

• **ಉದಯವಾಹಿನಿ, ಕನಕಪುರ**

ಪೌತಿ ಖಾತೆ ಮಾಡಿಕೊಡಲು ಲಂಚ ಸ್ವೀಕರಿಸಿ ಸಿಕ್ಕಿಬಿದ್ದಿರುವ ಕಂದಾಯ ಅಧಿಕಾರಿಗಳಿಗೆ ಕಾನೂನು ರೀತಿ ಶಿಕ್ಷೆ ಆಗುವಂತೆ ಲೋಕಾಯುಕ್ತ ಅಧಿಕಾರಿಗಳು ಕ್ರಮಕೈಗೊಳ್ಳಬೇಕೆಂದು ಜಯಕರ್ನಾಟಕ ಜನಪರ ವೇದಿಕೆ ರಾಜ್ಯ ಸಲಹೆಗಾರ ಕುಮಾರಸ್ವಾಮಿ ಒತ್ತಾಯಿಸಿದರು. ನಗರದ ರಾಜಾರಾವ್ ರಸ್ತೆಯಲ್ಲಿರುವ ರೈತ ಸಂಘದ ಕಚೇರಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಲೋಕಾಯುಕ್ತ ಬಲೆಗೆ ಬಿದ್ದಿರುವ ಕಂದಾಯ ಅಧಿಕಾರಿಗಳ ಭ್ರಷ್ಟಾಚಾರ ಕುರಿತು ಮಾತನಾಡಿದರು.

ಕನಕಪುರ ತಾಲ್ಲೂಕಿನಲ್ಲಿ ಎಲ್ಲಾ ಇಲಾಖೆಗಳು ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿವೆ. ಸಾರ್ವಜನಿಕ ಕೆಲಸ ಕಾರ್ಯಗಳು ಇಲ್ಲಿ ನಡೆಯುತ್ತಿಲ್ಲ. ಪ್ರತಿಯೊಂದಕ್ಕೂ ಲಂಚ ನೀಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಆರೋಪಿಸಿದರು. ರೆವಿನ್ಯೂ ಇನ್ಸ್‌ಪೆಕ್ಟರ್ ತಂಗರಾಜು, ಗ್ರಾಮ ಲೆಕ್ಕಾಧಿಕಾರಿ ಚಂದ್ರೇಗೌಡ ಭ್ರಷ್ಟಾಚಾರದಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರಿಗೆ ಕಠಿಣ ಶಿಕ್ಷೆಯಾಗಬೇಕೆಂದು ಆಗ್ರಹಿಸಿದರು. ರೈತ ಸಂಘದ ಶಿವ ಸ್ವಾಮಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

### ಡಿಸಿ ಕಚೇರಿ ಮುಂಭಾಗ ಪ್ರತಿಭಟನೆಗೆ ಅಂಕುಶ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ನಗರದ ಜಿಲ್ಲಾಡಳಿತ ಭವನ ಹೊರಭಾಗದಲ್ಲಿ ಪ್ರತಿಭಟನೆ ನಡೆಸಲು ಇನ್ನು ಕಡ್ಡಾಯವಾಗಿ ಅನುಮತಿ ಪಡೆಯಬೇಕು. ಅಲ್ಲದೆ ಈ ಕೋರಿಕೆಗೆ ಪೊಲೀಸರು ಸಹ ನಿಶಾನೆ ತೋರಬೇಕು. ಆಗ ಮಾತ್ರ ಪ್ರತಿಭಟನೆ ನಡೆಸಲು ಅವಕಾಶ ದೊರೆಯುತ್ತದೆ. ಹೌದು ಜಿಲ್ಲಾಡಳಿತ ಭವನದ ಆವರಣದ ಹೊರಭಾಗದಲ್ಲಿ ಅಂದರೆ ರಸ್ತೆ ಬದಿಯಲ್ಲಿ ಪ್ರತಿಭಟನೆ ನಡೆಸಲು ಸಹ ಜಿಲ್ಲಾಡಳಿತ ಒಪ್ಪಿಗೆ ನೀಡಬೇಕು. ಈ ಸಂಬಂಧ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಆದೇಶ ಸಹ ಹೊರಡಿಸಿದ್ದಾರೆ.

ಪ್ರಜಾಸೌಧದ ಆವರಣದ ಹೊರಭಾಗದಲ್ಲಿ ಅನುಮತಿ ಪಡೆಯದೆ ಚಳವಳಿಗಳನ್ನು ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಇನ್ನು ಮುಂದೆ ಯಾವುದೇ ಚಳವಳಿ ಮಾಡಬೇಕಾದಲ್ಲಿ 10 ದಿನಗಳ ಮುಂಚಿತವಾಗಿ ಅನುಮತಿ ಪಡೆಯಲು ಈ ಕಚೇರಿಗೆ ಪತ್ರ ಸಲ್ಲಿಸಬೇಕು.

ತಾವು ಸಲ್ಲಿಸಿದ ಕೋರಿಕೆಯನ್ನು ಪೊಲೀಸ್ ಇಲಾಖೆಗೆ ಸಲ್ಲಿಸಿ ಸದರಿ ಇಲಾಖೆಯಿಂದ ಪರಿಶೀಲಿಸಿ ಅನುಮತಿ ನೀಡುವ ಕುರಿತು ಈ ಕಚೇರಿಗೆ ಪ್ರಸ್ತಾವ ಸಲ್ಲಿಸಿದಲ್ಲಿ ಚಳವಳಿ ನಡೆಸಲು ಅನುಮತಿ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

### ಬಿಜೆಪಿಯಿಂದ ಏಕತಾ ನಡಿಗೆ

• **ಉದಯವಾಹಿನಿ, ಶಿರಾ**

ನಗರದ ಪ್ರವಾಸಿ ಮಂದಿರ ವೃತ್ತದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನ, ರಾಷ್ಟ್ರೀಯ ಏಕತಾ ದಿನದ ಅಂಗವಾಗಿ ನಡೆದ ಏಕತಾ ನಡಿಗೆಗೆ ಸಂಸದ ಗೋವಿಂದ ಕಾರಜೋಳ ಚಾಲನೆ ನೀಡಿದರು. ಸಂಸದ ಗೋವಿಂದ ಕಾರಜೋಳ ಮಾತನಾಡಿ, ದೇಶದ ಏಕತೆಗಾಗಿ ಪಟೇಲ್ ಅವರು ತೆಗೆದುಕೊಂಡ ದೃಢನಿರ್ಧಾರಗಳಿಂದ ದೇಶ ಸದೃಢವಾಗಿದೆ ಎಂದರು. ವಿಧಾನ ಪರಿಷತ್ ಸದಸ್ಯ ಹಾಗೂ ಮಧುಗಿರಿ ಸಂಘಟನಾತ್ಮಕ ಬಿಜೆಪಿ ಘಟಕದ ಅಧ್ಯಕ್ಷ ಚಿದಾನಂದ್ ಎಂ.ಗೌಡ ಮಾತನಾಡಿ, ಒಂದೇ ಭಾರತ ಆತ್ಮನಿರ್ಭರ ಭಾರತ ಘೋಷವಾಕ್ಯದಡಿಯಲ್ಲಿ ನಗರದಲ್ಲಿ ಏಕತಾ ನಡಿಗೆ ನಡೆಸಲಾಗುತ್ತಿದೆ. ದೇಶದ ಸಂಘಟನೆಯ ದೃಷ್ಟಿಯಿಂದ ಪ್ರತಿಯೊಬ್ಬರು ಏಕತಾ ನಡಿಗೆಯಲ್ಲಿ ಭಾಗವಹಿಸಬೇಕು ಎಂದರು.

### 30 ಕೊಳವೆ ಬಾವಿ ಕೊರೆಸಲು ನಿರ್ಧಾರ

• **ಉದಯವಾಹಿನಿ, ತುಮಕೂರು**

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಹೊಸದಾಗಿ 30 ಕೊಳವೆ ಬಾವಿ ಕೊರೆಸಲು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು ಅನುಮೋದನೆ ನೀಡಿದ್ದಾರೆ. ಕೊಳವೆ ಬಾವಿಗಳನ್ನು ಕೊರೆಸಿದ ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆ ನಡೆಸಿದರು. ಸಾರ್ವಜನಿಕರಿಗೆ ನೀರು ಸರಬರಾಜು ಮಾಡುತ್ತಿರುವ ಕೊಳವೆ ಬಾವಿಗಳ ನೀರಿನ ಗುಣಮಟ್ಟ ಕಾಪಾಡಲು ಜೈವಿಕ ಹಾಗೂ ರಾಸಾಯನಿಕ ಪರೀಕ್ಷೆ ಮಾಡಿಸಬೇಕು. ಕುಡಿಯುವ ನೀರು ಸುರಕ್ಷಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಂಡು ವರದಿ ನೀಡುವಂತೆ ಸೂಚನೆ ನೀಡಿದರು. ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾರ್ವಜನಿಕರಿಗೆ ನೀರು ಪೂರೈಕೆ ಮಾಡುತ್ತಿರುವ ಕೊಳವೆ ಬಾವಿಗಳಿಗೆ ಕಡ್ಡಾಯವಾಗಿ ಕ್ಲೋರಿನೇಷನ್ ಮಾಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ, ಸುರಕ್ಷಿತ ಕುಡಿಯುವ ನೀರು ಒದಗಿಸಬೇಕು ಎಂದರು.

# ರಾಜಣ್ಣ ಕಾಂಗ್ರೆಸ್ ತೊರೆಯಲು ಸಜ್ಜಾದರಾ?

### ● ಪಕ್ಷದ ವಿರುದ್ಧ ನಿರಂತರ ವಾಗ್ದಾಳಿ; ಬಿಜೆಪಿ, ಜೆಡಿಎಸ್‌ನಲ್ಲಿ ಯಾವುದು ಹಿತ?

• **ಉದಯವಾಹಿನಿ, ತುಮಕೂರು:**

ಕಾಂಗ್ರೆಸ್ ಹಿರಿಯ ನಾಯಕ, ಸತತ ಆರನೇ ಬಾರಿಗೆ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿರುವ ಮಧುಗಿರಿ ಶಾಸಕ ಕೆ.ಎನ್.ರಾಜಣ್ಣ ಮಾತು, ನಡೆ ನುಡಿ ಗಮನಿಸಿದರೆ ಪಕ್ಷ ಬಿಡಲು ಮಾನಸಿಕವಾಗಿ ಸಜ್ಜಾಗುತ್ತಿದ್ದಾರೆ ಎಂಬ ಚರ್ಚೆ ಪಕ್ಷದಲ್ಲಿ ಆರಂಭವಾಗಿದೆ. 'ಮುಂದೆ ಯಾವ ಪಕ್ಷದ ಬಾವುಟ ಹಿಡಿಯುತ್ತೇನೊ ಗೊತ್ತಿಲ್ಲ. 2004ರಲ್ಲಿ ಜೆಡಿಎಸ್‌ನಿಂದ ಶಾಸಕನಾಗಿದ್ದ ಸಮಯದಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ ನೆಲ ಕಚ್ಚಿತ್ತು. ಮುಂದೆ ಅಂತಹ ಪರಿಸ್ಥಿತಿ ಬರಬಹುದು' ಎಂದು ಹೇಳುವ ಮೂಲಕ ಪಕ್ಷದ ಹೈಕಮಾಂಡ್‌ಗೆ ತಮ್ಮ 'ಶಕ್ತಿ' ರೂಪದಲ್ಲಿ ಬೇರೊಂದು ಸಂದೇಶ ರವಾನಿಸಿದ್ದಾರೆ. ಮಧುಗಿರಿ ತಾಲ್ಲೂಕಿನ ದೊಡ್ಡರಿಯಲ್ಲಿ ನಡೆದ ಬೈಕ್ ರ್ಯಾಲಿಯಲ್ಲಿ ಕಾಂಗ್ರೆಸ್ ಬಾವುಟ ಮರೆಯಾಗಿರುವ ವಿಚಾರವನ್ನು ಅವರೇ ಪ್ರಸ್ತಾಪಿಸಿದ್ದಾರೆ. ರಾಜಣ್ಣ ಗಮನಕ್ಕೆ ಬಾರದೆ, ಅವರ ನಿರ್ದೇಶನ' ಇಲ್ಲದೆ ಪಕ್ಷದ ಬಾವುಟ ಬಿಟ್ಟು ರ್ಯಾಲಿ ನಡೆಸಲು ಸಾಧ್ಯವೆ ಎಂಬುದು ರಾಜಕೀಯದ 'ಅ, ಇ' ಗೊತ್ತಿಲ್ಲದವರಿಗೂ ಅರ್ಥವಾಗುತ್ತದೆ. ಪಕ್ಷದಲ್ಲಿ 'ಅವಕಾಶ ಕೊಟ್ಟು' ಉಳಿಸಿಕೊಳ್ಳಬೇಕು. ಇಲ್ಲವಾದರೆ ಪಕ್ಷದ ಸ್ಥಿತಿ 'ಈ ರೀತಿ' ಆಗುತ್ತದೆ ಎಂಬ ಎಚ್ಚರಿಕೆಯನ್ನು ತಲುಪಿಸಿದ್ದಾರೆ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗುತ್ತಿದೆ. ಎಲ್ಲಿಂದ...?: ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನ ಪರವಾಗಿ ಸದಾ ನಿಲ್ಲುತ್ತಾರೆ ಎಂಬ ಹುಂಬತನದಿಂದ ಹೈಕಮಾಂಡ್.

ಕೆಪಿಸಿಸಿ ಅಧ್ಯಕ್ಷರನ್ನು ಸಮಯ ಸಿಕ್ಕಾಗಲೆಲ್ಲ ಕುಟುಕುತ್ತಲೇ ಬಂದಿದ್ದರು. ಮತ ಕಳವು ವಿಚಾರದಲ್ಲಿ ನೀಡಿದ್ದ ಹೇಳಿಕೆ ಸಚಿವ ಸ್ಥಾನಕ್ಕೆ ಕುತ್ತು ತಂದಿತ್ತು. ಸಚಿವ ಸ್ಥಾನಕ್ಕೆ ರಾಜೀನಾಮೆ ಪಡೆಯುವ ಬದಲಿಗೆ ವಜಾ ಮಾಡುವಂತಹ ಕಠಿಣ ಸಂದೇಶವನ್ನು ಹೈಕಮಾಂಡ್ ನೀಡಿತ್ತು. ನಂತರದ ಸನ್ನಿವೇಶದಲ್ಲಿ ಸಿದ್ದರಾಮಯ್ಯ ಸಹ ಅವರ ಪರ ನಿಲ್ಲಲು ಸಾಧ್ಯವಾಗುತ್ತಿಲ್ಲ.

ಹೈಕಮಾಂಡ್ ಮಾತು ಮೀರಿ ನಡೆದುಕೊಳ್ಳುವುದು ಅವರಿಗೂ ಕಷ್ಟಕರವಾಗುತ್ತಿದೆ. ಜಿಲ್ಲೆಯ ಕಾಂಗ್ರೆಸ್ ನಾಯಕರೂ ಒಟ್ಟಾಗಿ ರಾಜಣ್ಣ ಬೆಂಬಲಕ್ಕೆ ನಿಲ್ಲುತ್ತಿಲ್ಲ. ಸಚಿವ ಸ್ಥಾನ ಕಳೆದುಕೊಂಡ ನಂತರ ಸಚಿವ ಜಿ.ಪರಮೇಶ್ವರ ಅಂತರ ಕಾಯ್ದುಕೊಂಡಿದ್ದಾರೆ. ಮತ್ತೊಬ್ಬ ಹಿರಿಯ ನಾಯಕರಾದ ಶಿರಾ ಶಾಸಕ ಟಿ.ಬಿ.ಜಯಚಂದ್ರ ನಡುವಿನ ಸಂಬಂಧ ಮೊದಲಿನಿಂದಲೂ ಅಷ್ಟಕಷ್ಟೇ. ತುಮುಲ್ ಅಧ್ಯಕ್ಷರ ಚುನಾವಣೆ ನಂತರ ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್, ಅವರ ಮುಖವನ್ನೇ ನೋಡುತ್ತಿಲ್ಲ. ಡಿ.ಕೆ. ಶಿವಕುಮಾರ್ ವಿರೋಧದಿಂದಾಗಿ ಕುಣಿಗಲ್ ಶಾಸಕ ಡಾ.ಎಚ್.ಡಿ.ರಂಗನಾಥ್ ಸಹ ದೂರವೇ ಉಳಿದಿದ್ದಾರೆ. ತಿಪಟೂರು ಶಾಸಕ ಕೆ.ಷಡಕ್ಷರಿ ಅವರು ರಾಜಣ್ಣ ಅವರಿಗೆ ತಪ್ಪಿರುವ ಅಧಿಕಾರ ತಮಗೆ ಸಿಗಬಹುದು ಎಂದು ಕಾಯುತ್ತಿದ್ದಾರೆ. ಇನ್ನು ಪಾವಗಡ ಶಾಸಕ ಎಚ್.ವಿ.ವೆಂಕಟೇಶ್ ತುಮುಲ್ ಅಧ್ಯಕ್ಷ ಸ್ಥಾನ ನೀಡಿರುವ ಕಾರಣಕ್ಕೆ ಜತೆಯಲ್ಲಿದ್ದಾರೆ.

ರಾಜ್ಯ ಹಾಗೂ ಜಿಲ್ಲೆಯ ನಾಯಕರಿಂದಲೂ ನಿರೀಕ್ಷಿತ ಮಟ್ಟದಲ್ಲಿ ಬೆಂಬಲ ವ್ಯಕ್ತವಾಗುತ್ತಿಲ್ಲ. ನನ್ನನ್ನು ಒಬ್ಬಂಟಿ ಮಾಡಿದರೆ ಎಂಬ ಆತಂಕವೂ ಕಾಡುತ್ತಿದೆ. ಹೈಕಮಾಂಡ್ ಮತ್ತೊಮ್ಮೆ ಸಚಿವ ಸ್ಥಾನ ದಯಪಾಲಿಸುವ ಸಾಧ್ಯತೆ ಕಡಿಮೆ. ಮುಂದಿನ ರಾಜಕೀಯ ಭವಿಷ್ಯದ ದೃಷ್ಟಿಯನ್ನು ಇಟ್ಟುಕೊಂಡೇ ಇಂತಹ ಹೇಳಿಕೆ ನೀಡುತ್ತಿದ್ದಾರೆ. ಮುಂದೆ ಸಚಿವ ಸ್ಥಾನ ಸಿಗದಿದ್ದರೂ ತಮ್ಮ ಪುತ್ರ ಆರ್.ರಾಜೇಂದ್ರ ಅವರಿಗೆ ರಾಜಕೀಯ ಭವಿಷ್ಯ ರೂಪಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ ಎಂದು ಅವರ ಆಪ್ತ ಬಳಗದಿಂದ ಕೇಳಿ ಬರುತ್ತಿರುವ ಮಾತುಗಳು.

ಮುಂದೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳುತ್ತಾ ಬಂದಿದ್ದು, ಈಗ ಮತ್ತೊಂದು ಅವಧಿಗೆ ಸ್ಪರ್ಧಿಸುವ ಬಯಕೆಯನ್ನು ತಮ್ಮ ಬೆಂಬಲಿಗರ ಬಳಿ ವ್ಯಕ್ತಪಡಿಸಿದ್ದಾರೆ.

ಮುಂದಿನ ವಿಧಾನಸಭೆ ಚುನಾವಣೆ ಹೊತ್ತಿಗೆ ಆರ್.ರಾಜೇಂದ್ರ ವಿಧಾನ ಪರಿಷತ್ ಸದಸ್ಯತ್ವದ ಅವಧಿಯೂ ಮುಗಿದಿರುತ್ತದೆ. ಮಧುಗಿರಿ ಕ್ಷೇತ್ರವನ್ನು ಬಿಟ್ಟುಕೊಟ್ಟು, ರಾಜೇಂದ್ರ ಅವರಿಗೆ ಅಲ್ಲಿಂದ ಟಿಕೆಟ್ ನೀಡುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಪಕ್ಕದ ಚಳ್ಳಕೆರೆ ಕ್ಷೇತ್ರದಿಂದ ತಮಗೆ ಅವಕಾಶ ನೀಡುವಂತೆ ಬೇಡಿಕೆ ಸಲ್ಲಿಸುವುದು. ಇದಕ್ಕೆ ಸಕಾರಾತ್ಮಕ ಸ್ಪಂದನೆ ಸಿಕ್ಕರೆ ಪಕ್ಷದಲ್ಲಿ ಉಳಿಯುವುದು. ಇಲ್ಲವಾದರೆ ಪರ್ಯಾಯ ಚಿಂತನೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



**ರಾಜಣ್ಣ ಮುಂದಿನ ನಡೆ?**

**ಮೀಸಲು ಕ್ಷೇತ್ರವನ್ನು ಪರಮೇಶ್ವರ ಬಿಟ್ಟುಕೊಡಬೇಕು ಎಂಬ ಹೇಳಿಕೆ ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು. ಪರಮೇಶ್ವರ ವಿರುದ್ಧ ಎಚ್ಚರಿಕೆಯಿಂದ ಇರುವಂತೆ ಬಿಜೆಪಿ ನಗರ ಶಾಸಕ ಜ್ಯೋತಿಗಣೇಶ್ ಅವರಿಗೆ ಸಾರ್ವಜನಿಕ ವೇದಿಕೆಯಲ್ಲೇ ಹೇಳಿದ್ದರು. ಈ ಎಲ್ಲಾ ಬೆಳವಣಿಗೆ ಮಾತು ಗಮನಿಸಿದರೆ ರಾಜಣ್ಣ ಮುಂದಿನ ನಡೆ ಏನಿರಬಹುದು...?**

**ಜೆಡಿಎಸ್, ಕಾಂಗ್ರೆಸ್... ಮುಂದೆ?**

**ಕಾಂಗ್ರೆಸ್‌ನಿಂದ ರಾಜಣ್ಣ ರಾಜಕೀಯ ಜೀವನ ಆರಂಭಿಸಿ ಯುವ ಕಾಂಗ್ರೆಸ್ ಮೂಲಕ ಪಕ್ಷದಲ್ಲಿ ರಾಜಕೀಯ ನೆಲೆ ಕಂಡುಕೊಂಡರು. 1998ರಲ್ಲಿ ವಿಧಾನ ಪರಿಷತ್‌ಗೆ ಆಯ್ಕೆಯಾದರು. 2004ರಲ್ಲಿ ಬೆಳ್ಳಾವಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಟಿಕೆಟ್ ಸಿಗಲಿಲ್ಲ. ಆಗ ಜೆಡಿಎಸ್ ಸೇರಿ ಬೆಳ್ಳಾವಿಯಿಂದ ಶಾಸಕರಾದರು. ಕ್ಷೇತ್ರ ಪುನರ್ ವಿಂಗಡಣೆ ನಂತರ ಬೆಳ್ಳಾವಿ ಕ್ಷೇತ್ರ ಇಲ್ಲವಾಯಿತು. ಮೀಸಲು ಕ್ಷೇತ್ರದಿಂದ ಸಾಮಾನ್ಯ ಕ್ಷೇತ್ರವಾಗಿದ್ದ ಮಧುಗಿರಿಯತ್ತ ಮುಖ ಮಾಡಿದರು. 2013ರಲ್ಲಿ ಶಾಸಕರಾಗಿ ಆಯ್ಕೆಯಾದರು. ಪ್ರಸ್ತುತ ಅವಧಿಯ ವಿಧಾನಸಭೆಗೂ ಆಯ್ಕೆಯಾಗಿ ಸಚಿವರಾಗಿದ್ದರು. ಸಹಕಾರಿ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಜೆಡಿಎಸ್ ಕಾಂಗ್ರೆಸ್‌ನಲ್ಲಿ ಅಧಿಕಾರ ಅನುಭವಿಸಿದ್ದು ಮುಂದಿನ ನಡೆ ಕುತೂಹಲ ಮೂಡಿಸಿದೆ. ಇತ್ತೀಚೆಗೆ ಬಿಜೆಪಿ ಬೆಂಬಲದೊಂದಿಗೆ ಮಧುಗಿರಿಯಲ್ಲಿ ನಡೆದ ಧರ್ಮಸ್ಥಳ ಕ್ಷೇತ್ರದ ಪರವಾದ ರ್ಯಾಲಿಯಲ್ಲಿ ಭಾಗವಹಿಸಿದ್ದರು. ಇದಕ್ಕೆ ಕಾಂಗ್ರೆಸ್‌ನ ಆಂತರಿಕ ವಲಯದಲ್ಲಿ ಆಕ್ಷೇಪಗಳು ವ್ಯಕ್ತವಾಗಿದ್ದವು. ಜತೆಗೆ ಪಕ್ಷದ ಹೈಕಮಾಂಡ್ ಕೆಪಿಸಿಸಿ ಅಧ್ಯಕ್ಷರ ಜತೆಗೆ ಪರಮೇಶ್ವರ ವಿರುದ್ಧವೂ ಬಹಿರಂಗವಾಗಿ ಹೇಳಿಕೆ ನೀಡಲಾರಂಭಿಸಿದ್ದಾರೆ.**

ಅಂತರಾಳದಿಂದ..
EDITORIAL

# ಬೀದಿನಾಯಿಗಳ ನಿಯಂತ್ರಣ ಆದೇಶ ಸಹಾನುಭೂತಿ ಕೊರತೆಯ ನಿರ್ಧಾರ



ಜೀವಕ್ಕೂ ರಕ್ಷಣೆಯ ಭರವಸೆ

ಬೀದಿನಾಯಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ಸೂಚನೆಗಳು ಅವಾಸ್ತವಿಕವಾಗಿವೆ, ಅಮಾನವೀಯವಾಗಿವೆ. ಈ ವಿಚಾರವಾಗಿ ಕೋರ್ಟ್ ಈ ಹಿಂದೆ ನೀಡಿದ್ದ ಆದೇಶಕ್ಕೆ ಹೋಲಿಸಿದರೆ ಈ ಬಾರಿಯ ನಿರ್ದೇಶನಗಳು ಪ್ರತಿಗಾಮಿಯಾಗಿ ಕಾಣುತ್ತಿವೆ. ಬೀದಿನಾಯಿಗಳನ್ನು ಸಾರ್ವಜನಿಕ ಸ್ಥಳಗಳಿಂದ ಅವುಗಳಿಗೆ ನಿಗದಿಪಡಿಸಿದ ಆಶ್ರಯಕೇಂದ್ರಗಳಿಗೆ ಸ್ಥಳಾಂತರ ಮಾಡಬೇಕು. ಅದಕ್ಕೂ ಮುನ್ನ ಅವುಗಳ ಸಂತಾನಶಕ್ತಿಹರಣ ಮಾಡಬೇಕು, ಅವುಗಳಿಗೆ ಲಸಿಕೆ ನೀಡಬೇಕು ಎಂದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠವೊಂದು ಸೂಚಿಸಿದೆ. ಇದಕ್ಕೂ ಮೊದಲು ಇದೇ ನ್ಯಾಯಪೀಠವು, ಆಗಸ್ಟ್ 11ರ ಕಠಿಣ ಆದೇಶವೊಂದನ್ನು ಮಾರ್ಪಾಡು ಮಾಡಿತ್ತು. ಬೀದಿನಾಯಿಗಳಿಗೆ ಲಸಿಕೆ ನೀಡಿ, ಅವುಗಳ ಸಂತಾನಶಕ್ತಿಹರಣ ಮಾಡಿ, ಅವುಗಳನ್ನು ಮೊದಲು ಇದ್ದ ಸ್ಥಳಕ್ಕೇ ಬಿಡಬೇಕು ಎಂದು ಹೇಳಿತ್ತು. ರೇಬಿಸ್ ಕಾಯಿಲೆಗೆ ತುತ್ತಾಗಿರುವ ಹಾಗೂ ತೀರಾ ಆಕ್ರಮಣಕಾರಿ ವರ್ತನೆಯನ್ನು ತೋರುವ ನಾಯಿಗಳನ್ನು ಮಾತ್ರ ಆಶ್ರಯಕೇಂದ್ರಗಳಲ್ಲಿ ಇರಿಸಿಕೊಳ್ಳಬೇಕು ಎಂದು ಆ ಆದೇಶದಲ್ಲಿ ಹೇಳಲಾಗಿತ್ತು. ಈ ಆದೇಶದ ಅನುಷ್ಠಾನದಲ್ಲಿ ಕೂಡ ಒಂದಿಷ್ಟು ಸಮಸ್ಯೆಗಳು ಇದ್ದವು. ಆದರೆ ಈ ಆದೇಶವು, ಎಲ್ಲ ಬೀದಿನಾಯಿಗಳನ್ನು ಆಶ್ರಯಕೇಂದ್ರಗಳಿಗೆ ಶಾಶ್ವತವಾಗಿ ವರ್ಗಾಯಿಸುವಂತೆ ಹೇಳಿದ್ದ ಹಿಂದಿನ ಇನ್ನೊಂದು ಆದೇಶಕ್ಕೆ ಹೋಲಿಸಿದರೆ ವಾಸ್ತವಕ್ಕೆ ಹೆಚ್ಚು ಹತ್ತಿರವಾಗಿತ್ತು ಮತ್ತು ಸಹಾನುಭೂತಿಯಿಂದ ಕೂಡಿತ್ತು.

> ಈಗ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳನ್ನು ಪಾಲಿಸಲು ಅಗತ್ಯ ಸಂಪನ್ಮೂಲ ಇಲ್ಲದ ಅಧಿಕಾರಿಗಳು ನಾಯಿಗಳನ್ನು ಸಾಮೂಹಿಕವಾಗಿ ಕೊಲ್ಲುವ ಪರ್ಯಾಯ ಮಾರ್ಗವನ್ನು ಅನುಸರಿಸುವ ಸಾಧ್ಯತೆ ಇದೆ.

ಬೀದಿಗಳಲ್ಲಿ ಇರುವ ನಾಯಿಗಳನ್ನೆಲ್ಲ ಅಲ್ಲಿಂದ ತೆರವು ಮಾಡಿಸುವ ಸಂಪನ್ಮೂಲ ಅಥವಾ ಸಿಬ್ಬಂದಿಬಲ ದೇಶದ ಯಾವುದೇ ಸರ್ಕಾರದ ಬಳಿ, ಯಾವುದೇ ನಗರ ಸ್ಥಳೀಯ ಸಂಸ್ಥೆಯ ಬಳಿ ಇಲ್ಲ. ದೇಶದ ಎಲ್ಲ ರೈಲು ನಿಲ್ದಾಣಗಳು, ಬಸ್ ನಿಲ್ದಾಣಗಳು, ಶಾಲೆಗಳು ಹಾಗೂ ಇತರ ಸಾರ್ವಜನಿಕ ಸ್ಥಳಗಳು ಬೀದಿನಾಯಿಗಳಿಂದ ಮುಕ್ತವಾಗುವಂತೆ ಮಾಡಲು ಕೋಟ್ಯಂತರ ರೂಪಾಯಿ ಬೇಕಾಗುತ್ತದೆ. ಈ ಕೆಲಸ ಮಾಡಲು ತರಬೇತಿ ಪಡೆದ ನೂರಾರು ಮಂದಿ ಸಿಬ್ಬಂದಿಯೂ ಬೇಕು.

ನಾಯಿಗಳು ಹೆದ್ದಾರಿಗಳಿಗೆ ಬಾರದಂತೆ ತಡೆಯಲು ಸಾಧ್ಯವೇ? ಒಂದು ನಾಯಿಯನ್ನು ಆಶ್ರಯ ಕೇಂದ್ರಕ್ಕೆ ರವಾನಿಸಿದರೆ, ಆ ಜಾಗಕ್ಕೆ ಇನ್ನೊಂದು ನಾಯಿ ಬರುತ್ತದೆ. ಬೀದಿಯಲ್ಲಿ ಅಲೆಯುವ ಪ್ರಾಣಿಗಳನ್ನು ನಿಭಾಯಿಸಲು, ಅವುಗಳ ಸಂತಾನಶಕ್ತಿ ಹರಣ ಮಾಡಿ, ಅವುಗಳಿಗೆ ಲಸಿಕೆ ನೀಡುವ ಮಾನವೀಯ ಹಾಗೂ ಪರಿಣಾಮಕಾರಿ ಮಾರ್ಗವನ್ನು ಪ್ರಾಣಿಗಳ ಜನನ ನಿಯಂತ್ರಣ (ಎಬಿಸಿ) ನಿಯಮಗಳು 2023ರಲ್ಲಿ ಹೇಳಲಾಗಿದೆ. ನಾಯಿಗಳು ಮನುಷ್ಯನ ಆರೋಗ್ಯಕ್ಕೆ ಅಥವಾ ಮನುಷ್ಯನ ಜೀವಕ್ಕೆ ಅಪಾಯ ತಂದೊಡ್ಡುತ್ತಿವೆ ಎಂದಾದರೆ ಅದಕ್ಕೆ ಕಾರಣ, ನಿಯಮಗಳ ಅನುಷ್ಠಾನದಲ್ಲಿನ ಲೋಪ. ಅಧಿಕಾರಿಗಳು ನಿಯಮಗಳ ವಿಚಾರದಲ್ಲಿ ಉದಾಸೀನ ಧೋರಣೆ ತೋರುತ್ತಿದ್ದಾರೆ. ಅಲ್ಲದೆ, ಅಗತ್ಯ ಸಂಪನ್ಮೂಲ ಒದಗಿಸದ ಕಾರಣಕ್ಕೆ ಈ ನಿಯಮಗಳ ಅನುಷ್ಠಾನ ಸರಿಯಾಗಿ ಆಗುತ್ತಿಲ್ಲ. ಈಗ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳನ್ನು ಪಾಲಿಸಲು ಅಗತ್ಯ ಸಂಪನ್ಮೂಲ ಇಲ್ಲದ ಅಧಿಕಾರಿಗಳು ನಾಯಿಗಳನ್ನು ಸಾಮೂಹಿಕವಾಗಿ ಕೊಲ್ಲುವ ಪರ್ಯಾಯ ಮಾರ್ಗವನ್ನು ಅನುಸರಿಸುವ ಸಾಧ್ಯತೆ ಇದೆ.

ಈಗ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳು ಎಬಿಸಿ ನಿಯಮಗಳಿಗೆ ಅನುಗುಣವಾಗಿ ಇಲ್ಲ. ಈ ನಿರ್ದೇಶನಗಳು, ಪ್ರಾಣಿಗಳ ಜೀವದ ಪಾವಿತ್ರ್ಯವನ್ನು ಗುರುತಿಸುವ ಸಂವಿಧಾನದ ಆಶಯಕ್ಕಿಂತ ಭಿನ್ನವಾಗಿವೆ ಎಂದೂ ಹೇಳಬಹುದು. ಪ್ರಾಣಿಗಳನ್ನು ರಕ್ಷಿಸುವುದು ಹಾಗೂ ಅವುಗಳನ್ನು ಘನತೆಯಿಂದ ಕಾಣುವುದು ಪ್ರಜೆಗಳ ಕರ್ತವ್ಯ ಎಂದು ಸಂವಿಧಾನ ಹೇಳುತ್ತದೆ. ಸಂವಿಧಾನದ 21ನೇ ವಿಧಿಯು ಮನುಷ್ಯರ ಹಕ್ಕುಗಳನ್ನು ರಕ್ಷಿಸುವ ಜೊತೆಗೆ. ಜೀವಕ್ಕೂ ರಕ್ಷಣೆಯ ಭರವಸೆ ನೀಡುತ್ತದೆ; ಇಲ್ಲಿ ಜೀವವೆಂದರೆ ಎಲ್ಲರ ಜೀವ, ಅದರಲ್ಲಿ ಪ್ರಾಣಿಗಳ ಜೀವವೂ ಸೇರಿದೆ ಎಂದು ಕೋರ್ಟ್ ಈ ಹಿಂದೆ ಹೇಳಿತ್ತು. ಆದರೆ, ಈಗಿನ ನಿರ್ದೇಶನಗಳು ಈ ಪರಿಕಲ್ಪನೆಗೆ ವಿರುದ್ಧವಾಗಿವೆ. ಈ ಭೂಮಿಯು ಮನುಷ್ಯನಿಗೆ ಸೇರಿದ್ದು ಹಾಗೂ ಇತರ ಎಲ್ಲ ಜೀವಿಗಳು ಮನುಷ್ಯನ ಅಧೀನ ಎಂಬ ತಪ್ಪು ಆಲೋಚನೆಯ ಕಾರಣದಿಂದಾಗಿ ಈ ಬಗೆಯ ನಿರ್ದೇಶನ ಬಂದಿದೆ. ಈ ಭೂಮಿಯು ಮನುಷ್ಯನಿಗೆ ಎಷ್ಟು ಸೇರಿದ್ದೋ ಇತರ ಪ್ರಾಣಿಗಳಿಗೂ ಅಷ್ಟೇ ಪ್ರಮಾಣದಲ್ಲಿ ಸೇರಿದೆ. ದುರದೃಷ್ಟದ ಸಂಗತಿಯೆಂದರೆ ಈ ಸತ್ಯವನ್ನು ಒಪ್ಪಿಕೊಂಡು, ಅದನ್ನು ಎತ್ತಿಹಿಡಿಯುವ ಕೆಲಸಕ್ಕೆ ಬೇಕಿರುವ ವಿವೇಕವನ್ನು ದೇಶದ ನ್ಯಾಯಾಂಗದ ಅತ್ಯುನ್ನತ ಸಂಸ್ಥೆ ಕೂಡ ಬಳಸಿಕೊಂಡಿಲ್ಲ.

# ರಾಮಾಯಣ



## ಶರಭಂಗಮುನಿಯು ಬ್ರಹ್ಮಲೋಕವನ್ನು ಸೇರಿದ ವೃತ್ತಾಂತ

• ಹಿಂದಿನ ಸಂಚಿಕೆಯಿಂದ 117ನೆಯ ಅಧ್ಯಾಯ

ಮೃತ್ಯುವು ಸಮೀಪಿಸಿದ ಪುರುಷನಿಗೆ ಬುದ್ಧಿಯು ವಿಪರೀತವಾಗುವ ಹಾಗೂ ಮರಣವು ಸಮೀಪಿಸಿದವನಿಗೆ ಪಥ್ಯವಸ್ತುವು ರುಚಿಸದ ಹಾಗೂ ನೀನು ಯಮಪಾಶಬದ್ಧನಾದಕಾರಣ ಇಂಥ ಕೃತ್ಯದಲ್ಲಿ ನಿನಗೆ ಭಯವು ಹುಟ್ಟಲಿಲ್ಲ. ಅವಶ್ಯವಾಗಿ ನಿನಗೆ ಮರಣವು ಸನ್ನಿಹಿತವಾಗಿದೆ. ನೀನು ಅತ್ಯಂತ ಪಾಪವನ್ನು ಮಾಡಿದವರಿರುವ ಅಸಿಪತ್ರವನಕ್ಕೆ ಹೋಗುವೆ. ನೀನು ಯಮಲೋಕದಲ್ಲಿ ಉಕ್ಕಿನ ಸಲಾಕೆಗಳಂದ ಮುಳ್ಳುಗಳಿರುವ ಬೂರುಗದ ವೃಕ್ಷಗಳನ್ನು ತಬ್ಬಿಕೊಳ್ಳುವೆ. ಮಹಾತ್ಮನಾದ ಶ್ರೀರಾಮನಿಗೆ ಇಂಥ ದ್ರೋಹವನ್ನು ಮಾಡಿದೆಯಾದ್ದರಿಂದ ನೀನು ವಿಷಪಾನವನ್ನು ಮಾಡಿದವನಂತೆ ಶ್ರೀರಾಮನಿಂದ ನಾಶವನ್ನೆ ದುವೆ. ಮಹಾತ್ಮನಾದ ನನ್ನ ಪತಿಗೆ ಇಂಥ ದ್ರೋಹವನ್ನು ಮಾಡಿದ್ದರಿಂದ ನೀನು ಯಾವ ದಿಕ್ಕಿಗೆ ಹೋದರೂ ಜೀವದಿಂದಿರಲು ಸಾಧ್ಯವಿಲ್ಲ ತನ್ನ ತಮ್ಮನಾದ ಲಕ್ಷ್ಮಣನನ್ನೂ ಬಿಟ್ಟು ಒಂಟಿಯಾಗಿಯೇ ನಿಮಿಷಮಾತ್ರದಲ್ಲಿ ಹದಿನಾಲ್ಕುಸಾವಿರಮಂದಿ ರಾಕ್ಷಸರನ್ನು ಕೊಂದ ಮಹಾಪರಾಕ್ರಮಿಯಾದ ಶ್ರೀರಾಮನು ತನ್ನ ಪ್ರಾಣಕ್ಕೆ ಸಮಾನಳಾದ ಪತ್ನಿಯನ್ನು ಅಪಹರಿಸಿಕೊಂಡು ಹೋಗುವ ನಿನ್ನನ್ನು ತನ್ನ ನಿಶಿತಬಾ'ಗಳಿಂದ ಕೊಲ್ಲದಿರನು ಎಂದು ಅನೇತ ನಿಷ್ಟುರದಚನಗಳನ್ನು ನುಡಿದು ಭಯ ಶೋಕಗಳಿಂದ ಕಂಗೆಟ್ಟು ದೈನ್ಯದಿಂದ ಹಂಬಲಿಸುತ್ತ ಹಲುಬುತ್ತ, ದುಃಖಿಸುತ್ತಿದ್ದಳು.

### ರಾವಣನು ಸೀತಾದೇವಿಯೊಡನೆ ಅಂಕೆಯನ್ನು ಸೇರಿದ್ದು

ಈ ರೀತಿಯಲ್ಲಿ ರಾವಣನು ಸೀತಾದೇವಿಯನ್ನು ಅಪಹರಿಸಿಕೊಂಡು ಹೊಗುತ್ತಿರಲು ಆ ದೇವಿಯು ತನಗೆ ರಕ್ಷಕರಾರನ್ನೂ ಕಾಣದೆ ಚಿಂತಾಕ್ರಾಂತಾಗಿ ಮಧ್ಯಮಾರ್ಗದಲ್ಲಿ ಒಂದು ಪರ್ವತದ ಶಿಖರದ ಮೇಲೆ ಕುಳಿತಿದ್ದ ಐದು ಕಪಿಗಳನ್ನು ಕಂಡಳು. ಅವಳು ತನ್ನ ಮೇಲುಹೊದಿಕೆಯ ಎತಾಂಬರದ ಸೆರಗನ್ನು ಹರಿದು ತನ್ನ ಶ್ರೇಷ್ಠವಾದ ಆಭರಣಗಳನ್ನು ಕಟ್ಟಿ ಆ ಕಪಿಗಳ ಮಧ್ಯದಲ್ಲಿ ಆ ಗಂಟನ್ನು ಹಾಕಿದಳು. ಆ ಕಪಿಗಳು ಒಂದು ವೇಳೆ ಶ್ರೀರಾಮನಿಗೆ ತನ್ನ ದೃತ್ತಾಂತವನ್ನು ತಿಳಿಸ ಬಹುದೆಂದು ಅವಳು ಭಾವಿಸಿದಳು. ರಾವಣನು ತನಗೆ ಸೀತಾದೇವಿಯು ಕೈವಶಳಾದ ಸಂತೋಷದಿಂದ ಆ ದೇವಿಯು ಆಭರಣಗಳನ್ನು ಗಂಟುಕಟ್ಟಿ ಹಾಕಿದ್ದನ್ನು ನೋಡಲಿಲ್ಲ. ಆ ಕಪಿಗಳು ಸಿ:ತಾದೇವಿಯು ಹಾಕಿದ ಆಭರಣದ ಗಂಟನ್ನೂ ಅವಳು ಕೂಗಿಕೊಳ್ಳುತ್ತಿರುವುದನ್ನೂ ನೋಡಿದವು. ಆ ಬಳಿಕ ರಾವಣನು ಪಂಪಾಸರೋವರವನ್ನು ದಾಟಿ ವಿಷಜ್ವಾಲೆಯನ್ನು ಗುಳುತ್ತಿರುವ ಸರ್ಪವನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಹೋಗುವಂತೆ ತನಗೆ ಮೃತ್ಯುಸ್ವರೂಪಳಾದ ಸೀತಾದೇವಿಯನ್ನು ಅಪಹರಿಸಿಕೊಂಡು ಅನೇಕ ಪನಗಳನ್ನೂ ಪರ್ವತಗಳನ್ನೂ ಸರೋವರಗಳನ್ನೂ ದಾಟಿ, ಬಿಲ್ಲಿನಿಂದ ಎಸೆಯಲ್ಪಟ್ಟ ಬಾಣದಂತೆ ಅತಿವೇಗದಿಂದ ತಿಮಿಂಗಿಲ ಮತ್ತ್ವಗಳೇ ಮೊದಲಾದ ಬಲಚರ ಪ್ರಾಣಿಗಳಿಗೂ ಸಮಸ್ತ ನದಿಗಳಿಗೂ ಆಶ್ರಯಸ್ಥಾನವಾದ ಸಮುದ್ರವನ್ನು ದಾಟಿಹೋದನು. ಅಂತರಿಕ್ಷಮಾರ್ಗದಲ್ಲಿದ್ದ ಸಿದ್ಧ ಚಾರಣ ಗಂಧರ್ವಾದಿಗಳು ರಾವಣನಿಗೆ ಅಂತ್ಯಕಾಲವು ಸಮೀಪಿಸಿತೆಂದು ನುಡಿಯುತ್ತಿದ್ದರು. ಹೊರಳಾಡುತ್ತಿದ್ದ ಸೀತಾದೇವಿಯನ್ನು ರಾವಣನು ತನ್ನ ಮೃತ್ಯುವನ್ನು ಕೊಂಡುಹೋಗುವಂತೆ ಲಂಕಾ ಪಟ್ಟಣಕ್ಕೆ ಕೊಂಡುಹೋಗಿ ತನ್ನ ಅಂತಃಶ್ವರವನ್ನು ಪ್ರವೇಶಿಸಿದನು.

ಶೋಕಾತಿಶಯದಿಂದ ಮೈಮರೆತಿದ್ದ ಆ ಶೋಧನಾಂಗಿಯನ್ನು ತನ್ನ ಆ ಅರಮನೆಯಲ್ಲಿಳಿಸಿ ಪಿಶಾಚಿಗಳಂತಿದ್ದ ರಾಕ್ಷಸಸ್ತ್ರೀಯರನ್ನು ಕರೆದು ಎಲೇ ಸ್ತ್ರೀಯರುಗಳಿರಾ, ಈ ದೇವಿಯ ಸಮೀಪಕ್ಕೆ ನನ್ನ ಅಪ್ಪಣೆಯಿಲ್ಲದೆ ಮತ್ತೊಬ್ಬ ಪುರುಷನಾದರೂ ಸ್ತ್ರೀಯಾದರೂ ಬಾರದಿರುವಂತೆ ಯಾರಾದರೂ ಈಕೆಯ ವಿಷಯದಲ್ಲಿ ನಿಷ್ಟುರವಚನವನ್ನು ನುಡಿದರೆ ಅವರ ಪ್ರಾಣಾಪಹಾರವನ್ನು ಮಾಡುವೆನು ಎಂದು ಆಜ್ಞಾಪಿಸಿದನು.


ಮುಂದುವರಿಯುವುದು...

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲು ಮರದ ತಿಮ್ಮಕ್ಕ ವಿಧಿವಶರಾಗಿದ್ದಾರೆ. ವೃಕ್ಷಮಾತೆಯನ್ನು ಕಳೆದುಕೊಂಡು ಪರಿಸರ ಲೋಕ ಅನಾಥವಾಗಿದೆ. 114 ವರ್ಷದ ತಿಮ್ಮಕ್ಕ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. 2 ದಿನಗಳ ಹಿಂದೆ ಬೆಂಗಳೂರಿನ ಜಯನಗರದ ಅಪೋಲೋ ಆಸ್ಪತ್ರೆಗೆ ದಾಖಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ಮಕ್ಕಳಿಲ್ಲ ತಿಮ್ಮಕ್ಕನನ್ನು ಸಾಕು ಮಗ ಉಮೇಶ್ ಬಳ್ಳೂರು ನೋಡಿಕೊಳ್ಳುತ್ತಿದ್ದರು.



# ಸಾಲುಮರ ಅಜರಾಮರ

## ಹಸಿರೇ ಉಸಿರು ಎನ್ನುತ್ತಿದ್ದ 114 ವರ್ಷದ ವೃಕ್ಷಮಾತೆ



ಒಂದು ಮಕ್ಕಳ ತಾಯಿಯಾಗುವ ಬದಲು ಸಾವಿರ ಮರಗಳ ಬೆಳಸಿ ವೃಕ್ಷಮಾತೆಯಾದ **ತಿಮ್ಮಕ್ಕ**

ಮಕ್ಕಳಾಗಲಿಲ್ಲವೆಂದು ಇಂದಿಗೂ ಮಹಿಳೆಯರು ಮರ ಸುತ್ತಿ ಪೂಜೆ ಪುನಸ್ಕಾರ ಮಾಡುತ್ತಾರೆ! ದಶಕಗಳ ಹಿಂದೆ ಮಕ್ಕಳಿಲ್ಲ ಎಂಬ ಕೊರಗಲಿದ್ದ ತಿಮ್ಮಕ್ಕ ಎಲ್ಲಾ ಮಹಿಳೆಯರಂತೆ ಮರ ಸುತ್ತಿದ್ದರೆ ಸಾಲು ಮರದ ತಿಮ್ಮಕ್ಕ ಎನಿಸಿಕೊಳ್ಳುತ್ತಿರಲಿಲ್ಲ. ಒಂದು ಮಕ್ಕಳ ತಾಯಿಯಾಗುವ ಬದಲು ಸಾವಿರ ಮರಗಳ ಬೆಳಸಿ ವೃಕ್ಷಮಾತೆಯಾದರು.

ತಿಮ್ಮಕ್ಕ ಅವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನವರು. ಅವರ ತಂದೆಯ ಹೆಸರು ಚಿಕ್ಕರಂಗಯ್ಯ, ತಾಯಿ ವಿಜಯಮ್ಮ. ಅವರಿಗೆ ಸರಿಯಾಗಿ ಶಾಲೆಗೆ ಹೋಗುವ ಅವಕಾಶ ಸಿಗಲಿಲ್ಲ. ಹತ್ತಿರದ ಕಲ್ಲು ಗಣಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ತಿಮ್ಮಕ್ಕನವರು ಚಿಕ್ಕಯ್ಯ ಎಂಬುವವರನ್ನು ಮದುವೆಯಾದರು. ಚಿಕ್ಕಯ್ಯ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದವರು. ಈ ದಂಪತಿಗೆ ಮಕ್ಕಳಿರಲಿಲ್ಲ. ಊರವರು, ಕುಟುಂಬಸ್ಥರಿಂದ ದಂಪತಿ ನಿಂದನೆಗೂ ಒಳಗಾಗಿದ್ದರು. ಆ ಕೊರಗನ್ನು ನೀಗಿಸಿಕೊಳ್ಳಲು ಮರಗಳನ್ನು ಬೆಳೆಸಲು ಮುಂದಾದರು.

**284 ಆಲದ ಮರಗಳನ್ನು ಬೆಳೆಸಿದ ದಂಪತಿ**

ಮೊದಲಿಗೆ ತಿಮ್ಮಕ್ಕ ತಮ್ಮ ಪತಿ ಚಿಕ್ಕಯ್ಯನೊಂದಿಗೆ ಸೇರಿ, ಕುದೂರಿನಿಂದ ಹುಲಿಕಲ್ ತನಕ ಸುಮಾರು 4 ಕಿ.ಮೀ. ಉದ್ದಕ್ಕೂ 284 ಆಲದ ಮರಗಳನ್ನು ನೆಟ್ಟು ಬೆಳೆಸುವ ಮೂಲಕ ಪರಿಸರ ಪ್ರೇಮ ಮೆರೆದರು. ತಮ್ಮ ಅತ್ಯಲ್ಪ ಆದಾಯವನ್ನೇ ಬಳಸಿಕೊಂಡು, ಬಿಂದಿಗೆಯಲ್ಲಿ ನೀರು ಹೊತ್ತು ತಂದು, ಮುಳ್ಳು ಕಾಂಟಿಯಿಂದ ಸಸಿಗಳನ್ನು ರಕ್ಷಿಸಿ, ಅವುಗಳನ್ನು ಬೆಳೆಸುವ ಮೂಲಕ ಇಂದಿಗೂ ಲಕ್ಷಾಂತರ ರೂಪಾಯಿ ಮೌಲ್ಯದ ಆಲದ ಮರಗಳ ತೋಪನ್ನು ಸೃಷ್ಟಿಸಿದ್ದಾರೆ. ಇಂದಿಗೂ ಕುದೂರಿನಿಂದ ಹುಲಿಕಲ್ ತನಕ ಹೋಗುವ ರಾಜ್ಯ ಹೆದ್ದಾರಿ ಬದಿಯಲ್ಲಿ ತಿಮ್ಮಕ್ಕ ಬೆಳೆಸಿದ ಆಲದ ಮರಗಳು ಇವೆ. ಈಗ ಕರ್ನಾಟಕ ಸರ್ಕಾರ ಆ ಮರಗಳ ನಿರ್ವಹಣೆ ಮಾಡುತ್ತಿದೆ.

> **ತಿಮ್ಮಕ್ಕನವರು ಮಾಗಡಿ ತಾಲೂಕಿನಲ್ಲಿ 4.5 ಕಿ.ಮೀ ಉದ್ದಕ್ಕೂ 385 ಆಲದ ಮರಗಳನ್ನು ನೆಟ್ಟು ಬೆಳೆಸುವ ಮೂಲಕ ಪರಿಸರ ಪ್ರೇಮವನ್ನು ಮೆರೆದಿದ್ದಾರೆ. ಅಕ್ಷರಸ್ಥರಲ್ಲದಿದ್ದರೂ, ಪರಿಸರ ಸಂರಕ್ಷಣೆಯಲ್ಲಿ ಅವರು ಮಾಡಿದ ಸಾಧನೆ ಎಲ್ಲರಿಗೂ ಮಾದರಿಯಾಗಿದೆ. ಮರಗಳನ್ನು ತಮ್ಮ ಮಕ್ಕಳಂತೆ ನೋಡಿಕೊಂಡು, ಅವುಗಳ ಬೆಳವಣಿಗೆಗೆ ಶ್ರಮಿಸಿದ್ದರು.**

ಗಂಡನ ನಿಧನದ ನಂತರವೂ ತಿಮ್ಮಕ್ಕ ತಮ್ಮ ಗಿಡನೆಡುವ ಕಾರ್ಯ ಮುಂದುವರೆಸಿದೆ.

ಮಕ್ಕಳಿಲ್ಲದ ನೋವನ್ನು ಮರೆತು, 8,000ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಬೆಳೆಸಿದ್ದಾರೆ. ಅವರ ಈ ಮಹತ್ತರ ಸೇವೆಗೆ 2019ರಲ್ಲಿ ಪದ್ಮಶ್ರೀ ಪ್ರಶಸ್ತಿ, ರಾಷ್ಟ್ರೀಯ ನಾಗರಿಕ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ಬಿಬಿಸಿ 100 ಪ್ರಭಾವಶಾಲಿ ಮಹಿಳೆಯರಲ್ಲಿ ಸ್ಥಾನ (2016) ಸೇರಿದಂತೆ ನೂರಕ್ಕೂ ಹೆಚ್ಚು ಗೌರವಗಳು ಸಂದಿವೆ. ಅವರ ಹೆಸರಿನಲ್ಲಿ ಅಮೆರಿಕಾದ ಪರಿಸರ ಸಂಸ್ಥೆಗಳು ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿವೆ. 2020ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಇದು ಅವರ ಸೇವೆಯ ಜಾಗತಿಕ ಮಹತ್ವವನ್ನು ತೋರಿಸುತ್ತದೆ.

2019ರಲ್ಲಿ ಬಾಗೇಪಲ್ಲಿ–ಹಲಗೂರು ರಸ್ತೆ ಅಗಲೀಕರಣದ ಸಂದರ್ಭದಲ್ಲಿ, ಅವರೇ ಬೆಳೆಸಿದ 70 ವರ್ಷ ಹಳೆಯ ಆಲಮರಗಳು ಕಡಿಯುವ ಅಪಾಯಕ್ಕೆ ಸಿಲುಕಿದ್ದವು. ಆಗ ತಿಮ್ಮಕ್ಕ ಅವರು ನೇರವಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಮಾಡಿದರು. ಅವರ ಮನವಿಗೆ ಸ್ಪಂದಿಸಿದ ಸರ್ಕಾರ, ಮರಗಳನ್ನು ಉಳಿಸಲು ಪರ್ಯಾಯ ಮಾರ್ಗವನ್ನೇ ಹುಡುಕಬೇಕಾಯಿತು.



**ಕಳೆದ 2 ದಶಕಗಳಿಂದ ಜಾಗೃತಿ:** ಕಳೆದ ಎರಡು ದಶಕಗಳಿಂದ ಸಾಲುಮರದ ತಿಮ್ಮಕ್ಕ ಶಾಲೆಗಳು, ಸಭೆ ಸಮಾರಂಭಗಳು, ಸಾರ್ವಜನಿಕ ಸ್ಥಳಗಳಲ್ಲಿ ಗಿಡ ನೆಡುವ, ಮರಗಳನ್ನು ರಕ್ಷಿಸಿ ಪೋಷಣೆ ಮಾಡುವ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರು. ಸದ್ಯ ಅವರ ಈ ಅಗಲಿಕೆಯು ಕರ್ನಾಟಕದ ಪಾಲಿಕೆ ತುಂಬಲಾರದ ನಷ್ಟ.

## ಸಸಿಗಳನ್ನೇ ಮಕ್ಕಳೆಂದು ಬೆಳೆಸಿದ ವೃಕ್ಷಮಾತೆ

ಮಕ್ಕಳಿಲ್ಲದ ಕಾರಣಕ್ಕೆ ಸಸಿಗಳನ್ನೇ ಮಕ್ಕಳಂತೆ ಬೆಳೆಸಿ, ಪರಿಸರ ಸಂರಕ್ಷಣೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಸಾಲುಮರದ ತಿಮ್ಮಕ್ಕನವರು, ಕರ್ನಾಟಕದಾದ್ಯಂತ ಸುಮಾರು 8,000ಕ್ಕೂ ಹೆಚ್ಚು ಮರಗಳನ್ನು ಬೆಳೆಸಿದ್ದಾರೆ. ಅವರ ಈ ಅಪೂರ್ವ ಸೇವೆಗೆ ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ಹಲವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಗೌರವಗಳು ಸಂದಿವೆ.

## ಸಾಲುಮರದ ತಿಮ್ಮಕ್ಕ ಅವರಿಗೆ ಸಂದ ಪ್ರಶಸ್ತಿಗಳು

- ರಾಷ್ಟ್ರೀಯ ಪೌರ ಪ್ರಶಸ್ತಿ – 1995
- ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ –1997
- ವೀರಚಕ್ರ ಪ್ರಶಸ್ತಿ – 1997
- ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ – ಇವರಿಂದ ಮಾನ್ಯತೆಯ ಪ್ರಮಾಣ ಪತ್ರ
- ಭಾರತೀಯ ವೃಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು – ಇವರಿಂದ ಶ್ಲಾಘನೆಯ ಪ್ರಮಾಣ ಪತ್ರ.
- ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ – 2000
- ಗಾಡ್ಫ್ರಿ ಫಿಲಿಪ್ಸ್ ಧೀರತೆ ಪ್ರಶಸ್ತಿ – 2006
- ಪಂಪಾಪತಿ ಪರಿಸರ ಪ್ರಶಸ್ತಿ
- ಬಾಬಾಸಾಹೇಬ್ ಅಂಬೇಡ್ಕರ್ ಪ್ರಶಸ್ತಿ
- ವನಮಾತೆ ಪ್ರಶಸ್ತಿ
- ಮಾಗಡಿ ವ್ಯಕ್ತಿ ಪ್ರಶಸ್ತಿ
- ಶ್ರೀಮಾತಾ ಪ್ರಶಸ್ತಿ
- ಎಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ
- ಕರ್ನಾಟಕ ಪರಿಸರ ಪ್ರಶಸ್ತಿ
- ಮಹಿಳಾರತ್ನ ಪ್ರಶಸ್ತಿ
- ನ್ಯಾಷನಲ್ ಸಿಟಿಜನ್ ಪ್ರಶಸ್ತಿ
- ರಾಜ್ಯೋತ್ಸವ ಪ್ರಶಸ್ತಿ
- ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ವಿಶಾಲಾಕ್ಷಿ ಪ್ರಶಸ್ತಿ.
- 2010 ನೇ ಸಾಲಿನ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿ ಲಭಿಸಿದೆ.
- 2019ರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ.
- 2020ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್.



## ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವ




ಅವರ ಈ ಮಹತ್ತರ ಕಾರ್ಯವನ್ನು ಗುರುತಿಸಿ, 2019ರಲ್ಲಿ ಭಾರತ ಸರ್ಕಾರವು ದೇಶದ ನಾಲ್ಕನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1995ರಲ್ಲಿ ಅವರಿಗೆ ರಾಷ್ಟ್ರೀಯ ನಾಗರಿಕ ಪ್ರಶಸ್ತಿ ಸಹ ಲಭಿಸಿತು. ಅಮೇರಿಕಾದ ಲಾಸ್ ಏಂಜಲೀಸ್ ಮತ್ತು ಓಕ್‌ಲ್ಯಾಂಡ್‌ನಲ್ಲಿರುವ ತಿಮ್ಮಕ್ಕನ ಸಂಪನ್ಮೂಲಗಳು ಎಂಬ ಪರಿಸರ ಶಿಕ್ಷಣ ಸಂಸ್ಥೆಗೆ ಅವರ ಹೆಸರಿಡಲಾಗಿದೆ. ಇದು ಅವರ ಅಂತಾರಾಷ್ಟ್ರೀಯ ಮಟ್ಟದ ಗುರುತಿಸುವಿಕೆಗೆ ಸಾಕ್ಷಿಯಾಗಿದೆ. ಇದಲ್ಲದೆ, ವೃಕ್ಷಮಿತ್ರ ಪ್ರಶಸ್ತಿ, ವೀರಚಕ್ರ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ, ಗಾಡ್ಫ್ರಿ ಫಿಲಿಪ್ಸ್ ಧೀರತೆ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳು ಅವರ ಸಾಧನೆಗೆ ಸಂದಿವೆ. ಕರ್ನಾಟಕ ಸರ್ಕಾರವು ಅವರನ್ನು ಪರಿಸರ ರಾಯಭಾರಿ ಎಂದು ಘೋಷಿಸಿ, ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಿ ಗೌರವಿಸಿದೆ.



ಸಾಲುಮರದ ತಿಮ್ಮಕ್ಕ ಅವರ ನಿಧನದ ಸುದ್ದಿ ತಿಳಿದು ದುಃಖಿತನಾಗಿದ್ದೇನೆ. ಸಾವಿರಾರು ಗಿಡಗಳನ್ನು ನೆಟ್ಟು, ಅವುಗಳನ್ನು ಮಕ್ಕಳಂತೆ ಸಲಹಿದ ತಿಮ್ಮಕ್ಕನವರು ತಮ್ಮ ಬಹುಪಾಲು ಜೀವಿತ ಕಾಲವನ್ನು ಪರಿಸರ ಸಂರಕ್ಷಣೆಗಾಗಿ ಮುಡಿಪಾಗಿಟ್ಟವರು. ಇಂದು ತಿಮ್ಮಕ್ಕನವರು ನಮ್ಮನ್ನು ಅಗಲಿದರೂ ಅವರ ಪರಿಸರ ಪ್ರೇಮ ಅವರನ್ನು ಚಿರಸ್ಥಾಯಿಯಾಗಿಸಿದೆ. ಅಗಲಿದ ಮಹಾಚೇತನಕ್ಕೆ ನನ್ನ ನಮನಗಳು. ಸಾಲುಮರದ ತಿಮ್ಮಕ್ಕನವರ ನಿಧನದಿಂದ ನಾಡು ಬಡವಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಅವರ ಕುಟುಂಬವರ್ಗಕ್ಕೆ ನನ್ನ ಸಂತಾಪಗಳು.

–ಸಿದ್ದರಾಮಯ್ಯ, ಸಿಎಂ





ಪರಿಸರಕ್ಕಾಗಿ ತಮ್ಮ ಇಡೀ ಬದುಕನ್ನೇ ಮುಡಿಪಿಟ್ಟು ಪ್ರಕೃತಿಗಾಗಿಯೇ ಬದುಕಿ ಬಾಳಿದ ಪದ್ಮಶ್ರೀ ಪುರಸ್ಕೃತ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ನಿಧನದ ಸುದ್ದಿ ಕೇಳಿ ಬಹಳ ದುಃಖವಾಯಿತು. ನಾಡಿಗೆ ಅವರು ನೀಡಿರುವ ಕೊಡುಗೆ, ಅವರಿಂದ ದೊರೆತಿರುವ ಪ್ರೇರಣೆ ಅಜರಾಮರ. ಅಗಲಿದ ಆ ಚೇತನಕ್ಕೆ ಚಿರಶಾಂತಿ ದೊರೆಯಲಿ. ಈ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ, ಅಭಿಮಾನಿಗಳಿಗೆ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

–ಎಚ್ ಡಿ ಕುಮಾರಸ್ವಾಮಿ
ಕೇಂದ್ರ ಸಚಿವ



ವೃಕ್ಷೋ ರಕ್ಷತಿ ರಕ್ಷಿತಃ ಎಂದು ಹೇಳುತ್ತಾರೆ. ಮರಗಳನ್ನು ರಕ್ಷಿಸಿದ ತಿಮ್ಮಕ್ಕನವರು ಇಂದು ವಿಶ್ವ ಮಾನ್ಯರಾಗಿದ್ದಾರೆ. ಬಿಬಿಸಿ ಸುದ್ದಿವಾಹಿನಿ ನಡೆಸಿದ ಜಗತ್ತಿನ 100 ಪ್ರಭಾವಿ ಮಹಿಳೆಯರ ಸಮೀಕ್ಷೆಯಲ್ಲಿ ಸಾಲು ಮರದ ತಿಮ್ಮಕ್ಕ ಸ್ಥಾನ ಪಡೆದಿದ್ದರು. ತಿಮ್ಮಕ್ಕ ಅವರ ಜೀವನ, ಸೇವೆಯ ಮೇಲೆ ಅಧ್ಯಯನ ನಡೆಸಿ ಪ್ರೌಢ ಪ್ರಬಂಧ ಮಂಡಿಸಿ ಡಾಕ್ಟರೇಟ್ ಸಹ ಪಡೆದಿದ್ದಾರೆ. ಇವರ ಕಾರ್ಯಕ್ಕೆ ರಾಷ್ಟ್ರೀಯ ಪೌರ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರ, ರಾಜ್ಯೋತ್ಸವ, ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ಪರಿಸರ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳು ದೊರೆತಿವೆ. ತಿಮ್ಮಕ್ಕ ಅವರು ತಮ್ಮ ಇಡೀ ಜೀವನವನ್ನು ಪರಿಸರ ಕಾಳಜಿಗೆ ಮುಡಿಪಾಗಿಟ್ಟದ್ದರು. ರಾಜ್ಯಕ್ಕೆ ಅವರು ನೀಡಿದ ಕೊಡುಗೆ ಅಪಾರ. ಮೃತರ ಕುಟುಂಬ ವರ್ಗ ಹಾಗೂ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಅಗಲಿದ ಹಿರಿಯ ಜೀವಕ್ಕೆ ನಾನು ಶ್ರದ್ಧಾಂಜಲಿ ಸಲ್ಲಿಸುತ್ತೇನೆ.

–ಈಶ್ವರ ಖಂಡ್ರೆ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ನೂರಕ್ಕೂ ಹೆಚ್ಚು ಗೌರವಗಳು



ವೃಕ್ಷಮಾತೆ ಎಂದೇ ಮನೆಮಾತಾಗಿದ್ದ ಸಾಲುಮರದ ತಿಮ್ಮಕ್ಕ ಅವರ ನಿಧನದಿಂದ ನಾಡು ಪರಿಸರ ಪೋಷಕ ಮತ್ತು ರಾಯಭಾರಿಯೊಬ್ಬರನ್ನು ಕಳೆದುಕೊಂಡಿದೆ ಗ್ರಾಮಾಂತರ ಪ್ರದೇಶದ ತಿಮ್ಮಕ್ಕನವರು ಗಿಡಮರಗಳನ್ನು ಮಕ್ಕಳೆಂದು ಭಾವಿಸಿದ್ದರು. ಅವರಿಂದಾಗಿ ಪರಿಸರಪ್ರಿಯತೆಗೆ ನಿಸರ್ಗಸಹಜವಾದ ನಿರಾಭರಣ ಆಯಾಮವೊಂದು ದಕ್ಕಿತು. ಅವರು ಕಿರಿಯ ತಲೆಮಾರುಗಳಲ್ಲಿ ತಮ್ಮ ಸಹಜತೆಯ ಮೂಲಕ ನಿಸರ್ಗಪ್ರೀತಿ ಹುಟ್ಟಿಸಿದ್ದರು. ಅವರಿಂದಾಗಿ ಕರ್ನಾಟಕಕ್ಕೂ ಖ್ಯಾತಿ ಸಿಕ್ಕಿತ್ತು.

–ಎಂ ಬಿ ಪಾಟೀಲ
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

8,000ಕ್ಕೂ ಹೆಚ್ಚು ಗಿಡ



ಸಾವಿರಾರು ಮರಗಳನ್ನು ನೆಟ್ಟು 'ವೃಕ್ಷಮಾತೆ' ಎಂದೇ ಹೆಸರುವಾಸಿಯಾಗಿದ್ದ ಪರಿಸರವಾದಿ, ಶತಾಯುಷಿ ಸಾಲುಮರದ ತಿಮ್ಮಕ್ಕ ಅವರ ನಿಧನದ ಸುದ್ದಿ ನೋವುಂಟು ಮಾಡಿದೆ. ಸುಮಾರು ನಾಲ್ಕೂವರೆ ಕಿ.ಮೀಟರ್ ಆಲದ ಮರಗಳನ್ನು ನೆಟ್ಟು ಮಕ್ಕಳಂತೆ ಪೋಷಿಸಿದ ಮಹಾನ್ ಮಾತೆ ತಿಮ್ಮಕ್ಕ. ಮರಗಳಿಗೆ ಬೇಲಿ ಹಾಕಿ, ನೀರು ಹಾಯಿಸಿ, ಕಾವಲು ಕಾಯುತ್ತಿದ್ದರು. ಅಂದಿನ ಕಾಲದಲ್ಲೇ ಅವರ ಕೆಲಸದಿಂದ ದಾರಿಯಲ್ಲಿ ಹೋಗುತ್ತಿದ್ದ ಲಕ್ಷಾಂತರ ಮಂದಿ ಆಶ್ರಯ ಪಡೆಯುತ್ತಿದ್ದರು. ಇವರ ಪರಿಸರ ಕಾಳಜಿ ಇಡೀವಿಶ್ವಕ್ಕೆ ಮಾದರಿಯಾಗಿದೆ.


– ಶಿವರಾಜ್. ಎಸ್.ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ

# ಕೀವ್ ಮೇಲೆ ಬೆಳ್ಳಂಬೆಳ್ಳಗೆ ಡ್ರೋನ್ ದಾಳಿ ನಡೆಸಿದ ರಷ್ಯಾ; 4 ಜನ ಸಾವು, 27 ಮಂದಿಗೆ ಗಾಯ

**ಕೀವ್:** ರಷ್ಯಾ, ಉಕ್ರೇನ್ ನಡುವೆ ಯುದ್ಧ ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹರಸಾಹಸ ಪಡುತ್ತಿದ್ದಾರೆ. ಆದರೆ ಈ ಕಡೆ ರಷ್ಯಾ, ಉಕ್ರೇನ್ ಇಬ್ಬರು ಒಬ್ಬರ ಮೇಲೊಬ್ಬರು ದಾಳಿ ನಡೆಸುವುದನ್ನು ಮಾತ್ರ ನಿಲ್ಲುಸುತ್ತಲೇ ಇಲ್ಲ. ಈಗ ಇದರ ಮುಂದಿನ ಹಂತವಾಗಿ ಮತ್ತೆ ರಷ್ಯಾ ಶುಕ್ರವಾರ ಮುಂಜಾನೆ ಎಲ್ಲರೂ ಇನ್ನು ನಿದ್ದಯಲ್ಲಿರುವಾಗಲೇ ಉಕ್ರೇನ್‌ನ ರಾಜಧಾನಿ ಕೀವ್ ನ ಬಹುತೇಕ ಪ್ರದೇಶಗಳ ಮೇಲೆ ಆಕ್ರಮಣಕಾರಿ ದಾಳಿ ನಡೆಸಿದೆ.

**ಕೀವ್ ಮೇಲೆ ರಷ್ಯಾ ಡ್ರೋನ್ ದಾಳಿ:** ರಷ್ಯಾ ಪಡೆಗಳು ಕೀವ್ ನಗರದ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದವು. ಈ ದಾಳಿಯಿಂದಾಗಿ ವಸತಿ ಕಟ್ಟಡಗಳಿಗೆ ಹಾನಿಯಾಗಿದೆ. ನಗರದ ಹಲವು ಭಾಗಗಳಲ್ಲಿ ಸ್ಫೋಟಗಳು, ಬೆಂಕಿ ಕಾಣಿಸಿಕೊಂಡಿದೆ. ಈ ದಾಳಿಯಲ್ಲಿ 4 ಜನ ಸಾವನ್ನಪ್ಪಿದ್ದು, 27 ಮಂದಿ ಗಾಯಗೊಂಡಿದ್ದಾರೆ.

ನಾಲ್ವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಷ್ಯಾ ನಡೆಸಿರುವ ದಾಳಿಗಳ ಕುರಿತು ಮಾಹಿತಿ ನೀಡಿರುವ ಕೀವ್ ಮೇಯರ್ ವಿಟಾಲಿ ಕ್ಲಿಟ್ಶ್ಕೊ ಈ ದಾಳಿಗಳನ್ನು ಶತ್ರುಗಳ ಭಯಾನಕ ದಾಳಿ ಎಂದು ಕರೆದಿದ್ದು,



ಸುಮಾರು 30 ಲಕ್ಷ ಜನಸಂಖ್ಯೆ ಹೊಂದಿರುವ ಕೀವ್ ನಗರದ ವಿವಿಧ ಪ್ರದೇಶಗಳಲ್ಲಿ ದಾಳಿಗಳಿಂದಾಗಿ ಉಂಟಾದ ಬೆಂಕಿಯಿಂದಾಗಿ ಬಹುಮಹಡಿ ವಸತಿ ಕಟ್ಟಡಗಳು, ಶಾಲೆ, ವೈದ್ಯಕೀಯ ಕೇಂದ್ರ ಮತ್ತು ಆಡಳಿತ ಕಟ್ಟಡಗಳಿಗೆ ಹಾನಿಯಾಗಿದೆ ಒಟ್ಟು 27 ಜನರಿಗೆ ಗಾಯಗಳಾಗಿವೆ. ಅವರಲ್ಲಿ ನಾಲ್ವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಗೊಂಡವರಲ್ಲಿ ಒಬ್ಬ ಗರ್ಭಿಣಿ ಮಹಿಳೆ ಮತ್ತು ಒಬ್ಬ ವ್ಯಕ್ತಿ ಗಂಭೀರ ಸ್ಥಿತಿಯಲ್ಲಿದ್ದಾರೆ ಎಂದು ತಿಳಿಸಿದ್ದಾರೆ.

**ಟ್ರಂಪ್ ಹರ ಸಾಹಸ**


**ಕೊರೆಯುವ ಚಳಿಯಲ್ಲಿ ತಾಪನ ವ್ಯವಸ್ಥೆ ಹಾಳಾಗಿ ಉಕ್ರೇನ್ ಗೆ ಇನ್ನೊಂದು ಸವಾಲು:** ಮೇಯರ್ ಕ್ಲಿಟ್ಶ್ಕೊ ಅವರು ಕೀವ್‌ನಲ್ಲಿ ಚಳಿಗಾಲದಲ್ಲಿ ಜನರು ಉಪಯೋಗಿಸುತ್ತಿದ್ದ ತಾಪನ ವ್ಯವಸ್ಥೆಗೂ ಹಾನಿಯಾಗಿದೆ ಎಂದು ಹೇಳಿದ್ದಾರೆ. ಒಂದು ಜಿಲ್ಲೆಯಲ್ಲಿ ಸಂಪೂರ್ಣ ಸೇವೆ ಸ್ಥಗಿತಗೊಂಡಿದೆ. ಇದರಿಂದಾಗಿ ವಿದ್ಯುತ್, ನೀರಿನ ಸರಬರಾಜಿನಲ್ಲಿ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ಅಲ್ಲದೇ, ದಾಳಿಯಲ್ಲಿ ಡ್ರೋನ್‌ಗಳನ್ನು ಬಳಸಿದ್ದು, ಡಿನಿಪ್ರೊ ನದಿಯ ಪೂರ್ವದಲ್ಲಿರುವ ಡಿನಿಪ್ರೊವ್ಸ್ಕಿ ಜಿಲ್ಲೆಯಲ್ಲಿ ಮೂರು ಎತ್ತರದ ವಸತಿ ಕಟ್ಟಡ, ಡೆಸ್ನ್ಯಾನ್ಸ್ಕಿ ಜಿಲ್ಲೆಯಲ್ಲಿ ಎರಡು ಕಟ್ಟಡಗಳು ಮತ್ತು ಎದುರು ದಡದಲ್ಲಿರುವ ಐತಿಹಾಸಿಕ ಪೊಡಿಲ್ ಜಿಲ್ಲೆಯಲ್ಲಿ ಐದು ಕಟ್ಟಡಗಳು ಸೇರಿದಂತೆ ಹಲವು ಕಟ್ಟಡಗಳು ಹಾನಿಗೊಳಗಾಗಿವೆ.

ಈಗಾಗಲೇ ತುರ್ತು ಸೇವಾ ತಂಡಗಳನ್ನು ಅಲ್ಲಿಗೆ ಕಳುಹಿಸಿ ಬಹುತೇಕರನ್ನು ರಕ್ಷಣೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಇನ್ನು, ರಷ್ಯಾದ ಡ್ರೋನ್‌ಗಳು ಕೀವ್ ಮೇಲೆ ದಾಳಿ ನಡೆಸುತ್ತಿರುವ ದೃಶ್ಯಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದು, ಈ ಚಿತ್ರಗಳಲ್ಲಿ ಬೆಂಕಿಯಿಂದ ಹೊತ್ತಿ ಉರಿಯುತ್ತಿರುವ ವಿವಿಧ ಸ್ಥಳಗಳು, ಅವಶೇಷಗಳ ನಡುವೆ ನಿಂತಿರುವ ನಿವಾಸಿಗಳು ಕಂಡುಬರುತ್ತಿದ್ದಾರೆ. ಇನ್ನು, ಇತ್ತೀಚೆಗಷ್ಟೆ ಉಕ್ರೇನ್ ವಾಯುಪಡೆಗಳು ಸಹ ಡ್ರೋನ್ ತಂತ್ರಜ್ಞಾನಗಳನ್ನು ಬಳಸಿಯೇ ರಷ್ಯಾದ ಒಳನುಸುಳಿ ದಾಳಿ ನಡೆಸಿತ್ತು. ಈಗ ತನ್ನ ಸರದಿ ಎಂಬಂತೆ ರಷ್ಯಾ ಸಹ ದಾಳಿ ನಡೆಸಿದ್ದು, ಯುದ್ಧ ನಿಲ್ಲಿಸಲು ಟ್ರಂಪ್‌ನ ಎಲ್ಲಾ ಪ್ರಯತ್ನಗಳೂ ನೀರಿನಲ್ಲಿ ಹಾಕಿದ ಬೂದಿಯಂತೆ ಯಾವುದೇ ಪ್ರಯೋಜನವಿಲ್ಲದೆ ಇರುವದರ ಜೊತೆಗೆ ಇನ್ನು, ಹೆಚ್ಚಿನ ಪ್ರಮಾಣದ ದಾಳಿಗಳು ನಡೆಯುತ್ತಲೇ ಇರುವುದು ಈ ಯುದ್ಧ ಯಾವ ಹಂತವನ್ನು ತಲುಪಲಿದೆ ಎಂಬ ಆತಂಕ ಮೂಡುವಂತೆ ಆಗಿದೆ.

## ಕೆಂಪು ಕೋಟೆಯ ಬಳಿ ಸ್ಫೋಟದ ನಡೆಸಿದ ಉಗ್ರರಿಗೆ ಶಿಕ್ಷೆಯಾಗಬೇಕು; ತರೂರ್

**ನವದೆಹಲಿ:** ಕೆಂಪು ಕೋಟೆಯ ಬಳಿ ನಡೆದ ದೆಹಲಿ ಸ್ಫೋಟದ ಕುರಿತು ಸರ್ಕಾರದ ಸಂಶೋಧನೆಗಳನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಬೆಂಬಲಿಸಿದ್ದಾರೆ. ಭಯೋತ್ಪಾದಕ ದಾಳಿಗೆ ಶಿಕ್ಷೆಯಾಗದೆ ಇರಲು ಸಾಧ್ಯವಿಲ್ಲ ಎಂದು ತರೂರ್ ಹೇಳಿದರು ಮತ್ತು ಅಪರಾಧಿಗಳನ್ನು ನ್ಯಾಯಕ್ಕೆ ತರುವ ಸರ್ಕಾರದ ಮೇಲೆ ನಂಬಿಕೆ ಇಟ್ಟಿದ್ದಾರೆ. ಫರಿದಾಬಾದ್‌ನ ಅಲ್-ಫಲಾಹ್ ವಿಶ್ವವಿದ್ಯಾಲಯದ ವೈದ್ಯ, ಉಮರ್‌ಮೊಹಮ್ಮದ್ ಅಲಿಯಾಸ್ ಉಮರ್ ಉನ್ ನಬಿ ಸ್ಫೋಟಗೊಂಡ ಕಾರಿನಲ್ಲಿ ಇದ್ದರು ಎಂದು ಡಿಎನ್‌ಎ ಪರೀಕ್ಷಾ ಫಲಿತಾಂಶಗಳು ದೃಢಪಡಿಸಿವೆ.

ಸ್ಫೋಟ ಸ್ಥಳದಲ್ಲಿ ಕಂಡುಬಂದ ಡಿಎನ್‌ಎ ಮಾದರಿಗಳು ಡಾ. ಉಮರ್ ಅವರ ತಾಯಿಯೊಂದಿಗೆ ಹೊಂದಿಕೆಯಾಗುತ್ತವೆ. ಕಠಿಣ ಶಿಕ್ಷೆಯನ್ನು ನೀವು ಪ್ರತಿಪಾದಿಸುತ್ತೀರಾ ಎಂದು ಕೇಳಿದಾಗ, ತರೂರ್ ಹೇಳಿದರು, ಈ ಹಂತದಲ್ಲಿ, ಸರ್ಕಾರ ಏನು ಮಾಡುತ್ತದೆ ಎಂದು ನಾನು ಊಹಿಸಲು ಬಯಸುವುದಿಲ್ಲ ಆದರೆ ಭಯೋತ್ಪಾದಕ ದಾಳಿಯು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸರ್ಕಾರ ಈಗಾಗಲೇ ಅಪರಾಧಿಗಳನ್ನು ಬೇಟೆಯಾಡುವುದಾಗಿ ಹೇಳಿದೆ, ಮತ್ತು ಅವರಲ್ಲಿ ಕೆಲವರು ಸ್ಫೋಟದ ಪ್ರಕ್ರಿಯೆಯಲ್ಲಿ ಸಾವನ್ನಪ್ಪಿದ್ದಾರೆ ಎಂದು ನಮಗೆ ತಿಳಿದಿದೆ. ಕೆಲವು ಸಿದ್ಧಾಂತಗಳೆಂದರೆ ಇನ್ನೂ ಹೆಚ್ಚಿನದನ್ನು ಯೋಜಿಸಲಾಗಿತ್ತು ಮತ್ತು ಅವುಗಳಲ್ಲಿ ಕೆಲವನ್ನು ತಡೆಯಲಾಗಿದೆ, ಅದಕ್ಕಾಗಿ ನಾವು ಕೃತಜ್ಞರಾಗಿರಬೇಕು ಎಂದು ನಾನು ಭಾವಿಸುತ್ತೇನೆ ಎಂದಿದ್ದಾರೆ. ಆದರೆ ಮುಂಬರುವ ವಾರಗಳು ಮತ್ತು ತಿಂಗಳುಗಳಲ್ಲಿ ನಮ್ಮ ನಾಗರಿಕರ ಸುರಕ್ಷತೆ ಮತ್ತು ಸುರಕ್ಷತೆಯನ್ನು ಸಂರಕ್ಷಿಸುವುದು, ರಕ್ಷಿಸುವುದು ನಮಗೆ ಅತ್ಯಂತ ಮುಖ್ಯವಾದ ವಿಷಯ. ನಾವು ಆಪರೇಷನ್ ಸಿಂಧೂರ್ ನಡೆಸಿದಾಗ ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಜೈಶ್-ಎ-ಮೊಹಮ್ಮದ್ ಕಾನೂನುಬದ್ಧ ಗುರಿಯಾಗಿತ್ತು ಎಂದು ತರೂರ್ ಹೇಳಿದರು. ನಾಗರಿಕ ಜೀವಗಳನ್ನು ರಕ್ಷಿಸಲು ಬಯಸುವವರಿಂದ ಭಯೋತ್ಪಾದಕ ಗುಂಪುಗಳಿಗೆ ಯಾವುದೇ ಶಿಕ್ಷೆಯ ವಿನಾಯಿತಿ ಮತ್ತು ರಕ್ಷಣೆ ಇರಲಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ, ಇದು ಭಯೋತ್ಪಾದಕ ದಾಳಿ ಎಂದು ಸರ್ಕಾರ ಕಂಡುಕೊಂಡಿರುವುದನ್ನು ನಾನು ಖಂಡಿತವಾಗಿಯೂ ಗೌರವಿಸುತ್ತೇನೆ. ಜನರು ಒಗ್ಗಟ್ಟಿನಿಂದ ನಿಂತು ಜಾಗರೂಕರಾಗಿರಬೇಕು, ದೇಶ, ಅದರ ಜನರ ಸುರಕ್ಷತೆ, ಭದ್ರತೆಯನ್ನು ಖಾತ್ರಿಪಡಿಸಿಕೊಳ್ಳುವಲ್ಲಿ ಅಧಿಕಾರಿಗಳೊಂದಿಗೆ ಸಹಕರಿಸಬೇಕು ಎಂದು ಕರೆ ನೀಡಿದರು. ಭಯೋತ್ಪಾದನೆಯ ಮೇಲಿನ ಅಂತರರಾಷ್ಟ್ರೀಯ ಕ್ರಮದ ಕುರಿತು ಮಾತನಾಡಿದ ತರೂರ್ ಅವರು ಈಗ ಅದರ ಬಗ್ಗೆ ಮಾತನಾಡುವುದು ಅಕಾಲಿಕವಾಗಿದೆ. ನಾವು ಭಯೋತ್ಪಾದನೆಯ ವಿರುದ್ಧ ಜಾಗತಿಕ ವೇದಿಕೆಯಲ್ಲಿ ನಿಂತಿದ್ದೇವೆ ಎಂದರು.



## CPEC ಯೋಜನೆಯಲ್ಲಿ ತನ್ನ ಅಸಮರ್ಥತೆ ಒಪ್ಪಿಕೊಂಡ ಪಾಕ್

### ಚೀನಾ ನೀಡಿದ್ದ ಗೋಲ್ಡನ್ ಆಫರ್ ಮಿಸ್ ಮಾಡಿಕೊಂಡ ಪಾಕ್ ಸ್ಥಿತಿ ಅಧೋಗತಿ

**ಇಸ್ಲಾಮಾಬಾದ್:** ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಬೇಕು ಎಂದು ಕೇಳುವ ಪಾಕಿಸ್ತಾನ ಯಾವಾಗಲೂ ಯುದ್ಧಕ್ಕೆ ಕಾಲುಕೆರೆದು ನಿಂತಿರುತ್ತದೆ. ಯುದ್ಧದಲ್ಲಿ ಹೇಗೂ ಗೆಲ್ಲಲಾರದೆ ತನ್ನ ಅಸಮರ್ಥತೆಯನ್ನು ಪಾಕ್ ಈಗಾಗಲೇ ಸಾಬೀತುಪಡಿಸಿದೆ, ಆದರೆ ತನಗೆ ಬೇಕಾದ ಮೂಲ ಸೌಲಭ್ಯಗಳನ್ನು ಒದಗಿಸಲು ಕೇವಲ ಕೆಲವೇ ಜನರು ತನ್ನ ಸಹಾಯಕ್ಕೆ ಬರುತ್ತಾರೆಂದು ತಿಳಿದಿದ್ದರು ಸಹ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ, ಸಹಾಯ ಪಡೆದುಕೊಳ್ಳುವಲ್ಲೂ ತಾನು ಅಸಮರ್ಥ ಎಂದು ಒಪ್ಪಿಕೊಂಡಿದೆ. ಪಾಕಿಸ್ತಾನದ ಆಪ್ತರಕ್ಷಕನಂತಿದ್ದ ಚೀನಾ ಬಡಪಾಯಿ ಪಾಕ್ ಬದುಕಿಕೊಳ್ಳಲು ನೆರವಾಗಲೆಂದು ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ಯೋಜನೆ ರೂಪಿಸಿತ್ತು.

ಆದರೆ ಈ ಅವಕಾಶವನ್ನು ತಮ್ಮ ಅಸಮರ್ಥತೆ ಹಾಗೂ ಬೆನ್ನುಮೂಳೆಯಿಲ್ಲದ ಆಡಳಿತ ವ್ಯವಸ್ಥೆಯಿಂದ ಸ್ವತಃ ಹೂಡಿಕೆದಾರರೇ ನಿಮ್ಮ ಸಹವಾಸ ನಮಗೆ ಬೇಡ ಎಂದು ದೇಶದಿಂದಲೇ ಹೊರಟುಹೋಗಿದ್ದಾರೆ. ಈ ಕುರಿತು ಮಾತನಾಡಿರುವ ಪಾಕಿಸ್ತಾನದ ಯೋಜನಾ ಸಚಿವ ಅಹ್ಸಾನ್ ಇಕ್ಬಾಲ್ ಈ ಯೋಜನೆ ಹಿಂದಿನ ಇಮ್ರಾನ್ ಖಾನ್ ಸರ್ಕಾರದಲ್ಲಿ ರಾಜಕೀಯ ಗೊಂದಲದಿಂದಲೇ ಮುರಿದು ಬಿದಿದ್ದೆ ಎಂದು ಹೇಳಿದ್ದಾರೆ.

**ತಮ್ಮ ಪಾಲಿಗೆ ಗೇಮ್ ಚೇಂಜರ್ ಆಗಿದ್ದ CPEC ಯೋಜನೆ ಕೈಚೆಲ್ಲಿದ ಪಾಕ್:** ಪಾಕಿಸ್ತಾನ್ ಬ್ಯೂರೋ ಆಫ್ ಸ್ಟ್ಯಾಟಿಸ್ಟಿಕ್ಸ್ ಆಯೋಜಿಸಿದ್ದ ಎರಡು ದಿನಗಳ ಡೇಟಾಫೆಸ್ಟ್ ಸಮ್ಮೇಳನದ ಇಕ್ಬಾಲ್ ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ಯೋಜನೆಯು ಪಾಕಿಸ್ತಾನದ ಪಾಲಿಗೆ ಗೇಮ್ ಚೇಂಜರ್‌ನಂತಿತ್ತು, ಈ ಯೋಜನೆಯು ಪಾಕಿಸ್ತಾನದ ಮೂಲಸೌಕರ್ಯ, ಆರ್ಥಿಕತೆಯನ್ನು ಸುಧಾರಿಸುವುದರ ಜೊತೆಗೆ, ಚೀನಾದ ಜಾಗತಿಕ ಪ್ರಭಾವವನ್ನು ಹೆಚ್ಚಿಸುವ ಗುರಿಯನ್ನು ಹೊಂದಿತ್ತು. ಆದರೆ, ಪಾಕಿಸ್ತಾನದ ಆರ್ಥಿಕತೆ ಅಭಿವೃದ್ಧಿ ಹೊಂದುವ ಅನೇಕ ಅವಕಾಶಗಳನ್ನು ಕಳೆದುಕೊಂಡಿದೆ.

ಇದಕ್ಕೆ ಕಾರಣ ಈ ಹಿಂದೆ ಇದ್ದ ಇಮ್ರಾನ್ ಖಾನ್ ಆಡಳಿತದ ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ ಸರ್ಕಾರವು ಚೀನೀ ಹೂಡಿಕೆಗಳ ಪ್ರತಿಷ್ಠೆಗೆ ಧಕ್ಕೆ ತಂದಿದೆ. ಇದರಿಂದ ಕಠಿಣ



ಸಮಯಗಳಲ್ಲಿ ನಮ್ಮ ಬೆಂಬಲಕ್ಕೆ ನಿಂತಿದ್ದ ಚೀನಾ ನಮಗೆ ಬೆಂಬಲ ನೀಡಿದ್ದರೂ ಅವರು ದೇಶ ತೊರೆಯುವ ಪರಿಸ್ಥಿತಿ ಬಂದಿದೆ ಎಂದು ಹೇಳಿದ್ದಾರೆ.

**CPECನಿಂದ ಅಲ್ಪಾವಧಿಯ ಲಾಭ**

**ಏನಿದು ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ಯೋಜನೆ?:** 60 ಶತಕೋಟಿ ಮೌಲ್ಯದ CPEC ಯೋಜನೆಯು, ಚೀನಾದ ಕ್ಸಿನ್ ಜಿಯಾಂಗ್ ಅನ್ನು ಪಾಕಿಸ್ತಾನದ ಗ್ವಾದರ್ ಬಂದರಿನೊಂದಿಗೆ ಸಂಪರ್ಕಿಸುತ್ತದೆ. ಇದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರ ಮಹತ್ವಾಕಾಂಕ್ಷೆಯ ಬೆಲ್ಟ್ ಅಂಡ್ ರೋಡ್ ಇನಿಶಿಯೇಟಿವ್‌ನ ಪ್ರಮುಖ ಭಾಗವಾಗಿದೆ.

ಈ CPEC ಯೋಜನೆ ಪಾಕಿಸ್ತಾನದ ಮೂಲಸೌಕರ್ಯ ಮತ್ತು ಆರ್ಥಿಕತೆಯನ್ನು ಸುಧಾರಿಸುವ ಉದ್ದೇಶದಿಂದ ಕೂಡಿತ್ತು. ಇದರ ಜೊತೆಗೆ ಪ್ರಪಂಚದಲ್ಲಿ ಅಮೆರಿಕಾವನ್ನು ಹಿಂದಕ್ಕೆ ತಳ್ಳಿ ತಾನು ನ.1 ಪಟ್ಟಕ್ಕೇರಲು ಹಂಬಲಿಸುತ್ತಿರುವ ಚೀನಾದ ಜಾಗತಿಕ ಪ್ರಭಾವವನ್ನು ಹೆಚ್ಚಿಸುವ ಗುರಿಯನ್ನು ಹೊಂದಿತ್ತು. ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿಯ ಪ್ರಕಾರ, ದೀರ್ಘಕಾಲದ ಉಪಯೋಗಗಳನ್ನು ದೃಷ್ಟಿಯಲ್ಲಿಟ್ಟುಕೊಂಡು 2013ರಲ್ಲಿ ಪ್ರಾರಂಭವಾದ ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ಪಾಕಿಸ್ತಾನದ ಅಸಮರ್ಥತೆ ಹಾಗೂ ದೇಶದಲ್ಲಿನ ಅಸ್ಥಿರತೆಯಿಂದಾಗಿ 2018 ರಿಂದ CPEC ಯೋಜನೆಯಲ್ಲಿ ಹೆಚ್ಚಿನ ಪ್ರಗತಿ ಕಂಡುಬಂದಿಲ್ಲ. CPEC ಜಂಟಿ ಸಹಕಾರ ಸಮಿತಿಯ 14 ಸಭೆಗಳು ನಡೆದಿದ್ದರೂ, 2017 ರ ಏಳನೇ JCC ಸಭೆಯವರೆಗೆ ಮಾತ್ರ ಫಲಪ್ರದ ಕೆಲಸ ನಡೆದಿತ್ತು ಎಂದು ಅಧಿಕೃತ ಮೂಲಗಳು ಒಪ್ಪಿಕೊಂಡಿವೆ. CPECನ ಎರಡನೇ ಹಂತ, ಅಂದರೆ ಚೀನೀ ಕೈಗಾರಿಕೆಗಳನ್ನು ಪಾಕಿಸ್ತಾನಕ್ಕೆ ಸ್ಥಳಾಂತರಿಸಿ, ಕೈಗಾರಿಕೀಕರಣದ ಮೂಲಕ ದೇಶದ ರಫ್ತುಗಳನ್ನು ಹೆಚ್ಚಿಸುವ ಗುರಿ ಹೊಂದಿತ್ತು. ಆದರೆ, ಈ ಹಂತವು ಆರಂಭವಾಗಲೇ ಇಲ್ಲ. CPEC ಪ್ರಾರಂಭವಾಗಿ ಹತ್ತು ವರ್ಷಗಳಾದರೂ, ವಿಶೇಷ ಆರ್ಥಿಕ ವಲಯಗಳಲ್ಲಿ ಉದ್ಯಮಗಳನ್ನು ಆಕರ್ಷಿಸಲು ಬೆಂಬಲ ಕ್ರಮಗಳು, ಮೂಲಸೌಕರ್ಯಗಳನ್ನು ಸುಧಾರಿಸುವ ಅಗತ್ಯವಿದೆ ಎಂದು ಎರಡೂ ದೇಶಗಳು ಕೊನೆಯ JCC ಸಭೆಯಲ್ಲಿ ಅಭಿಪ್ರಾಯಪಟ್ಟಿದ್ದವು. ಆದರೆ, ಅರ್ಧಕ್ಕೆ ಮೊಟಕಾಗಿದ್ದ ಯೋಜನೆಗಳಿಂದಾಗಿ ಪಾಕಿಸ್ತಾನವು CPECನಿಂದ ಅಲ್ಪಾವಧಿಯ ಲಾಭಗಳನ್ನು ಪಡೆದಿದೆ, ಆದರೆ ದೀರ್ಘಕಾಲೀನ ಗುರಿಗಳು ಈಡೇರಿಲ್ಲ ಎಂದು ವರದಿಯಾಗಿದೆ.


**CPEC ಯೋಜನೆ ಪುನರಾಂಭಿಸಲು ಹಗಲು ಕನಸು ಕಾಣುತ್ತಿರುವ ಪಾಕ್**

**ಈಗಾಗಲೇ ಅರ್ಧಕ್ಕೆ ನಿಂತಿರುವ CPEC ಯೋಜನೆಯನ್ನು ಪುನರಾಂಭಿಸಲು ಪಾಕಿಸ್ತಾನ ತನ್ನ ದೇಶದಲ್ಲಿ ಅಗತ್ಯ ವ್ಯಾಪಾರ ವಾತಾವರಣವನ್ನು ಸುಧಾರಿಸುವುದಾಗಿ, ನಿರಂತರವಾಗಿ ಅನುಕೂಲಕರ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ, SEZ ಗಳಲ್ಲಿ ಹೂಡಿಕೆ ಮಾಡಲು ಹಾಗೂ ಕಾರ್ಯಾಚರಿಸಲು ವಿದೇಶಿ, ವಿಶೇಷವಾಗಿ ಚೀನೀ ಉದ್ಯಮಗಳಿಗೆ ಬೆಂಬಲ ನೀಡುವುದಾಗಿ ಭರವಸೆ ನೀಡಿದೆ ಎಂದು ತಿಳಿದು ಬಂದಿದೆ. ಆದರೆ, ಅಪರೂಪಕ್ಕೆ ಬಂದ ಅವಕಾಶವನ್ನು ಕೈಚೆಲ್ಲಿ ಕುಳಿತಿರು ಪಾಕಿಸ್ತಾನ ಈಗ ಮತ್ತೆ ಚೀನಾದ ಅತಿದೊಡ್ಡ ಶತ್ರು ದೊಡ್ಡಣ್ಣನೊಂದಿಗೆ ಅವಿನಾಭಾವ ಸಂಬಂಧ ಬೆಳೆಸುತ್ತಿದೆ. ಇಂತಹ ಸಮಯದಲ್ಲಿ ಪಾಕಿಸ್ತಾನ ಹೇಗೆ ಮತ್ತೆ ಚೀನಾದೊಂದಿಗೆ ಯೋಜನೆಯನ್ನು ಪುನಾರಾರಂಭಿಸಿ ತನ್ನ ಭರವಸೆಗಳನ್ನು ಈಡೇರಿಸುವಲ್ಲಿ ಸಫಲವಾಗುತ್ತದೆ ಎಂಬುದು ಯಕ್ಷಪ್ರಶ್ನೆಯಾಗಿದೆ.**

## 10ನೇ ಬಾರಿಗೆ ಸಿಎಂ ಪಟ್ಟದ ಮೇಲೆ ನಿತೀಶ್ ಕಣ್ಣು

**ಪಾಟ್ನಾ:** ಬಿಹಾರ ವಿಧಾನಸಭಾ ಚುನಾವಣೆ 2025ರ ಸ್ಪಷ್ಟ ಫಲಿತಾಂಶ ಪ್ರಕಟವಾಗುತ್ತಿದೆ. ಆದ್ರೆ ಫಲಿತಾಂಶ ಅಧಿಕೃತ ಘೋಷಣೆಗೂ ಮುನ್ನವೇ ಬಿಹಾರದ ಬಾಸ್ ಯಾರಾಗ್ತಾರೆ ಅನ್ನೋ ಕುತೂಹಲಕ್ಕೆ ತೆರೆ ಬಿದ್ದಿದೆ. ಅಮಿತ್ ಶಾ ಭವಿಷ್ಯದಂತೆ ಎನ್‌ಡಿಎ ಪ್ರಚಂಡ ಬಹುಮತದತ್ತ ದಾಪುಗಾಲಿಟ್ಟಿದೆ. ಎಕ್ಸಿಟ್ ಪೋಲ್ ಕೊಟ್ಟ ಫಲಿತಾಂಶದಂತೆ, ಬಿಜೆಪಿ ಜೆಡಿಯು ನೇತೃತ್ವದ ಎನ್‌ಡಿಎ ಮೈತ್ರಿಕೂಟ ನಿರಾಯಾಸವಾಗಿ ಅಧಿಕಾರ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, 10ನೇ ಬಾರಗೆ ಸಿಎಂ ಪಟ್ಟದ ಮೇಲೆ ನಿತೀಶ್ ಕುಮಾರ್ ಕಣ್ಣಿಟ್ಟಿದ್ದಾರೆ. ಆದ್ರೆ ಇದಕ್ಕೆ ಬಿಜೆಪಿ ಮೈತ್ರಿ ಕೂಟ ಇದನ್ನ ಒಪ್ಪಿಕೊಳ್ಳುತ್ತಾ ಅನ್ನೋದನ್ನ ಕಾದುನೋಡಬೇಕಿದೆ.

**ಗೇಮ್ ಚೇಂಜರ್ ಗ್ಯಾರಂಟಿ:** ಬಿಹಾರ ಚುನಾವಣಾ ಫಲಿತಾಂಶ ಸಂಪೂರ್ಣ ಎನ್‌ಡಿಎ ನತ್ತ ವಾಲುವುದಕ್ಕೆ ಮಹಿಳೆಯರಿಗೆ ಘೋಷಣೆ ಮಾಡಿದ್ದ 10,000 ರೂ. ಗ್ಯಾರಂಟಿ ಯೋಜನೆಯೇ ಪ್ರಮುಖ ಗೇಮ್ ಚೇಂಜರ್ ಅಂತ ರಾಜಕೀಯ ತಜ್ಞರು ವಿಶ್ಲೇಷಣೆ ಮಾಡಿದ್ದಾರೆ. ಕಳೆದ ಆಗಸ್ಟ್ 29ರಂದು ಮಹಿಳಾ ಗ್ಯಾರಂಟಿ ಯೋಜನೆ ಘೋಷಣೆ ಮಾಡಿ, 1.5 ಕೋಟಿ ಮಹಿಳಾ ಮತದಾರರ ಖಾತೆಗೆ ಚುನಾವಣೆಗೂ ಮೊದಲೇ 10,000 ರೂ. ವರ್ಗಾವಣೆ ಮಾಡಿದ್ದರು. ಅನೇಕ ಉದ್ಯೋಗಸ್ಥ ಮಹಿಳೆಯರು ಇದರ ಪ್ರಯೋಜನ ಪಡೆದರು. ಅಲ್ಲದೇ ಬಿಹಾರದಲ್ಲಿ ಒಟ್ಟು 7.43 ಕೋಟಿ ಮತದಾರರ ಪೈಕಿ 3.50 ಕೋಟಿ ಮಹಿಳಾ ಮತದಾರರು ಇದ್ದು, ಶೇ.71ಕ್ಕೂ ಹೆಚ್ಚು ಮಹಿಳೆಯರು ಮತ ಚಲಾಯಿಸಿದ್ದಾರೆ. ಇದು ಎನ್‌ಡಿಎ ಗೆಲುವಿಗೆ ಪ್ರಮುಖ ತಿರುವು ಅಂತ ವಿಶ್ಲೇಷಣೆ ಮಾಡಲಾಗಿದೆ.



**10,000 ಗ್ಯಾರಂಟಿ ಯೋಜನೆಯ ಪ್ರಯೋಜನಗಳೇನು?** ಚುನಾವಣೆಗೆ ಒಂದು ತಿಂಗಳು ಬಾಕಿಯಿರುವಾಗಲೇ ನಿತೀಶ್ ಕುಮಾರ್ ಸರ್ಕಾರ ಬಿಹಾರದ ಸಿಎಂ ಮಹಿಳಾ ರೋಜ್‌ಗಾರ್ ಯೋಜನೆಗೆ ಚಾಲನೆ ನೀಡಿತ್ತು. ಈ ಯೋಜನೆ ಅಡಿಯಲ್ಲಿ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ತಲಾ 10,000 ರೂ.ಗಳನ್ನ ವರ್ಗಾವಣೆ ಮಾಡಲಾಗಿತ್ತು. 4 ರಿಂದ 5 ಕೋಟಿ ಕುಟುಂಬಗಳಿಗೆ ಇದರಿಂದ ಸಹಕಾರವಾಯಿತು. ಅಲ್ಲದೇ ಉದ್ಯೋಗ ಸೃಷ್ಟಿಸಿಕೊಳ್ಳುವಲ್ಲಿ ಯಶಸ್ವಿಯಾದ ಮಹಿಳೆರಿಗೆ ಹೆಚ್ಚುವರಿಯಾಗಿ 2 ಲಕ್ಷ ರೂ.ವರೆಗೆ ಬಡ್ಡಿ ರಹಿತ ಸಾಲವನ್ನೂ ಘೋಷಿಸಿದ್ದರು. ಇದು ನಿತೀಶ್ ಸರ್ಕಾರದ ಮೇಲೆ ಬಹುದೊಡ್ಡ ಪರಿಣಾಮ ಬೀರಿತು.

**ಮೊದಲಿಂದಲೂ ಮಹಿಳೆಯರ ಕಡೆಗೆ ಹೆಚ್ಚಿನ ಒಲವು:** ನಿತೀಶ್ ಸರ್ಕಾರ ಮಹಿಳಾ ಪರ ಯೋಜನೆಗಳನ್ನ ಘೋಷಿಸಿದ್ದು ಇದೇ ಮೊದಲೇನಲ್ಲ. ಈ ಹಿಂದೆಯೂ ಮಹಿಳಾ ವಿದ್ಯಾರ್ಥಿನಿಯರಿಗೆ ಉಚಿತ ಸೈಕಲ್ ವಿತರಣೆ, ಮದ್ಯ ಮಾರಾಟ ನಿಷೇಧ, ವಿದ್ಯಾರ್ಥಿ ವೇತನ, ಪಂಚಾಯಿತಿ ಸ್ಥಾನಗಳಲ್ಲಿ ಶೇ.50 ಮೀಸಲಾತಿ, ಸರ್ಕಾರಿ ಉದ್ಯೋಗಗಳಲ್ಲಿ ಶೇ.50 ಮೀಸಲಾತಿ ಕೊಡುಗೆಗಳನ್ನ ಜಾರಿಗೊಳಿಸಿದ್ದಾರೆ. ಇದರಿಂದ ಸಹಜವಾಗಿಯೇ ಮಹಿಳಾ ಮತದಾರರು ಎನ್‌ಡಿಎ ಕಡೆಗೆ ವಾಲಿದ್ದಾರೆ ಎನ್ನುತ್ತಿದ್ದಾರೆ ತಜ್ಞರು.

## ಕಡು ಬಡತನ ಮುಕ್ತ ಮೊದಲ ರಾಜ್ಯ ಕೇರಳ

**ಕೇರಳ:** ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರಾಜ್ಯದ ಸಂಸ್ಥಾಪನಾ ದಿನದ ಅಂಗವಾಗಿ ನಡೆದ ವಿಶೇಷ ಅಧಿವೇಶನದಲ್ಲಿ ಕಡು ಬಡತನ ಮುಕ್ತ ರಾಜ್ಯ ಎಂದು ಘೋಷಿಸಿದ್ದಾರೆ. ಈ ಮೂಲಕ ಬಡತನ ಮುಕ್ತ ರಾಜ್ಯ ಎಂದು ಘೋಷಿಸಿಕೊಂಡ ಭಾರತದ ಮೊದಲ ರಾಜ್ಯ ಕೇರಳ ಎಂಬ ಹೆಮ್ಮೆಗೆ ಪಾತ್ರವಾಗಿದೆ. ಕೇರಳದ ಈ ಸಾಧನೆಗೆ ಸರ್ಕಾರ ಕೈಗೊಂಡ ಕ್ರಮವೇನು? ಇದು ಹೇಗೆ ಸಾಧ್ಯವಾಯಿತು. ಈ ಬಗ್ಗೆ ವಿಕ್ಷಗಳು ಹೇಳಿದ್ದೇನು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.



**ಬಡತನ ಮುಕ್ತಕ್ಕೆ 5 ವರ್ಷಗಳ ಪ್ರಯತ್ನ:** ಕಡು ಬಡತನ ಮುಕ್ತಗೊಳಿಸಲು 2021ರಲ್ಲಿ ಕೇರಳ ಸರ್ಕಾರ ಬಡತನ ನಿರ್ಮೂಲನೆ ಯೋಜನೆಯನ್ನು ಪ್ರಾರಂಭಿಸಿತ್ತು. ತಳಮಟ್ಟದ ಸಮೀಕ್ಷೆ ಮೂಲಕ



ಬಡತನ ನಿರ್ಮೂಲನೆಗೆ ಹಲವು ಕ್ರಮಗಳನ್ನು ಕೈಗೊಂಡಿರುವುದಾಗಿ ವಿಜಯನ್ ಅವರು ಹೇಳಿದ್ದಾರೆ.

**ವಿಶ್ವ ಬ್ಯಾಂಕ್ ಮಾನದಂಡವೇನು?:** ವಿಶ್ವ ಬ್ಯಾಂಕ್ ನಿಗದಿ ಪಡಿಸಿದ ಮಾನದಂಡದ ಪ್ರಕಾರ ದಿನಕ್ಕೆ ಒಬ್ಬ ವ್ಯಕ್ತಿಗೆ 180 ರೂ. ಕ್ಕಿಂತ ಕಡಿಮೆ ಆದಾಯದಲ್ಲಿ ಜೀವನ ನಡೆಸುವುದು ಕಡು ಬಡತನವಾಗಿದೆ. ಇದರ ಜೊತೆ ಭಾರತದ ಬಹು-ಆಯಾಮದ ಬಡತನ ಸೂಚ್ಯಂಕ, ಪೌಷ್ಟಿಕಾಂಶ, ವಸತಿ, ನೈರ್ಮಲ್ಯ, ಶಿಕ್ಷಣ ಮತ್ತು ಮೂಲ ಸೇವೆಗಳ ಲಭ್ಯತೆಯಂತಹ ಅಂಶಗಳನ್ನು ಪರಿಗಣಿಸಲಾಗುತ್ತದೆ. ನೀತಿ ಆಯೋಗದ 2023ರ ಬಡತನ ಸೂಚ್ಯಂಕ ವರದಿಯ ಪ್ರಕಾರ, ಕೇರಳದ ಜನಸಂಖ್ಯೆಯಲ್ಲಿ ಕೇವಲ 0.55% ಮಾತ್ರ ಬಡವರಿದ್ದರು. ಇದು ದೇಶದಲ್ಲೇ ಅತಿ ಕಡಿಮೆ ಪ್ರಮಾಣವಾಗಿತ್ತು. ಗ್ರಾಮೀಣ ಜನಸಂಖ್ಯೆಯ 1% ರಷ್ಟು ಮತ್ತು ನಗರ ಜನಸಂಖ್ಯೆಯ 2% ರಷ್ಟು ಬಡತನ ರೇಖೆಗಿಂತ ಕೆಳಗಿರುವ ರಾಜ್ಯದ ಜನರ ಪ್ರಗತಿಯಿಂದ ತೀವ್ರ ಬಡತನ ನಿರ್ಮೂಲನೆ ಮಾಡಿದ ಮೊದಲ ಭಾರತೀಯ ರಾಜ್ಯ ಎಂಬ ಹೆಗ್ಗಳಿಕೆಗೆ ಕೇರಳ ಪಾತ್ರವಾಗಿದೆ ಎಂದು ಸಿಎಂ ವಿಜಯನ್ ಹೇಳಿಕೊಂಡಿದ್ದಾರೆ.

**ಸರ್ಕಾರ ಕೈಗೊಂಡ ಕ್ರಮಗಳೇನು?:** ಕೇರಳ ಸರ್ಕಾರ 2021ರಲ್ಲಿ ಕಡು ಬಡತನ ನಿರ್ಮೂಲನೆಗಾಗಿ ಯೋಜನೆ ರೂಪಿಸಿತ್ತು. ಕುಟುಂಬಶ್ರೀ, ಮಹಿಳಾ ಸ್ವ-ಸಹಾಯ ನೆಟ್‌ವರ್ಕ್, ಆಶಾ-ಅಂಗನವಾಡಿ ಕಾರ್ಯಕರ್ತರು ಮತ್ತು ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ತಳಮಟ್ಟದ ಸಮೀಕ್ಷೆ ನಡೆಸಲಾಯಿತು.

## ತೇಜಸ್ವಿ ಯಾದವ್ ಅಪಕ್ವತೆ, ಹತಾಶೆ ಅಪಾಯಕಾರಿ

**ಪಾಟ್ನಾ:** ಬಿಹಾರದಲ್ಲಿ ರಾಜಕೀಯವೂ ಅಪಕ್ವತೆ ಮತ್ತು ಕಚ್ಚಾ ಹತಾಶೆಯ ಅಪಾಯಕಾರಿ ಸಂಯೋಜನೆಯಾಗುತ್ತಿದೆ. ಈ ಮಿಶ್ರಣವೂ ಈಗ ಮಾರಕವಾಗುತ್ತಿದೆ ಎಂದು ಆರ್‌ಜೆಡಿಯ ತೇಜಸ್ವಿ ಯಾದವ್ ವಿರುದ್ಧ ಜೆಡಿಯು ನಾಯಕ ಅಶೋಕ್ ಚೌಧರಿ ಟೀಕಾ ಪ್ರಹಾರ ನಡೆಸಿದ್ದಾರೆ. ಬಿಹಾರ ವಿಧಾನಸಭಾ ಚುನಾವಣೆಯ ಮತ ಎಣಿಕೆ ನಡೆಯುತ್ತಿರುವಾಗ ಚೌಧರಿಯವರ ಹೇಳಿಕೆಗಳು ಬಂದಿರುವುದು ವಿಶೇಷವಾಗಿದೆ.



ಪಾಟ್ನಾದಲ್ಲಿ ಪಿಟಿಐ ವಿಡಿಯೋ ಜೊತೆ ಮಾತನಾಡಿದ ಅವರು, ಕೆಲವು ರಾಜಕೀಯ ನಾಯಕರು ಮತ್ತೆ ಮತ್ತೆ ಮರುಹೊಂದಿಸುತ್ತಲೇ ಇರುತ್ತಾರೆ ಮತ್ತು ಸಾಕಷ್ಟು ದೂರದೃಷ್ಟಿ, ಸೈದ್ಧಾಂತಿಕ ನೆಲೆಗಟ್ಟು ಇಲ್ಲದೆ ನೀತಿಗಳನ್ನು ತರುತ್ತಾರೆ ಎಂದು ಅವರು ಇದೇ ಸಂದರ್ಭದಲ್ಲಿ ಕಳವಳ ವ್ಯಕ್ತಪಡಿಸಿದರು.

ಎನ್‌ಡಿಎ ಮೂರನೇ ಎರಡರಷ್ಟು ಬಹುಮತದೊಂದಿಗೆ ಗೆಲ್ಲುತ್ತಿದೆ. ಗೆಲುವಿನಲ್ಲೂ ನಾವು ವಿನಮ್ರರಾಗಿರುವುದರಲ್ಲಿ ನಂಬಿಕೆ ಇಡುತ್ತೇವೆ. ಆದರೆ ಕೆಲವು ನಾಯಕರು ಇದನ್ನು ಪ್ರಬುದ್ಧತೆ ಇಲ್ಲದೆ, ಸ್ಥಿರತೆ ಇಲ್ಲದೆ ಮಾತನಾಡುತ್ತಾರೆ. ಇದು ನಮಗೆ ಚಿಂತೆ ಮಾಡುತ್ತದೆ ಎಂದು ಚೌಧರಿ ಯಾದವ್ ಅವರನ್ನು ಉಲ್ಲೇಖಿಸುತ್ತಾ ಹೇಳಿದರು. ಜನಪ್ರಿಯತೆಯ ಆರಂಭಿಕ ಹಂತ ಅಥವಾ ಚುನಾವಣಾ ಮಾಧುರ್ಯ ಮಸುಕಾದ ನಂತರ, ಈ ಅಭ್ಯರ್ಥಿಗಳು ಏನು ಬೇಕಾದರೂ ಮಾಡುತ್ತಾರೆ. ಇದು ರಾಜಕೀಯ ಅಪ್ರಬುದ್ಧತೆಯನ್ನು ತೋರಿಸುತ್ತದೆ ಎಂದು ಎಚ್ಚರಿಸಿದರು.

ಯಾವುದೇ ಬೆಲೆ ತೆತ್ತಾದರೂ ಅಧಿಕಾರ ಹಿಡಿಯುವ ಹತಾಶೆಯು ಸಾಂಸ್ಥಿಕ ರೂಢಿಗಳು ಪ್ರಜಾಪ್ರಭುತ್ವದ ನಡವಳಿಕೆಯನ್ನು ಮರೆಮಾಡಲು ಪ್ರಾರಂಭಿಸಿದೆ ಎಂದು ಜೆಡಿ(ಯು) ನಾಯಕ ಹೇಳಿದ್ದಾರೆ. ಅಪಕ್ವತೆ ಮತ್ತು ಹತಾಶೆಯ ಈ ಸಂಯೋಜನೆಯು ಹೇಗೋ ಮಾರಕವಾಗುತ್ತದೆ; ಇದು ಪ್ರಜಾಪ್ರಭುತ್ವಕ್ಕೆ ಅನಾರೋಗ್ಯಕರ ಎಂದು ಅವರು ಹೇಳಿದರು.

## ಬಿಹಾರ ಚುನಾವಣಾ ಫಲಿತಾಂಶ; ಬಂಗಾಳದ 'ದೀದಿ'ಗೆ ಎಚ್ಚರಿಕೆಯ ಪಾಠ


### ಇನ್ನು ಎರಡು-ಮೂರು ತಿಂಗಳಲ್ಲಿ ನಡೆಯಲಿರುವ ಪಶ್ಚಿಮ ಬಂಗಾಳದ ಮೇಲೆ ಈ ಫಲಿತಾಂಶ ಎಫೆಕ್ಟ್ ಆಗುತ್ತಾ?

**ಪಶ್ಚಿಮ ಬಂಗಾಳ:** ಬಹುನಿರೀಕ್ಷಿತ ಬಿಹಾರ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ಬಿಜೆಪಿ- ಜೆಡಿಯು ಮೈತ್ರಿಯು ಮತ್ತೆ ಅಧಿಕಾರಕ್ಕೆ ಬಂದಿದೆ. ಬಿಹಾರದಲ್ಲಿ ಕಳೆದ 20 ವರ್ಷಗಳಿಂದ ಸಿಎಂ ಆಗಿರುವ ನಿತೀಶ್ ಕುಮಾರ್ ಅವರು ಮತ್ತೊಮ್ಮೆ ಸಿಎಂ ಆಗಲಿದ್ದಾರೆ.

ಎಕ್ಸಿಟ್ ಪೋಲ್ ನಲ್ಲೇ ಈ ಬಗ್ಗೆ ಒಂದು ಸುಳಿವು ಸಿಕ್ಕಿತ್ತಾದರೂ ಅಂತಿಮ ಫಲಿತಾಂಶವೇ ಅಧಿಕೃತವಲ್ಲವೇ ಫಲಿತಾಂಶವೂ ಎನ್‌ಡಿಎ ಮೈತ್ರಿಕೂಟಕ್ಕೇ ಅಧಿಕಾರ ಎಂದಿದೆ. ಮಾತ್ರವಲ್ಲ, ಕಾಂಗ್ರೆಸ್ ನೇತೃತ್ವದ ಯಾವುದೇ ವಿಪಕ್ಷಗಳ ಮೈತ್ರಿಕೂಟವು ಬಿಜೆಪಿ ಅಲೆಯ ಮುಂದೆ ನಿಲ್ಲದು ಎಂಬ ಸಂದೇಶವನ್ನು ರವಾನಿಸಿದೆ.

ಇದು ಅಲ್ಲೇ ಪಕ್ಕದಲ್ಲೇ ಇರುವ ಪಶ್ಚಿಮ ಬಂಗಾಳಕ್ಕೂ ಒಂದು ಪಾಠವಾಗುವ ಸಾಧ್ಯತೆಯಿದೆ. ಬಿಹಾರ, ಪಶ್ಚಿಮ ಬಂಗಾಳ ಪರಸ್ಪರ ಸಮೀಪವಿರುವ ರಾಜ್ಯಗಳು. ಬಿಹಾರದ ರಾಜಕಾರಣ ಬೇರೆ, ಪಶ್ಚಿಮ ಬಂಗಾಳದ ರಾಜಕಾರಣ ಬೇರೆ ನಿಜ, ಆದರೆ, ಈ ಎರಡೂ ರಾಜ್ಯಗಳ ಪರಿಸ್ಥಿತಿಗಳಲ್ಲಿ ಒಂದಿಷ್ಟು ಸಾಮ್ಯತೆಗಳಿವೆ. ಬಿಹಾರದಲ್ಲಿ ನಿತೀಶ್ ಕುಮಾರ್ ಅವರು ಕಳೆದ 20 ವರ್ಷಗಳಿಂದ ಅಧಿಕಾರದಲ್ಲಿದ್ದಾರೆ. ಅಲ್ಲಿ ಮಮತಾ ಬ್ಯಾನರ್ಜಿಯವರು ಸತತ 14 ವರ್ಷಗಳಿಂದ ಅಧಿಕಾರದಲ್ಲಿದ್ದಾರೆ.

ಬಿಹಾರದಲ್ಲಿಯೂ ಎಡಪಕ್ಷಗಳು ಅಸ್ತಿತ್ವದಲ್ಲಿವೆ, ಅತ್ತ, ಪಶ್ಚಿಮ ಬಂಗಾಳದಲ್ಲೂ ಎಡಪಕ್ಷಗಳು ಅಸ್ತಿತ್ವದಲ್ಲಿವೆ. ಈ ವರ್ಷ ಬಿಹಾರದಲ್ಲಿ ಚುನಾವಣೆ ನಡೆದಿದೆ, ಇನ್ನು ಕೆಲವೇ ತಿಂಗಳುಗಳಲ್ಲಿ ಪಶ್ಚಿಮ ಬಂಗಾಳದಲ್ಲಿಯೂ ಚುನಾವಣೆ ನಡೆಯಲಿದೆ.



ಇನ್ನು, ಮತದಾರರ ಬಗ್ಗೆ ಆಲೋಚಿಸಿದರೆ, ಬಿಹಾರದಲ್ಲಿಯೂ ವಲಸಿಗ ಮತದಾರರು ಅಧಿಕ ಸಂಖ್ಯೆಯಲ್ಲಿದ್ದು ಈ ಬಾರಿ ಮಹಿಳಾ ಮತದಾರರ ಜೊತೆಗೆ ಅವರೇ ಪ್ರಮುಖ ಪಾತ್ರ ವಹಿಸಿದ್ದಾರೆ. ಅತ್ತ, ಪಶ್ಚಿಮ ಬಂಗಾಳದಲ್ಲಿಯೂ ಮಹಿಳಾ ಮತದಾರರ ಸಂಖ್ಯೆ ಹೆಚ್ಚಿದೆ. ಕಳೆದ ಬಾರಿ ಚುನಾವಣೆಯಲ್ಲಿ ಅವರ ಮತದಾನದ ಪ್ರಮಾಣ ಶೇ. 81ರಷ್ಟಿತ್ತು. ಈ ವರ್ಷ ಹೇಗೆ ಮತದಾರರ ಗುರುತಿನ ಚೀಟಿಗಳ ವಿಶೇಷ ಪರಿಶೀಲನೆ ನಡೆಯಿತೋ ಹಾಗೆಯೇ ಮುಂದಿನ ವರ್ಷದಿಂದ ಪಶ್ಚಿಮ ಬಂಗಾಳದಲ್ಲೂ ಎಸ್‌ಐಆರ್ ನಡೆಯಲಿದೆ. ಹೀಗೆ? ಹಲವಾರು ಸಾಮ್ಯತೆಗಳು ಪಶ್ಚಿಮ ಬಂಗಾಳದಲ್ಲಿವೆ.

**ಈಗ ಹೊರಬಂದಿರುವ ಬಿಹಾರ ಚುನಾವಣಾ ಫಲಿತಾಂಶ ಕೇವಲ ಬಿಹಾರಕ್ಕಷ್ಟೇ ಸೀಮಿತ. ಬಿಹಾರ ರಾಜಕೀಯ ಬೇರೆ, ಪಶ್ಚಿಮ ಬಂಗಾಳದ ರಾಜಕೀಯ ಬೇರೆ. ಪಶ್ಚಿಮ ಬಂಗಾಳದಲ್ಲಿ ಆಗಿರುವ ಅಭಿವೃದ್ಧಿಗಳನ್ನು ಗಮನದಲ್ಲಿಟ್ಟುಕೊಂಡು ನಮಗೆ ಇಲ್ಲಿನ ಜನರು ಮತ ಹಾಕ್ತಾರೆ. ಈ ಬಾರಿಯ ಚುನಾವಣೆಯಲ್ಲಿ ಟಿಎಂಸಿ 250ಕ್ಕೂ ಹೆಚ್ಚು ಸೀಟು ಗಳಿಸುತ್ತೇವೆ.**

**ಕುನಾಲ್ ಘೋಷ್, ಟಿಎಂಸಿ ವಕ್ತಾರ**

ಸಾಮ್ಯತೆಗಳ ನಡುವೆ ಇರುವ ವ್ಯತ್ಯಾಸಗಳೆಂದರೆ, ಬಿಹಾರದಲ್ಲಿ ಬಿಜೆಪಿಯು ಜೆಡಿಯು ಜೊತೆಗೆ ಅಧಿಕಾರದಲ್ಲಿತ್ತು. ಈಗ ಮತ್ತೆ ಅಧಿಕಾರಕ್ಕೆ ಬಂದಿದೆ. ಅತ್ತ, ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ ಅಧಿಕಾರದಲ್ಲಿದೆ. ಯಾವುದೇ ಪಕ್ಷಕ್ಕೆ ಸತತ 10 - 15 ವರ್ಷ, ಅದಕ್ಕೂ ಮೇಲ್ಪಟ್ಟು ಅಧಿಕಾರವಿದೆಯೆಂದಾದರೆ ಅದು ಆ ಪಕ್ಷಕ್ಕೆ ವರವೂ ಆಗಬಹುದು ಅಥವಾ ಶಾಪವೂ ಆಗಬಹುದು. ಕೆಲವೊಮ್ಮೆ ಆಡಳಿತ ವಿರೋಧಿ ಅಲೆ ಸೃಷ್ಟಿಯಾಗಿ ಅಲ್ಲಿ ಪಕ್ಷಕ್ಕೆ ಚುನಾವಣೆಯಲ್ಲಿ ಜನರು ಪಾಠ ಕಲಿಸಬಹುದು ಅಥವಾ ಅಧಿಕಾರದಲ್ಲಿರುವ ಪಕ್ಷಗಳು ಚುನಾವಣೆ ಹೊಸ್ತಿಲಲ್ಲಿ ಜನರನ್ನು ಮರಳು ಮಾಡಲು ಅನೇಕ ತಂತ್ರಗಾರಿಕೆಗಳನ್ನು ರೂಪಿಸಿ, ಇಡೀ ಆಡಳಿತ ವ್ಯವಸ್ಥೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಆಟವಾಡಬಹುದು. ಇದು ಯಾರನ್ನೋ ದೂರುವ ಮಾತಲ್ಲ, ಸಹಜ ಅಭಿಪ್ರಾಯವಷ್ಟೇ. ಕಳೆದ ಬಾರಿಯೇ ಅಷ್ಟು ಪೈಪೋಟಿ ನೀಡಿರುವ ಬಿಜೆಪಿ, ಮುಂದಿನ ಚುನಾವಣೆಯಲ್ಲಿ ಅಲ್ಲಿ ಉತ್ತಮ ರೀತಿಯ ಪ್ರದರ್ಶನ ತೋರಬಹುದು ಎಂದು ಅಂದಾಜಿಸಲಾಗಿದೆ. ಅದಕ್ಕೆ ಪುಷ್ಟಿ ನೀಡುವಂತೆ ಈಗ ಬಿಹಾರದ ಚುನಾವಣಾ ಫಲಿತಾಂಶ ಬಂದಿದೆ. ಅದರ ಪರಿಣಾಮ, ಪಶ್ಚಿಮ ಬಂಗಾಳದ ಜನರ ಮೇಲೂ ಬೀಳುತ್ತದೆ. ಇನ್ನು ಎರಡು ಮೂರು ತಿಂಗಳಲ್ಲೇ ಅಲ್ಲಿ ಚುನಾವಣೆ ನಡೆಯುವುದರಿಂದ ಬಿಹಾರದ ಫಲಿತಾಂಶ ಅಲ್ಲಿ ಯಾವ ರೀತಿಯ ಮ್ಯಾಜಿಕ್ ಮಾಡಲಿದೆ ಎಂಬುದನ್ನು ಕಾದು ನೋಡಬೇಕಿದೆ.

**ಅಧಿಕಾರದಲ್ಲಿರುವವರಿಗೇ 'ಜೈ' ಎನ್ನುವ ಪೂರ್ವದ ಮತದಾರರು**

**ಭಾರತದ ಪೂರ್ವದಲ್ಲಿರುವ ರಾಜ್ಯಗಳಲ್ಲಿನ ಒಂದು ವಿಶೇಷತೆಯೇನೆಂದರೆ, ಅಲ್ಲಿ ಯಾರು ಪ್ರಬಲರಾಗಿ ಸತತವಾಗಿ ಹತ್ತಿಪ್ಪತ್ತು ವರ್ಷಗಳವರೆಗೆ ಆಡಳಿತ ನಡೆಸುತ್ತಾರೋ ಅವರನ್ನೇ ಅಲ್ಲಿನ ಜನರು ಮತ್ತೆ ಮತ್ತೆ ಚುನಾಯಿಸಿರುವುದು. ಸುಮ್ಮನೇ ಗೂಗಲ್ ನಲ್ಲಿ 20 ವರ್ಷಕ್ಕೂ ಹೆಚ್ಚಿನ ಕಾಲ ಅಧಿಕಾರದಲ್ಲಿದ್ದ ಮುಖ್ಯಮಂತ್ರಿಗಳು ಯಾರು ಎಂದು ಸರ್ಚ್ ಮಾಡಿ ನೋಡಿ ಟಾಪ್ 10ನಲ್ಲಿ ಬರುವ ಸಿಎಂಗಳಲ್ಲಿ 6 ಮುಖ್ಯಮಂತ್ರಿಗಳು ಪೂರ್ವದ ರಾಜ್ಯಗಳವರೇ ಆಗಿದ್ದಾರೆ. ಬೇಕಾದರೆ ಈ ಪಟ್ಟಿಯನ್ನೇ ನೋಡಿ. ಈಗ ಬಿಹಾರದಲ್ಲೂ ಅದೇ ರಿಪೀಟ್ ಆಗಿದೆ.**

## ಮಿನಿ ನ್ಯೂಸ್

### ದೇರಾ ಕಟ್ಟಡದಿಂದ ಬಿದ್ದು ಭಾರತೀಯ ಯುವಕ ಸಾವು

**ದುಬೈ:** ದುಬೈಗೆ ಭೇಟಿ ನೀಡಿದ್ದ ಕೇರಳದ ಹದಿಹರೆಯದ ಯುವಕನೊಬ್ಬ ದೇರಾದಲ್ಲಿ ಕಟ್ಟಡದ ಮೇಲಿನಿಂದ ಬಿದ್ದು ಸಾವನ್ನಪ್ಪಿದ್ದಾನೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಕೇರಳದ ಕೋಝಿಕ್ಕೋಡ್ ಜಿಲ್ಲೆಯ 19 ವರ್ಷದ ಮೊಹಮ್ಮದ್ ಮಿಶಾಲ್ ತನ್ನ ಸೋದರಸಂಬಂಧಿಗಳನ್ನು ಭೇಟಿ ಮಾಡುತ್ತಿದ್ದು, ಸುಮಾರು 15 ದಿನಗಳಿಂದ ದುಬೈನಲ್ಲಿದ್ದರು ಎಂದು ಗಲ್ಫ್ ನ್ಯೂಸ್ ವರದಿ ಮಾಡಿದೆ. ನ. 7 ರಂದು ಮಿಶಾಲ್ ವಿಮಾನಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲು ಬಹುಮಹಡಿ ಕಟ್ಟಡದ ಟೆರೇಸ್‌ಗೆ ಹೋದಾಗ ಈ ಘಟನೆ ಸಂಭವಿಸಿದೆ ಎಂದು ವರದಿಯಾಗಿದೆ. ಅವರ ಪೋಷಕರು ಕೋಝಿಕ್ಕೋಡ್‌ನಲ್ಲಿಯೇ ಇದ್ದಾಗ ಅವರು ಇಲ್ಲಿ ತಮ್ಮ ಸೋದರಸಂಬಂಧಿಗಳೊಂದಿಗೆ ವಾಸಿಸುತ್ತಿದ್ದರು. ಅವರು ಸುಮಾರು 15 ದಿನಗಳಿಂದ ದುಬೈನಲ್ಲಿದ್ದರು ಎಂದು ಕುಟುಂಬದ ಸ್ನೇಹಿತ ಹನೀಫಾ ಕೆ ಕೆ ಗಲ್ಫ್ ನ್ಯೂಸ್‌ಗೆ ತಿಳಿಸಿದ್ದಾರೆ.

ಅಪಘಾತದ ನಂತರ ಮಿಶಾಲ್ ಅವರನ್ನು ತಕ್ಷಣವೇ ರಶೀದ್ ಆಸ್ಪತ್ರೆಗೆ ಸಾಗಿಸಲಾಯಿತು, ಆದರೆ ಅವರನ್ನು ಉಳಿಸಲಾಗಲಿಲ್ಲ ಎಂದು ಖಲೀಜ್ ಟೈಮ್ಸ್ ಸಾಮಾಜಿಕ ಕಾರ್ಯಕರ್ತ ಎಂ ಕೆ ಹೇಳಿದ್ದಾರೆ. ಅವರಿಗೆ ಹಲವಾರು ಆಂತರಿಕ ಗಾಯಗಳಿದ್ದವು ಎಂದು ಎಂಕೆ ಹೇಳಿದರು.

ಮಿಶಾಲ್ ಆಸ್ಪತ್ರೆ ತಲುಪುವವರೆಗೂ ಜೀವಂತವಾಗಿದ್ದರು ಆದರೆ ಶೀಘ್ರದಲ್ಲೇ ನಿಧನರಾದರು ಮಿಶಾಲ್ ಅವರ ಪೋಷಕರ ಏಕೈಕ ಪುತ್ರ. ಅವರ ಪೋಷಕರು, ಇಬ್ಬರು ಸಹೋದರಿಯರು ಬದುಕುಳಿದಿದ್ದಾರೆ ಎಂದು ವರದಿ ಸೇರಿಸಲಾಗಿದೆ. ಛಾಯಾಗ್ರಹಣ ಉತ್ಸಾಹಿ ಮಿಶಾಲ್, ಕೋಝಿಕ್ಕೋಡ್‌ನ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದರು ಎಂದು ಗಲ್ಫ್ ನ್ಯೂಸ್ ವರದಿ ಮಾಡಿದೆ. ಇದು ಒಂದು ದುರಂತ ನಷ್ಟ. ನಾವು ಕಾನೂನು ವಿಧಿವಿಧಾನಗಳನ್ನು ಪೂರ್ಣಗೊಳಿಸುತ್ತಿದ್ದೇವೆ ಮತ್ತು ಅವರ ದೇಹವನ್ನು ಶೀಘ್ರದಲ್ಲೇ ಸ್ವದೇಶಕ್ಕೆ ತರುತ್ತೇವೆ ಎಂದು ಹನೀಫಾ ಹೇಳಿದರು.

### ಇಂಡೋನೇಷ್ಯಾದಲ್ಲಿ ಭೂ ಕುಸಿತ, ಇಬ್ಬರು ಸಾವು, 21 ಮಂದಿ ನಾಪತ್ತೆ

**ಜಕಾರ್ತ:** ಇಂಡೋನೇಷ್ಯಾದ ಜಾವಾ ದ್ವೀಪದಲ್ಲಿ ಧಾರಾಕಾರ ಮಳೆಯಿಂದ ಉಂಟಾದ ಭೂಕುಸಿತದಲ್ಲಿ ಇಬ್ಬರು ಸಾವನ್ನಪ್ಪಿದ್ದು, 21 ಜನರು ಕಾಣೆಯಾಗಿದ್ದಾರೆ. ಕಾಣೆಯಾದ 21 ಜನರಿಗಾಗಿ ರಕ್ಷಣಾ ಕಾರ್ಯಕರ್ತರು ಇನ್ನೂ ಹುಡುಕಾಟ ನಡೆಸುತ್ತಿದ್ದಾರೆ. ಈ ಪ್ರದೇಶದಲ್ಲಿ ಹಲವಾರು ದಿನಗಳ ಭಾರೀ ಮಳೆಯಿಂದಾಗಿ ಇಂಡೋನೇಷ್ಯಾ ಮಧ್ಯ ಜಾವಾ ಪ್ರಾಂತ್ಯದ ಮೂರು ಹಳ್ಳಿಗಳಲ್ಲಿ ಡಜನ್‌ಗಟ್ಟಲೆ ಮನೆಗಳಿಗೆ ಭೂಕುಸಿತ ಸಂಭವಿಸಿದೆ ಎಂದು ಅಧಿಕಾರಿಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇಂತಹ ಸಮಯದಲ್ಲಿ ಬಲಿಪಶುಗಳನ್ನು ಹುಡುಕುವಲ್ಲಿ ಅಸ್ಥಿರ ನೆಲದ ಪರಿಸ್ಥಿತಿಗಳು ಶೋಧ ಮತ್ತು ರಕ್ಷಣಾ ತಂಡಕ್ಕೆ ಸವಾಲನ್ನು ಒಡ್ಡಿದವು. ಆದಾಗ್ಯೂ, ಜಂಟಿ ತಂಡವು ಇಂದು ಬೆಳಿಗ್ಗೆ ತಮ್ಮ ಶೋಧ ಮತ್ತು ರಕ್ಷಣಾ ಪ್ರಯತ್ನಗಳನ್ನು ಮುಂದುವರೆಸಿತು ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ವಕ್ತಾರ ಅಬ್ದುಲ್ ಮುಹಾರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕಾರ್ಯಾಚರಣೆಯನ್ನು ವೇಗಗೊಳಿಸಲು ಭಾರೀ ಉಪಕರಣಗಳನ್ನು ನಿಯೋಜಿಸಲಾಗಿದೆ ಎಂದು ಅವರು ಹೇಳಿದರು. ರಾಷ್ಟ್ರೀಯ ಶೋಧ ಮತ್ತು ರಕ್ಷಣಾ ಸಂಸ್ಥೆ ಬಿಡುಗಡೆ ಮಾಡಿದ ದೃಶ್ಯಗಳಲ್ಲಿ ರಕ್ಷಣಾ ಕಾರ್ಯಕರ್ತರು ಮನೆಗಳ ಅವಶೇಷಗಳ ಅಡಿಯಲ್ಲಿ ಹೂತುಹೋಗಿರುವ ಬಲಿಪಶುಗಳನ್ನು ಹುಡುಕುತ್ತಿರುವುದನ್ನು ತೋರಿಸಲಾಗಿದೆ. ರಕ್ಷಕರು ಕಷ್ಟಕರ ಪ್ರದೇಶಗಳನ್ನು ತಲುಪಲು ಭಾರೀ ಉಪಕರಣಗಳು, ಹೊರತೆಗೆಯುವ ಉಪಕರಣಗಳು ಮತ್ತು ಕೈಯಿಂದ ಮಾಡಿದ ಉಪಕರಣಗಳನ್ನು ಬಳಸುತ್ತಿದ್ದಾರೆ.

ಅಕ್ಟೋಬರ್ ನಿಂದ ಮಾರ್ಚ್ ವರೆಗೆ ಸುರಿಯುವ ಭಾರೀ ಮಳೆಯಿಂದಾಗಿ ಇಂಡೋನೇಷ್ಯಾದಲ್ಲಿ ಆಗಾಗ್ಗೆ ಪ್ರವಾಹ ಮತ್ತು ಭೂಕುಸಿತ ಉಂಟಾಗುತ್ತದೆ. ಇದು 17,000 ದ್ವೀಪಗಳ ದ್ವೀಪಸಮೂಹವಾಗಿದ್ದು, ಲಕ್ಷಾಂತರ ಜನರು ಪರ್ವತ ಪ್ರದೇಶಗಳಲ್ಲಿ ಅಥವಾ ಫಲವತ್ತಾದ ಪ್ರವಾಹ ಪ್ರದೇಶಗಳ ಬಳಿ ವಾಸಿಸುತ್ತಿದ್ದಾರೆ. ಜನವರಿಯಲ್ಲಿ, ಮಧ್ಯ ಜಾವಾ ಪ್ರಾಂತ್ಯದಲ್ಲಿ ಧಾರಾಕಾರ ಮಳೆಯ ನಂತರ ಪ್ರವಾಹ ಮತ್ತು ಭೂಕುಸಿತಗಳಲ್ಲಿ ಕೊಚ್ಚಿಹೋಗಿ 20 ಕ್ಕೂ ಹೆಚ್ಚು ನಿವಾಸಿಗಳು ಸಾವನ್ನಪ್ಪಿದರು.

### ದೆಹಲಿ ಸ್ಫೋಟದ ಉಗ್ರ ಉಮರ್ ಮನೆ ನೆಲಸಮ

**ನವದೆಹಲಿ:** ಕಾರು ಸ್ಫೋಟ ಪ್ರಕರಣದಲ್ಲಿ 13 ಮಂದಿ ಅಮಾಯಕರನ್ನು ಬಲಿ ತೆಗೆದುಕೊಂಡ ಉಗ್ರ ಡಾ. ಉಮರ್ ನಬಿ ಅವರ ಮನೆಯನ್ನು ನೆಲಸಮಗೊಳಿಸಲಾಗಿದೆ. ದೆಹಲಿಯಲ್ಲಿ ನ. 10ರಂದು ಸಂಭವಿಸಿದ ಕಾರು ಸ್ಫೋಟದ ಘಟನೆಯಲ್ಲಿ 13 ಮಂದಿ ಪ್ರಾಣ ಕಳೆದುಕೊಂಡಿದ್ದರು. ಈ ದಾಳಿ ಹಿಂದಿದ್ದ ಡಾ. ಉಮರ್ ನಬಿ ಮನೆಯನ್ನು ರಾತ್ರೋರಾತ್ರಿ ನೆಲಸಮ ಮಾಡಲಾಗಿದೆ. ದಕ್ಷಿಣ ಕಾಶ್ಮೀರದ ಪುಲ್ವಾಮಾದಲ್ಲಿ ಆತನ ಮನೆ ಇತ್ತು. ಆತನ ಮನೆಯನ್ನು ರಾತ್ರೋರಾತ್ರಿ ನೆಲಸಮಗೊಳಿಸಲಾಗಿದೆ ಎಂದು ವರದಿಯಾಗಿದೆ. ಕಾರು ಸ್ಫೋಟದಲ್ಲಿ ಉಮರ್ ಕೂಡ ಸಾವನ್ನಪ್ಪಿರುವುದು ಡಿಎನ್‌ಎ ಪರಿಕ್ಷೇಯಿಂದ ದೃಢಪಟ್ಟಿದೆ. ಸ್ಫೋಟಕ್ಕೆ ಆತನೇ ಕಾರಣ ಎನ್ನುವುದು ತಿಳಿಯುತ್ತಿದ್ದಂತೆ ಆತನ ಮನೆಯನ್ನು ಧ್ವಂಸ ಮಾಡಲಾಗಿದೆ.




# ಮೋದಿ ತಾಯಿ ಪಾತ್ರಕ್ಕೆ ಆಯ್ಕೆ ಆದ ಕೆಜಿಎಫ್ 2 ನಟಿ ರವೀನಾ ಟಂಡನ್

ಪ್ರಧಾನಿ ಮೋದಿ ಅವರ ತಾಯಿ ಹೀರಾಬೆನ್ ಪಾತ್ರದಲ್ಲಿ ಬಾಲಿವುಡ್ ನಟಿ ರವೀನಾ ಟಂಡನ್ 'ಮಾ ವಂದೇ' ಬಯೋಪಿಕ್‌ನಲ್ಲಿ ನಟಿಸುತ್ತಿದ್ದಾರೆ. ಕೆಜಿಎಫ್ 2 ನಂತರ ರವೀನಾ ಅವರಿಗೆ ಈ ಪ್ರಮುಖ ಪಾತ್ರ ಸಿಕ್ಕಿದೆ. ಚಿತ್ರವು ತಾಯಿ-ಮಗನ ಬಾಂಧವ್ಯ, ಹೀರಾಬೆನ್ ಅವರ ತ್ಯಾಗಗಳನ್ನು ಎತ್ತಿ ತೋರಿಸುತ್ತದೆ. ಸೆ.17ರಂದು ಘೋಷಣೆಯಾದ ಈ ಚಿತ್ರದಲ್ಲಿ ಉನ್ನಿ ಮುಕುಂದನ್ ಮೋದಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಬಾಲಿವುಡ್ ನಟಿ ರವೀನಾ ಟಂಡನ್ ಅವರು ಮೋದಿ ಬಯೋಪಿಕ್ ಮಾ ವಂದೇ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಅದು ಕೂಡ ನರೇಂದ್ರ ಮೋದಿ ಅವರ ತಾಯಿ ಹೀರಾಬೆನ್ ಪಾತ್ರದಲ್ಲಿ ಅನ್ನೋದು ವಿಶೇಷ. ಪ್ರಧಾನಿ ಮೋದಿ ಅವರ ಜೀವನದ ಉದ್ದಕ್ಕೂ ಹೀರಾಬೆನ್ ಬೆಂಬಲವಾಗಿ ನಿಂತಿದ್ದರು. ಈ ದೃಷ್ಟಿಯಿಂದ ಈ ಪಾತ್ರ ಸಿನಿಮಾದಲ್ಲಿ ತುಂಬಾನೇ ಪ್ರಮುಖವಾಗಲಿದೆ. ರವೀನಾ ಈ ಪಾತ್ರಕ್ಕೆ ಸೂಕ್ತವಾದ ಆಯ್ಕೆ ಎಂದು ಅನೇಕರು ಹೇಳಿದ್ದಾರೆ.



ರವೀನಾ ಟಂಡನ್ ಅವರು ತಮ್ಮ ವೃತ್ತಿ ಜೀವನದಲ್ಲಿ ನಾಯಕಿ ಆಗಿ ಮಿಂಚಿದ್ದಾರೆ.

ಅವರು ಇತ್ತೀಚೆಗೆ ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕೆಜಿಫ್ 2 ಚಿತ್ರದಲ್ಲಿ ಪ್ರಧಾನಿ ಪಾತ್ರ ಮಾಡಿದ್ದರು. ಈಗ ರಿಯಲ್ ಪ್ರಧಾನಿಯ ತಾಯಿ ಪಾತ್ರದಲ್ಲಿ ಅವರು ಕಾಣಿಸಿಕೊಳ್ಳಲಿದ್ದಾರೆ. ಈ ಪಾತ್ರಕ್ಕೆ ಈಗಾಗಲೇ ಲುಕ್ ಟೆಸ್ಟ್ ನಡೆದಿದ್ದು, ರವೀನಾ ಹೊಂದಿಕೆ ಆಗುವಂತಿದ್ದಾರೆ ಎಂದು ವರದಿ ಆಗಿದೆ. ಸೆಪ್ಟೆಂಬರ್ 17ರಂದು ಮೋದಿ ಜನ್ಮದಿನ. ಈ ವಿಶೇಷ ದಿನಂದು 'ಮಾ ವಂದೆ' ಸಿನಿಮಾ ಘೋಷಣೆ ಆಗಿದೆ. ಕ್ರಾಂತಿ ಕುಮಾರ್ ಸಿಎಚ್ ಅವರು ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಸಿಲ್ವರ್ ಕಾಸ್ಟ್ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ವೀರ್ ರೆಡ್ಡಿ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಈ ಸಿನಿಮಾದಲ್ಲಿ ನರೇಂದ್ರ ಮೋದಿ ಪಾತ್ರದಲ್ಲಿ ಉನ್ನಿ ಮುಕುಂದನ್ ನಟಿಸುತ್ತಿದ್ದಾರೆ. ಅವರು ಈ ಸಿನಿಮಾದ ಭಾಗವಾಗಲು ಎಗ್ಸೈಟ್ ಆಗಿದ್ದಾರೆ.

ಚಿತ್ರತಂಡದ ಆಪ್ತರ ಪ್ರಕಾರ, ಹೀರಾಬೆನ್ ಪಾತ್ರದ ಬಗ್ಗೆ ಕೇಳುತ್ತಿದ್ದಂತೆ ರವೀನಾ ಅವರು ಭಾವುಕರಾದರಂತೆ. ಪಾತ್ರದ ಶಕ್ತಿ, ಆಳ ನೋಡಿ ಅವರಿಗೆ ಖುಷಿ ಆಗಿದೆ. ಹೀರಾಬೆನ್ ತಮ್ಮ ತಾಯಿಯನ್ನು ಬಾಲ್ಯದ ದಿನಗಳಲ್ಲೇ ಕಳೆದುಕೊಂಡರು. ಆದರೂ ಅವರು ಧೈರ್ಯದಿಂದ ಎಲ್ಲವನ್ನೂ ಮುನ್ನಡೆಸಿದರು.

ಈ ಕಥೆ ರವೀನಾ ಮನಸ್ಸಿನ ಮೇಲೆ ಸಾಕಷ್ಟು ಪ್ರಭಾವ ಬೀರಿತಂತೆ. ಮಾ ವಂದೆ ಸಿನಿಮಾದಲ್ಲಿ ರಾಜಕೀಯ ಯಶೋಗಾಥೆಗಳಿಗಿಂತ ತಾಯಿ ಮಗನ ಬಾಂಧವ್ಯವನ್ನು ಹೈಲೈಟ್ ಮಾಡುವುದು ನಿರ್ದೇಶಕನ ಉದ್ದೇಶ. ಮೋದಿ ಅವರ ಜೀವನವನ್ನು ಉತ್ತಮಗೊಳಿಸಲು ಹೀರಾಬೆನ್ ಮಾಡಿದ ತ್ಯಾಗದ ಬಗ್ಗೆ ಚಿತ್ರ ಪ್ರಮುಖವಾಗಿ ಗಮನ ಹರಿಸುತ್ತದೆ. ಈ ಸಿನಿಮಾ ಆರಂಭಕ್ಕೂ ಮೊದಲು ರವೀನಾ ಸಾಕಷ್ಟು ಸಿದ್ಧತೆ ಮಾಡಿಕೊಳ್ಳಬೇಕಿದೆ.



# ಮಾರ್ಕ್ ಸಿನಿಮಾದ ಶೂಟಿಂಗ್ ಮುಕ್ತಾಯ



ನಟ ಕಿಚ್ಚ ಸುದೀಪ್ ಅವರು ನಟಿಸಿರುವ ಮಾರ್ಕ್ ಸಿನಿಮಾದ ಟೀಸರ್ ಈಗಾಗಲೇ ದಾಖಲೆ ಬರೆದಿದೆ.

ಕಿಚ್ಚನ ಆಕ್ಷನ್ ಖದರ್ ನೋಡಿ ಥ್ರಿಲ್ಲರ್ ಆಗಿರುವ ಸುದೀಪಿಯನ್ಸ್‌ಗೆ ಚಿತ್ರತಂಡ ಈಗ ಮತ್ತೊಂದು ಕ್ರೇಜಿ ಅಪ್ ಡೇಟ್ ಕೊಟ್ಟಿದೆ. ಮಾರ್ಕ್ ಸಿನಿಮಾಗೆ ಕುಂಬಳಕಾಯಿ ಪ್ರಾಪ್ತಿಯಾಗಿದೆ. ಬೆಂಗಳೂರಿನ ಕನಕಪುರ ರಸ್ತೆಯಲ್ಲಿ ಕೊನೆ ಹಂತದ ಚಿತ್ರೀಕರಣ ಮುಗಿಸಿ ಚಿತ್ರತಂಡ ಕುಂಬಳಕಾಯಿ ಒಡೆದಿದೆ. ಶೂಟಿಂಗ್ ಮುಗಿಸಿರುವ ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ತೊಡಗಿಸಿಕೊಂಡಿದೆ. ಮ್ಯಾಕ್ಸ್ ಸಿನಿಮಾದಲ್ಲಿ ಸುದೀಪ್ ಮತ್ತು ವಿಜಯ್ ಕಾರ್ತಿಕೇಯ ಅವರ ಕಾಂಬಿನೇಷನ್ ಮೋಡಿ ಮಾಡಿತ್ತು. ಈಗ ಮತ್ತೆ ಅವರಿಬ್ಬರು ಮಾರ್ಕ್ ಸಿನಿಮಾದ ಮೂಲಕ ರಂಜಿಸಲು ಬರುತ್ತಿದ್ದಾರೆ. ಮ್ಯಾಕ್ಸ್ ರೀತಿಯೇ ಈ ಬಾರಿ ಕೂಡ ಪೊಲೀಸ್ ಆಫೀಸರ್ ಪಾತ್ರದಲ್ಲಿ ಸುದೀಪ್ ಅವರು ಕಾಣಿಸಿಕೊಳ್ಳುತ್ತಿದ್ದಾರೆ. ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಡಿಸೆಂಬರ್ 25ರಂದು 'ಮಾರ್ಕ್' ಸಿನಿಮಾ ಅದ್ದೂರಿಯಾಗಿ ರಿಲೀಸ್ ಆಗಲಿದೆ. ಮಾರ್ಕ್' ಸಿನಿಮಾಗೆ ಶೇಖರ್ ಚಂದ್ರ ಅವರು ಛಾಯಾಗ್ರಹಣ ಮಾಡಿದ್ದಾರೆ. ಅಜನೀಶ್ ಬಿ. ಲೋಕನಾಥ್ ಅವರು ಸಂಗೀತ ನೀಡಿದ್ದಾರೆ. ಈ ಸಿನಿಮಾದಲ್ಲಿ ಅಜಯ್ ಮಾರ್ಕಂಡೆ ಎಂಬ ಪಾತ್ರವನ್ನು ಸುದೀಪ್ ಮಾಡಿದ್ದಾರೆ. ಸತ್ಯಜ್ಯೋತಿ ಫಿಲ್ಮ್ಸ್ ಹಾಗೂ ಕಿಚ್ಚ ಕ್ರಿಯೇಷನ್ಸ್ ಬ್ಯಾನರ್‌ಗಳು ಜತೆಯಾಗಿ ಈ ಮಾರ್ಕ್ ಚಿತ್ರವನ್ನು ನಿರ್ಮಿಸಿವೆ.

# ಟಾಕ್ಸಿಕ್ ಸಂಬಂಧದಲ್ಲಿ ಇದ್ದೆ ಎಂದ ರಶ್ಮಿಕಾ

**ಸುಳ್ಳು ಎನ್ನಲು ಸಾಕ್ಷಿ ಸಮೇತ ಬಂದ ರಕ್ಷಿತ್ ಫ್ಯಾನ್ಸ್**

ರಶ್ಮಿಕಾ ಮಂದಣ್ಣ ಹಾಗೂ ರಕ್ಷಿತ್ ಶೆಟ್ಟಿ ಲವ್ ಮಾಡಿದ್ದರು ಎಂಬುದು ಹಳೆಯ ಕಥೆ. ಅದು ಮುಗಿದು ಹೋಗಿ ಹಲವು ವರ್ಷಗಳು ಕಳೆದಿವೆ. ಈ ಘಟನೆಯನ್ನು ಮರೆತು ರಕ್ಷಿತ್ ಮುಂದಕ್ಕೆ ಸಾಗಿದ್ದಾರೆ. ಆದರೆ, ರಶ್ಮಿಕಾ ಮಾತ್ರ ಇನ್ನೂ ಅಲ್ಲಿಯೇ ಸಿಕ್ಕಿ ಬಿದ್ದಂತೆ ಇದೆ. ಗರ್ಲ್‌ಫ್ರೆಂಡ್ ಸಿನಿಮಾದ ಈವೆಂಟ್ ಒಂದರಲ್ಲಿ ಅವರು ಈ ಬಗ್ಗೆ ಮಾತನಾಡಿದ್ದಾರೆ. 'ನಾನು ಟಾಕ್ಸಿಕ್ ರಿಲೇಶನ್‌ಶಿಪ್‌ನಲ್ಲಿ ಇದ್ದೆ' ಎಂಬ ಪರೋಕ್ಷ ಸ್ಟೇಟ್‌ಮೆಂಟ್ ಅವರ ಕಡೆಯಿಂದ ಬಂದಿದೆ. ಇದನ್ನು ಸುಳ್ಳು ಎಂದು ಸಾಬೀತು ಮಾಡಲು ರಕ್ಷಿತ್ ಫ್ಯಾನ್ಸ್ ಸಾಕ್ಷಿ ಸಮೇತ ಬಂದಿದ್ದಾರೆ.


'ಗರ್ಲ್‌ಫ್ರೆಂಡ್' ಸಿನಿಮಾದಲ್ಲಿ ಟಾಕ್ಸಿಕ್ ಸಂಬಂಧದ ಬಗ್ಗೆ ಇದೆ. ಕಥಾ ನಾಯಕಿಯು ಹುಡಗನೊಬ್ಬನ ಪ್ರೀತಿಸುತ್ತಾಳೆ. ಆತನಿಗೆ ಪುರಷ ಅಹಂ ಹೆಚ್ಚಿರುತ್ತದೆ. ನಂತರ ಈ ಸಂಬಂಧ ವಿಷಕಾರಿಯಾಗಿ ಬದಲಾಗುತ್ತದೆ. ಆಗ ಪ್ರೊಫೆಸರ್ ಒಬ್ಬರು ಸಹಾಯಕ್ಕೆ ಬರುತ್ತಾರೆ. ಈ ಸಿನಿಮಾ ಬಗ್ಗೆ ಮಾತನಾಡುವಾಗ ರಶ್ಮಿಕಾ ಹಳೆಯ ಸಂಬಂಧದ ಬಗ್ಗೆ ಹೇಳಿಕೊಂಡಿದ್ದಾರೆ. 'ಈ ಸಿನಿಮಾದ ಕಥೆ ಕೇಳಿದಾಗ ಮೊದಲು ಈ ಚಿತ್ರವನ್ನು ಮಾಡಬೇಕು ಎಂದು ಎನಿಸಿತು. ಕಥಾ ನಾಯಕಿಯ ಜೀವನದಲ್ಲಿ ಏನೆಲ್ಲ ಜರುಗಿದೆಯೋ ಅದರಲ್ಲಿ ಕೆಲವು ಪರಿಸ್ಥಿತಿಗಳು ನನ್ನ ಜೀವನದಲ್ಲೂ ಸಂಭವಿಸಿದೆ. ಆಗ ನನ್ನ ಜೀವನದಲ್ಲಿ ಯಾರೂ ಇರಲಿಲ್ಲ. ಇದೆಲ್ಲ ನನ್ನದೇ ಮಿಸ್ಟೇಕ್ ಎಂದು ಎನಿಸಿತು ಎಂದು ರಶ್ಮಿಕಾ ಹೇಳಿದ್ದಾರೆ

# ರಜನಿಕಾಂತ್ ಚಿತ್ರದಲ್ಲಿ ಮೇಘನಾ ರಾಜ್?



ಬಹುಭಾಷಾ ನಟಿ ಮೇಘನಾ ರಾಜ್ ಸರ್ಜಾ ಇದೀಗ ದೊಡ್ಡ ಪ್ರಾಜೆಕ್ಟ್ ಮೂಲಕ ಸುದ್ದಿಯಾಗಿದ್ದಾರೆ. ಪುತ್ರ ರಾಯನ್ ರಾಜ್ ಸರ್ಜಾಗೆ ಜನ್ಮಕೊಟ್ಟ ಬಳಿಕ ಕೆಲವು ವರ್ಷಗಳ ಕಾಲ ಅಭಿನಯಕ್ಕೆ ಬ್ರೇಕ್ ಹಾಕಿದ್ದ ಮೇಘನಾ ರಾಜ್ ಇದೀಗ ಮತ್ತೆ ನಟನೆಗೆ ಮರಳಿದ್ದಾರೆ. ಮೂಲಗಳ ಪ್ರಕಾರ, ಮೇಘನಾ ರಾಜ್ ಇದೀಗ ರಜನಿಕಾಂತ್ ನಟನೆಯ 'ಜೈಲರ್ 2 ಚಿತ್ರದಲ್ಲಿ ಅಭಿನಯಿಸುತ್ತಿದ್ದು, ಅವರ ಪಾತ್ರದ ವಿಚಾರವನ್ನು ಗುಟ್ಟಾಗಿ ಇಡಲಾಗಿದೆ. ಈಗಾಗಲೇ ಮೇಘನಾ ಅವರು ಚಿತ್ರೀಕರಣದಲ್ಲಿ ಭಾಗಿಯಾಗಿದ್ದು, ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗಿದೆ. ತಮಿಳು ಇಂಡಸ್ಟ್ರಿ ಮೇಘನಾಗೆ ಹೊಸದೇನಲ್ಲ. 2012ರಲ್ಲಿ ಮೇಘನಾ 'ನಂದ ನಂದಿತ' ಚಿತ್ರದಲ್ಲಿ ಅಭಿನಯಿಸಿದ್ದರು. ಅತಿಹೆಚ್ಚು ಮಲಯಾಳಂ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಹೀಗೆ ಕನ್ನಡದ ಜೊತೆ ಜೊತೆಗೆ ದಕ್ಷಿಣ ಭಾರತದಲ್ಲಿ ಮೇಘನಾ ಈಗಾಗ್ಲೇ ಹೆಸರು ಮಾಡಿರುವ ನಟಿ. ಇದೀಗ ನೆಲ್ಸನ್ ನಿರ್ದೇಶನದ ಬಹುನಿರೀಕ್ಷಿತ 'ಜೈಲರ್ 2 ಚಿತ್ರದ ಮೂಲಕ ಮತ್ತೆ ಕಾಲಿವುಡ್‌ಗೆ ಕಮ್‌ಬ್ಯಾಕ್ ಮಾಡಲಿದ್ದಾರಂತೆ ಮೇಘನಾ. ಅಂದಹಾಗೆ 'ಜೈಲರ್ 2 ಚಿತ್ರ ಕೊನೆಯ ಶೆಡ್ಯೂಲ್ ಚಿತ್ರೀಕರಣ ಬಾಕಿ ಉಳಿಸಿಕೊಂಡಿದ್ದು, ಮೈಸೂರಿನಲ್ಲೇ ಜೈಲರ್ 2 ಚಿತ್ರದ ಬಹುಭಾಗದ ಚಿತ್ರೀಕರಣ ನಡೆದಿದೆ. ಒಟ್ಟಿನಲ್ಲಿ ಜೈಲರ್ 2 ಚಿತ್ರದ ಬಳಿಕ ಮೇಘನಾ ಸಿನಿಮಾ ಜರ್ನಿ ಉನ್ನತ ಮಟ್ಟಕ್ಕೆ ಏರುವ ನಿರೀಕ್ಷೆಯಿದೆ.

# ಮೊಹಮ್ಮದ್ ಶಮಿಗಾಗಿ ಕಾವ್ಯಾ ಮಾರನ್ ಹಿಂದೆ ಬಿದ್ದ 2 ತಂಡಗಳು



ಐಪಿಎಲ್ 2026ರ ಹರಾಜಿಗೂ ಮೊದಲು ಎಲ್ಲಾ ತಂಡಗಳು ತಾವು ಉಳಿಸಿಕೊಂಡ ಹಾಗೂ ಬಿಡುಗಡೆ ಮಾಡಿದ ಆಟಗಾರರ ಪಟ್ಟಿಯನ್ನು ಪ್ರಕಟಿಸಬೇಕಾಗುತ್ತದೆ. ಇದಕ್ಕೆ ಕೊನೆಯ ದಿನಾಂಕ ನವೆಂಬರ್ 15 ಆಗಿದೆ. ಇದಕ್ಕೂ ಮೊದಲು, ಕೆಲವು ಫ್ರಾಂಚೈಸಿಗಳು ಟ್ರೇಡಿಂಗ್ ವಿಂಡೋದಡಿಯಲ್ಲಿ ಇತರ ತಂಡಗಳಲ್ಲಿರುವ ಕೆಲವು ಆಟಗಾರರನ್ನು ತಮ್ಮ ತಂಡಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಅದರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ನಡುವಿನ ಟ್ರೇಡಿಂಗ್ ಒಪ್ಪಂದದ ಬಗ್ಗೆ ಬಹಳ ಹಿಂದಿನಿಂದಲೂ ಸುದ್ದಿ ಹರಿದಾಡುತ್ತಿದೆ. ಹಾಗೆಯೇ ಲಕ್ನೋ ಸೂಪರ್ ಜೈಂಟ್ಸ್ ಮತ್ತು ಮುಂಬೈ ಇಂಡಿಯನ್ಸ್ ನಡುವೆಯೂ ಮಾತುಕತೆ ನಡೆಯುತ್ತಿದೆ. ಇದೆಲ್ಲದರ ನಡುವೆ, ಐಪಿಎಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದಲಿರುವ ವೇಗಿ ಮೊಹಮ್ಮದ್ ಶಮಿ ಹಿಂದೆ ಎರಡೆರಡು ಫ್ರಾಂಚೈಸಿಗಳು ಬಿದ್ದಿವೆ ಎನ್ನಲಾಗುತ್ತಿದೆ. ಐಪಿಎಲ್ 2026ರ ಹರಾಜಿಗೆ ಮುನ್ನ ಸನ್‌ರೈಸರ್ಸ್ ಹೈದರಾಬಾದ್‌ನ ಸ್ಟಾರ್ ಬೌಲರ್ ಮೊಹಮ್ಮದ್ ಶಮಿ ಮೇಲೆ ಎರಡು ತಂಡಗಳು ಕಣ್ಣಿಟ್ಟಿವೆ.

ಕ್ರಿಕ್‌ಬಜ್ ವರದಿಯ ಪ್ರಕಾರ, ಲಕ್ನೋ ಸೂಪರ್ ಜೈಂಟ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಶಮಿ ಅವರನ್ನು ತಂಡಕ್ಕೆ ಖರೀದಿ ಮಾಡಲು ಆಸಕ್ತಿ ಹೊಂದಿವೆ ಎಂದು ವರದಿಯಾಗಿದೆ.

ಕಳೆದ ಮೆಗಾ ಹರಾಜಿನಲ್ಲಿ ಮೊಹಮ್ಮದ್ ಶಮಿ ಅವರನ್ನು ಸನ್ ರೈಸರ್ಸ್ ಹೈದರಾಬಾದ್ ಫ್ರಾಂಚೈಸಿ 10 ಕೋಟಿಗೆ ಖರೀದಿಸಿತ್ತು ಎಂಬುದು ಗಮನಿಸಬೇಕಾದ ಸಂಗತಿ. ಆದಾಗ್ಯೂ, ಶಮಿ ಅವರ ಪ್ರದರ್ಶನವು ಕಳಪೆಯಾಗಿದ್ದು, ಕೇವಲ 6 ವಿಕೆಟ್‌ಗಳನ್ನು ಮಾತ್ರ ಪಡೆದುಕೊಂಡಿದ್ದರು.

ಹೀಗಾಗಿ ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿ ಶಮಿ ಅವರನ್ನು ಬಿಟ್ಟುಕೊಡುವ ಸಾಧ್ಯತೆಗಳಿವೆ. ವರದಿಗಳ ಪ್ರಕಾರ, ಶಮಿ ಅವರನ್ನು ನಗದು ಒಪ್ಪಂದದ ಮೂಲಕ ಇತರ ತಂಡಕ್ಕೆ ಕಳುಹಿಸುವ ನಿರ್ಧಾರಕ್ಕೆ ಹೈದರಾಬಾದ್ ಫ್ರಾಂಚೈಸಿ ಬರಬಹುದು.



# ಈಡನ್ ಗಾರ್ಡನ್ಸ್‌ನಲ್ಲಿ ಐತಿಹಾಸಿಕ ಸಾಧನೆ ಮಾಡಿದ ಬುಮ್ರಾ

ಭಾರತದ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಮೊದಲ ಇನ್ನಿಂಗ್ಸ್ ಕೇವಲ 159 ರನ್‌ಗಳಿಗೆ ಕೊನೆಗೊಂಡಿದೆ. ಭಾರತದ ಸ್ಟಾರ್ ಬೌಲರ್ ಜಸ್ಪ್ರೀತ್ ಬುಮ್ರಾ ದಾಳಿಗೆ ನಲುಗಿದ ದಕ್ಷಿಣ ಆಫ್ರಿಕಾ 200 ರನ್ ಕೂಡ ದಾಖಲಿಸಲಿಲ್ಲ. ಮೊದಲ ಇನ್ನಿಂಗ್ಸ್‌ನಲ್ಲಿ ಬುಮ್ರಾ ಐದು ವಿಕೆಟ್‌ಗಳನ್ನು ಕಬಳಿಸಿದರು. ಈ ಮೂಲಕ ಕೆಲವು ವಿಶಿಷ್ಟ ದಾಖಲೆಗಳನ್ನು ನಿರ್ಮಿಸಿದರು.

ಬುಮ್ರಾ ತಮ್ಮ ಟೆಸ್ಟ್ ವೃತ್ತಿಜೀವನದಲ್ಲಿ 16ನೇ ಬಾರಿಗೆ ಇನ್ನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳನ್ನು ಪಡೆದ ಸಾಧನೆ ಮಾಡಿದ್ದಾರೆ. ಆದಾಗ್ಯೂ, ಈ ಬಾರಿ ಅವರ ಸಾಧನೆ ಸ್ವಲ್ಪ ವಿಶೇಷವಾಗಿದೆ. ಇದಕ್ಕೆ ಪ್ರಮುಖ ಕಾರಣ ಈಡನ್ ಗಾರ್ಡನ್ಸ್, ಅಲ್ಲಿ ಅವರು ತಮ್ಮ ಮೊದಲ ಟೆಸ್ಟ್ ಪಂದ್ಯದಲ್ಲಿ ಈ ಸಾಧನೆ ಮಾಡಿದ್ದಾರೆ. ಈಡನ್ ಗಾರ್ಡನ್ಸ್‌ನಲ್ಲಿ ಬುಮ್ರಾ ಐದು ಅಥವಾ ಅದಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದಿರುವುದು ಇದೇ ಮೊದಲು ಎಂದು ಹೇಳಿದರೆ ತಪ್ಪಾಗಲಾರದು.

**13 ಬಾರಿ ದೇಶಗಳ ವಿರುದ್ಧವೇ ಈ ಸಾಧನೆ**

ಬುಮ್ರಾ ತಮ್ಮ ವೃತ್ತಿಜೀವನದಲ್ಲಿ 16 ನೇ ಬಾರಿಗೆ ಒಂದು ಇನ್ನಿಂಗ್ಸ್‌ನಲ್ಲಿ ಐದಗಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ ಇದರಲ್ಲಿ 13 ಬಾರಿ ದೇಶಗಳ ವಿರುದ್ಧವೇ ಈ ಸಾಧನೆ ಮಾಡಿದ್ದಾರೆ. ಈ ವಿಷಯದಲ್ಲಿ ಬುಮ್ರಾ, ವಾಸಿಮ್ ಅಕ್ರಮ್ (12 ಬಾರಿ) ಅವರ ದಾಖಲೆಯನ್ನು ಮುರಿದಿದ್ದಾರೆ. ಇದು ಮಾತ್ರವಲ್ಲದೆ ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಇನ್ನಿಂಗ್ಸ್‌ನಲ್ಲಿ ಜಸ್ಪ್ರೀತ್ ಬುಮ್ರಾ ನಾಲ್ಕನೇ ಬಾರಿಗೆ ಐದು ವಿಕೆಟ್‌ಗಳನ್ನು ಪಡೆದಿದ್ದಾರೆ. ಈ ಮೂಲಕ ಜಾವಗಲ್ ಶ್ರೀನಾಥ್ ಮತ್ತು ಹರ್ಭಜನ್ ಸಿಂಗ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ.

# ಟಾಸ್ ಗೆದ್ದ ದಕ್ಷಿಣ ಆಫ್ರಿಕಾ

**ಭಾರತ ತಂಡಕ್ಕೆ ರಿಷಭ್ ಪಂತ್ ರಿಟರ್ನ್**

ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು 15 ವರ್ಷಗಳ ನಂತರ ಈಡನ್ ಗಾರ್ಡನ್ಸ್‌ನಲ್ಲಿ ಟೆಸ್ಟ್ ಪಂದ್ಯವನ್ನು ಆಡುತ್ತಿವೆ. ಉಭಯ ತಂಡಗಳ ನಡುವಿನ 1 ಟೆಸ್ಟ್ ಪಂದ್ಯವು 1996 ರಲ್ಲಿ ಈ ಮೈದಾನದಲ್ಲಿ ನಡೆದಿತ್ತು. ಅಂದಿನಿಂದ, 2010 ರವರೆಗೆ, ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಮೂರು ಟೆಸ್ಟ್ ಪಂದ್ಯಗಳು ಈಡನ್ ಗಾರ್ಡನ್ಸ್‌ನಲ್ಲಿ ನಡೆದಿದ್ದು, ಇದರಲ್ಲಿ ಭಾರತ 2-1 ಮುನ್ನಡೆ ಸಾಧಿಸಿದೆ. 2000 ಇಸವಿಯಿಂದ ದಕ್ಷಿಣ ಆಫ್ರಿಕಾ ಭಾರತದಲ್ಲಿ ಟೆಸ್ಟ್ ಸರಣಿಯನ್ನು ಗೆದ್ದಿಲ್ಲ. ಇದರರ್ಥ ಸರಣಿ ಗೆಲುವಿಗಾಗಿ ಹರಿಣಗಳ ಕಾಯುವಿಕೆ 25 ವರ್ಷಗಳಿಂದ ಮುಂದುವರೆದಿದೆ. ಈ ಅಂಕಿಅಂಶಗಳನ್ನು ಗಮನಿಸಿದರೆ, ಪ್ರಸ್ತುತ ಸರಣಿಯಲ್ಲಿ ಭಾರತಕ್ಕೆ ಸ್ವಲ್ಪ ಮುನ್ನಡೆ ಇದೆ.



**ಟಾಸ್ ಗೆದ್ದ ದಕ್ಷಿಣ ಆಫ್ರಿಕಾ:** ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆಯುತ್ತಿರುವ ಈ ಪಂದ್ಯದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬ ಬವುಮಾ ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿದ್ದಾರೆ. ಹೀಗಾಗಿ ಟೀಂ ಇಂಡಿಯಾ ಮೊದಲು ಬೌಲಿಂಗ್ ಮಾಡಲಿದೆ. ಆಫ್ರಿಕಾ ತಂಡದ ಸ್ಟಾರ್ ವೇಗದ ಕಗಿಸೊ ರಬಾಡ ಈ ಪಂದ್ಯದಲ್ಲಿ ಆಡುತ್ತಿಲ್ಲ. ಹೀಗಾಗಿ ಕಾರ್ಬಿನ್ ಬಾಷ್ ಪ್ಲೇಯಿಂಗ್-11 ರಲ್ಲಿ ಸ್ಥಾನ ಪಡೆದಿದ್ದಾರೆ. ಏತನ್ಮಧ್ಯೆ, ಭಾರತದ ಪ್ಲೇಯಿಂಗ್-11 ರಲ್ಲಿ ಎರಡು ಬದಲಾವಣೆಗಳಿವೆ. ರಿಷಭ್ ಪಂತ್ ತಂಡಕ್ಕೆ ಮರಳಿದ್ದು, ನಿತೀಶ್ ರೆಡ್ಡಿ ಬದಲಿಗೆ ಆಡಲಿದ್ದಾರೆ. ಪಂತ್ ಜೊತೆಗೆ ಅಕ್ಷರ್ ಪಟೇಲ್ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇದರರ್ಥ ಟೀಂ ಇಂಡಿಯಾ ನಾಲ್ಕು ಸ್ಪಿನ್ನರ್‌ಗಳೊಂದಿಗೆ ಆಡುತ್ತಿದೆ, ಅವರಲ್ಲಿ ಮೂವರು ಆಲ್‌ರೌಂಡರ್‌ಗಳಿದ್ದಾರೆ. ಸಾಯಿ ಸುದರ್ಶನ್ ಈ ಪಂದ್ಯವನ್ನು ಆಡುತ್ತಿಲ್ಲವಾದುದ್ದರಿಂದ ಸುಂದರ್ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಬಹುದು.

**ಉಭಯ ತಂಡಗಳ ಟೆಸ್ಟ್ ದಾಖಲೆ:** ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ 45 ನೇ ಟೆಸ್ಟ್ ಪಂದ್ಯ ಇದಾಗಿದೆ . ಈ ಮೊದಲು ಆಡಿರುವ 44 ಟೆಸ್ಟ್‌ಗಳಲ್ಲಿ ಭಾರತ 16 ರಲ್ಲಿ ಗೆದ್ದಿದ್ದರೆ, ದಕ್ಷಿಣ ಆಫ್ರಿಕಾ 18ರಲ್ಲಿ ಗೆದ್ದಿದೆ. ಹತ್ತು ಟೆಸ್ಟ್‌ಗಳು ಡ್ರಾದಲ್ಲಿ ಕೊನೆಗೊಂಡಿವೆ. ಹಾಗೆಯೇ ಇದು ಭಾರತದ ನೆಲದಲ್ಲಿ ಈ ಎರಡೂ ತಂಡಗಳ ನಡುವಿನ 20ನೇ ಟೆಸ್ಟ್ ಪಂದ್ಯವಾಗಲಿದೆ. ಈ ಹಿಂದೆ ಆಡಿದ 19 ಟೆಸ್ಟ್‌ಗಳಲ್ಲಿ ಭಾರತ 11 ರಲ್ಲಿ ಗೆದ್ದಿದ್ದರೆ, ದಕ್ಷಿಣ ಆಫ್ರಿಕಾ ಐದು ಪಂದ್ಯಗಳನ್ನು ಗೆದ್ದಿದೆ. ಮೂರು ಟೆಸ್ಟ್‌ಗಳು ಡ್ರಾದಲ್ಲಿ ಕೊನೆಗೊಂಡಿವೆ.




# 159 ರನ್‌ಗಳಿಗೆ ಆಫ್ರಿಕಾ ಆಲೌಟ್, ಭಾರತಕ್ಕೆ ಆರಂಭಿಕ ಆಘಾತ

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಕೋಲ್ಕತ್ತಾ ಟೆಸ್ಟ್ ಪಂದ್ಯದ ಮೊದಲ ದಿನದಾಟ ಮುಕ್ತಾಯಗೊಂಡಿದೆ. ದಕ್ಷಿಣ ಆಫ್ರಿಕಾವನ್ನು 159 ರನ್‌ಗಳಿಗದೆ ಆಲೌಟ್ ಮಾಡಿದ್ದ ಆತಿಥೇಯರು ತಮ್ಮ ಮೊದಲ ಇನ್ನಿಂಗ್ಸ್‌ನಲ್ಲಿ ಮೊದಲ ದಿನದಾಟದಂತ್ಯಕ್ಕೆ ಒಂದು ವಿಕೆಟ್ ಕಳೆದುಕೊಂಡು 37 ರನ್‌ಗಳಿಸಿದ್ದಾರೆ. ತಂಡದ ಪರ ಕೆಎಲ್ ರಾಹುಲ್ 13 ರನ್ ಮತ್ತು ವಾಷಿಂಗ್ಟನ್ ಸುಂದರ್ ಆರು ರನ್‌ಗಳಿಸಿ ಎರಡನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಭಾರತ ಪ್ರಸ್ತುತ ದಕ್ಷಿಣ ಆಫ್ರಿಕಾಕ್ಕಿಂತ 122 ರನ್‌ಗಳ ಹಿಂದಿದೆ.

**ಭಾರತಕ್ಕೆ ಆರಂಭಿಕ ಆಘಾತ:** ಆಫ್ರಿಕಾ ತಂಡವನ್ನು 155 ರನ್‌ಗಳಿಗೆ ಆಲೌಟ್ ಮಾಡಿ ಮೊದಲ ಇನ್ನಿಂಗ್ಸ್ ಆರಂಭಿಸಿದ ಭಾರತಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಆರಂಭಿಕ ಯಶಸ್ವಿ ಜೈಸ್ವಾಲ್ (17 ಎಸೆತಗಳಲ್ಲಿ 12) ಬಹುಬೇಗನೇ ಔಟಾದರು. ಹೀಗಾಗಿ ಭಾರತ 18 ರನ್‌ಗಳಿಗೆ ತನ್ನ ಮೊದಲ ವಿಕೆಟ್ ಕಳೆದುಕೊಂಡಿತು. ಆ ಬಳಿಕ ರಾಹುಲ್ ಜತೆಯಾದ ವಾಷಿಂಗ್ಟನ್ ಸುಂದರ್ ತಾಳ್ಮೆಯ ಬ್ಯಾಟಿಂಗ್ ಮಾಡಿ ಆಫ್ರಿಕಾ ತಂಡಕ್ಕೆ ಯಾವುದೇ ವಿಕೆಟ್ ಪಡೆಯಲು ಅವಕಾಶ ಮಾಡಿಕೊಡಲಿಲ್ಲ. ಮೊದಲ ದಿನ ಅಜೇಯರಾಗಿ ಉಳಿದಿರುವ ಇವರಿಬ್ಬರು ಎರಡನೇ ದಿನ ಬಿಗ್ ಇನ್ನಿಂಗ್ಸ್ ಆಡಿದರೆ, ಈ ಪಂದ್ಯದಲ್ಲಿ ಭಾರತದ ಗೆಲುವು ಬಹುತೇಕ ಖಚಿತವಾಗಲಿದೆ.

**5 ವಿಕೆಟ್ ಕಬಳಿಸಿದ ಬುಮ್ರಾ:** ಈ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ನಾಯಕ ತೆಂಬ ಬವುಮಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಲು ಆಯ್ಕೆ ಮಾಡಿಕೊಂಡರು. ಹೀಗಾಗಿ ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 159 ರನ್‌ಗಳಿಗೆ ಆಲೌಟ್ ಆಯಿತು. ಭಾರತ ಪರ ಜಸ್ಪ್ರೀತ್ ಬುಮ್ರಾ ಅತ್ಯಧಿಕ ಐದು ವಿಕೆಟ್‌ಗಳನ್ನು ಪಡೆದರು. ಬುಮ್ರಾ ಮೊದಲ ಇನ್ನಿಂಗ್ಸ್‌ನಲ್ಲಿ 14 ಓವರ್‌ಗಳನ್ನು ಬಿಟ್ಟುಕೊಟ್ಟು 27 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಬಳಿಸಿದರು. ಉಳಿದಂತೆ ಕುಲ್ದೀಪ್ ಯಾದವ್ ಮತ್ತು ಮೊಹಮ್ಮದ್ ಸಿರಾಜ್ ತಲಾ ಎರಡು ವಿಕೆಟ್‌ಗಳನ್ನು ಪಡೆದರೆ, ಅಕ್ಷರ್ ಪಟೇಲ್ ಒಂದು ವಿಕೆಟ್ ಪಡೆದರು.

**ಒಂದೇ ಒಂದು ಅರ್ಧಶತಕವಿಲ್ಲ:** ದಕ್ಷಿಣ ಆಫ್ರಿಕಾ ಪರ ಏಡೆನ್ ಮಾರ್ಕ್ರಾಮ್ (31) ಗರಿಷ್ಠ ಸ್ಕೋರರ್ ಎನಿಸಿಕೊಂಡರೆ, ರಿಯಾನ್ ರಿಕಲ್ಟನ್ 23 ರನ್ ಗಳಿಸಿದರು. ಟೋನಿ ಡಿ ಜೋರ್ಜಿ ಮತ್ತು ವಿಯಾನ್ ಮುಲ್ಡರ್ ತಲಾ 24 ರನ್ ಬಾರಿಸಿದರು. ನಾಯಕ ಟೆಂಬಾ ಬವುಮಾ (3) ಸೇರಿದಂತೆ ಐದು ಆಟಗಾರರು ಎರಡಂಕಿ ತಲುಪಲು ವಿಫಲರಾದರು. ಹೀಗಾಗಿ ಊಟದ ವಿರಾಮದ ವೇಳೆಗೆ ಆಫ್ರಿಕಾ ತಂಡ ಮೂರು ವಿಕೆಟ್ ಕಳೆದುಕೊಂಡಿತು. ನಂತರ ಎರಡನೇ ಸೆಷನ್‌ನಲ್ಲಿಯೂ ನಿಯಮಿತ ಅಂತರದಲ್ಲಿ ವಿಕೆಟ್ ಕಳೆದುಕೊಂಡ ಆಫ್ರಿಕಾ ಐದು ವಿಕೆಟ್ ಕಳೆದುಕೊಂಡಿತು. ಅಂತಿಮವಾಗಿ ಮೂರನೇ ಸೆಷನ್‌ನ ಆರಂಭದಲ್ಲಿಯೇ ಆಫ್ರಿಕಾ ತಂಡ ಉಳಿದ 2 ವಿಕೆಟ್‌ಗಳನ್ನು ಕಳೆದುಕೊಂಡು ಆಲೌಟ್ ಆಯಿತು.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**